
ರಂಜನೆ ಬೋಧನೆ ಪ್ರಬೋಧನೆ
ಲಂಕೇಶ್
07 ಡಿಸೆಂಬರ್ 2016 ಸಂಚಿಕೆ 20 ರೂ.15/-


ಅರೆಭಾಷೆ ಗೌಡರು ಮತ್ತು ಇತಿಹಾಸ



ಹೆಗ್ಗನಹಳ್ಳಿಯ ಲೇಡಿ ಡಾನ್



ಕುಂದಾಪುರ: ಗಂಜಿ ಕೇಂದ್ರದತ್ತ ಕೂರ್ಗಿ ಹೆಗ್ಡೆ ಹಾಲಾಡಿ ಶೆಟ್ಟಿ!!



ಕೊಪ್ಪಳ: ...ಲ್ದೋಟ್ ಕಂಪನಿಯ ಪ್ರಾಣಮಿತ್ರ ದರ್ಬಾರ್








ಮೈಸೂರು ಮೇಯರ್‌ಗಿರಿ: ಈ ಬಾರಿ ಮೇಯೋರು ಯಾರು?

ರಾಯಚೂರು ಬೀದಿಗೆ ಬಂತು 'ಕೈ'ಯೊಳಗಿನ ಕಾದಾಟ





ಬುದ್ಧಿಜೀವಿಗಳು ಮತ್ತು ಮಠಾಧೀಶರ



ಸಿದ್ಧಾರ್ಥ ಜ್ಞಾನೋದಯವಾಗಿ ಗೌತಮಬುದ್ಧನಾದ ಮೇಲೆ ಅಲ್ಲಿ ಇಲ್ಲಿ ಸಂಚರಿಸುತ್ತಾ ಹೊಲ ಉಳುತ್ತಿರುವ ಬ್ರಾಹ್ಮಣನೊಬ್ಬನನ್ನು ಅನ್ನಕ್ಕಾಗಿ ಯಾಚಿಸುತ್ತಾನೆ. ಶ್ರಮಪಟ್ಟು ದುಡಿದು ಅನ್ನ ತಿನ್ನುತ್ತಿರುವ ತಾನು, ಏನೂ ಮಾಡದೆ ಭಿಕ್ಷೆ ಯಾಚಿಸುತ್ತಿರುವ ಬುದ್ಧನಿಗೆ ಯಾಕೆ ಅನ್ನ ನೀಡಬೇಕೆಂದು ಆ ಬ್ರಾಹ್ಮಣ ಬುದ್ಧನನ್ನು ನೇರವಾಗಿ ಕೇಳುತ್ತಾನೆ. ಬುದ್ಧ ತಾನೂ ಶ್ರಮಪಡುತ್ತಿದ್ದೇನೆಂದೂ, ದೈಹಿಕ ಶ್ರಮದಲ್ಲಿ ತನ್ನನ್ನು ತೊಡಗಿಸಿಕೊಂಡ ಬ್ರಾಹ್ಮಣ ತಾನು ಉಣ್ಣುವುದಲ್ಲದೆ ಸಮಾಜಕ್ಕೂ ಉಪಕಾರಿಯಾಗಿರುವಂತೆ ತನ್ನನ್ನು ಬೌದ್ಧಿಕ ಶ್ರಮದಲ್ಲಿ ತೊಡಗಿಸಿಕೊಂಡು ಜ್ಞಾನವನ್ನು ಹಂಚುವ ಮೂಲಕ ಸಮಾಜಕ್ಕೆ ಉಪಕಾರಿಯಾಗಿರುವೆನೆಂದು, ಆದ್ದರಿಂದ ತಾನೂ ಅನ್ನ ಪಡೆಯಲು ಅರ್ಹನೆಂದು ತನ್ನ ಯಾಚನೆಯನ್ನು ಬುದ್ಧನು ಸಮರ್ಥಿಸಿಕೊಳ್ಳುತ್ತಾನೆ. ಗೌತಮ ಬುದ್ಧ ಭಾರತದ ಚರಿತ್ರೆಯಲ್ಲಿ ಗಮನಾರ್ಹ ಸ್ಥಾನ ಪಡೆದಿರುವ ಜ್ಞಾನಜೀವಿ ಅಥವಾ ಆಧುನಿಕ ಪರಿಭಾಷೆಯಲ್ಲಿ ಹೇಳುವ ಬುದ್ಧಿಜೀವಿ.

ಬುದ್ಧನಿಗೂ ಮೊದಲಿದ್ದ ವೈದಿಕ ಸಮಾಜದ ಜ್ಞಾನಜೀವಿಗಳು ಅರಣ್ಯವಾಸಿಗಳಾಗಿ ಬದುಕುತ್ತಾ ಜ್ಞಾನಾರ್ಜನೆ ಮತ್ತು ಜ್ಞಾನಪ್ರಸರಣದಲ್ಲಿ ತೊಡಗಿದ್ದ ಸನಾತನ ಬುದ್ಧಿಜೀವಿಗಳು. ಅವರು ತಮ್ಮ ಅಧ್ಯಯನ, ಚಿಂತನೆ ಮತ್ತು ಅನ್ವೇಷಣೆಗಳ ಮೂಲಕ ಪಡೆದ ತಿಳಿವನ್ನು ಅವರ ಬಳಿಗೆ ಬಂದ ಜ್ಞಾನದಾಹಿಗಳೊಂದಿಗೆ ಉಚಿತ ರೀತಿಯಲ್ಲಿ ಹಂಚಿಕೊಳ್ಳುತ್ತಿದ್ದರು. ಅವರ ದೈನಂದಿನ ಜೀವನ ನಿರ್ವಹಣೆಗೆ ಅರಣ್ಯದ ಉತ್ಪನ್ನಗಳ ಸಂಗ್ರಹಣೆ, ಸೀಮಿತ ಮಟ್ಟದ ಕೃಷಿ, ಪಶುಸಂಗೋಪನೆಗಳನ್ನಲ್ಲದೆ ಹತ್ತಿರದ ರಾಜರು ಕೊಡಮಾಡುತ್ತಿದ್ದ ಧನ-ಧಾನ್ಯ ಸಹಾಯವನ್ನು ನೆಚ್ಚಿದ್ದರು. ಅಂದಿನ ನಗರವಾಸಿಗಳಿಗೆ ಹೋಲಿಸಿದರೆ ಕನಿಷ್ಠ ತಮ್ಮ ಜೀವನಾಗತ್ಯಗಳ ಪೂರೈಕೆಯಿಂದ ನಡೆಸಬಹುದಾದ ಸರಳ ಜೀವನವನ್ನು ನಡೆಸುತ್ತಿದ್ದರು. ಇಂದಿನ ಆದಿವಾಸಿ ಜನರಂತೆ ಬಂಡೆಗಲ್ಲುಗಳ ನಡುವಿನ ಗುಹೆ, ಅರಣ್ಯಜನ್ಯವಸ್ತುಗಳಿಂದ ನಿರ್ಮಿಸಿದ ಎಲೆಮನೆಗಳು, ಜೋಪಡಿ, ಕುಟೀರ ಮುಂತಾಗಿ ತಾವೇ ನಿರ್ಮಿಸಿಕೊಂಡ ವಾಸಸ್ಥಳಗಳಲ್ಲಿ ತಮ್ಮ ಕಾಯಕವನ್ನು ನಡೆಸುತ್ತಿದ್ದರು. ಹೆಂಡತಿ, ಮಕ್ಕಳು, ಶಿಷ್ಯರ ಯೋಗಕ್ಷೇಮದ, ಅತಿಥಿ-ಅಭ್ಯಾಗತರನ್ನು ಸತ್ಕರಿಸುವ ಹೊಣೆಹೊತ್ತ ಸಾಂಸಾರಿಕರಾಗಿದ್ದರು.

ನಗರವಾಸಿಗಳಾದ ಉಚ್ಚ ವರ್ಣದ ಜನರು ಎಂಟು ವರ್ಷಕ್ಕೆ ವಟುಗಳಾಗಿ ಪ್ರಾರಂಭಿಸಿ 12 ವರ್ಷಗಳ ಕಾಲ ಗುರುಕುಲದಲ್ಲಿ ವಿದ್ಯಾರ್ಜನೆ ಮಾಡುವಾಗ ಬ್ರಹ್ಮಚಾರಿಗಳೆಂದು ಕರೆಸಿಕೊಳ್ಳುತ್ತಿದ್ದರು. ವಿದ್ಯಾಭ್ಯಾಸ ಮುಗಿಸಿ ಸ್ನಾತಕರಾಗಿ ಕುಟುಂಬ ನಿರ್ವಹಣೆ, ಸಂತಾನವನ್ನು ಮುಂದುವರೆಸುವ ಜವಾಬ್ದಾರಿಯನ್ನು ಹೊತ್ತಾಗ ಸಂಸಾರಿಗಳೆಂದು ಗುರುತಿಸಿಕೊಳ್ಳುತ್ತಿದ್ದರು. ಇಳಿವಯಸ್ಸಿನಲ್ಲಿ ಕುಟುಂಬದ ಜವಾಬ್ದಾರಿಗಳನ್ನು ನಿರ್ವಹಿಸಿ ಸಾಕಾದಮೇಲೆ ಆಸ್ತಿ ಹಕ್ಕು ಮತ್ತು ಹಣದ ವಹಿವಾಟಿನ ಜವಾಬ್ದಾರಿಗಳನ್ನು ಹಿರಿಯ ಮಕ್ಕಳಿಗೆ ವಹಿಸಿ ಕಾಡಿನಲ್ಲಿ ವಾಸಿಸುವಾಗ ವಾನಪ್ರಸ್ಥರೆನಿಸಿಕೊಳ್ಳುತ್ತಿದ್ದರು. ಸಾವಿಗೆ ಹತ್ತಿರವಾಗಿ ಜೀವಿಸುತ್ತಾ ಆಯುಷ್ಯ ಕ್ಷೀಣಿಸಿ 'ಸಾಯುವ ಸ್ಥಿತಿ' ತಲುಪಿ ಬದುಕಿನ ಬವಣೆಗಳಿಂದ ಬಿಡುಗಡೆ ಪಡೆದಾಗ 'ಸಂನ್ಯಾಸಿ' ಎನಿಸಿಕೊಳ್ಳುತ್ತಿದ್ದರು. ಹೀಗೆ ಗುರುತಿಸುವ ನಾಲ್ಕು ಬಗೆಯ ಜೀವನಕ್ರಮಗಳನ್ನು 'ಆಶ್ರಮಗಳು' ಎನ್ನುತ್ತಿದ್ದರು.

ಆಧುನಿಕ ಕಾಲದಲ್ಲಿ 7 ನೇ ವಯಸ್ಸಿನಲ್ಲಿ ಶಾಲೆಗೆ ಸೇರುವುದರಿಂದ ಪ್ರಾರಂಭಿಸಿ 10+02+03 ರ 15 ವರ್ಷಗಳ ಶಿಕ್ಷಣ ಪಡೆಯುವುದು ಮೊದಲ ಹಂತ. ಉದ್ಯೋಗದ ಹಂತ ಎರಡನೆಯದು. ನಿವೃತ್ತಿ ಮೂರನೆಯ ಹಂತ. ಈ ಮೂರು ಹಂತಗಳು ಸನಾತನ ಹಿಂದೂ ಜೀವನ ಕ್ರಮದ ಮೊದಲ ಮೂರು ಆಶ್ರಮಗಳಿಗೆ ಸಂವಾದಿಯಾಗಿವೆ.

ಸ್ನಾತಕೋತ್ತರ ಅಧ್ಯಯನ, ಪದವಿಗಳು, ನಿವೃತ್ತಿಯಾದ ನಂತರವೂ ಜನರು ಕೈಗೊಳ್ಳುವ ವಿವಿಧ ಉದ್ಯೋಗಗಳು ಆಧುನಿಕ ಸಮಾಜದ ಜೀವನಕ್ರಮಗಳಿಗೆ ಸೇರ್ಪಡೆಯಾದ ಈಚಿನ ಬೆಳವಣಿಗೆಗಳು. ವಟು ಎಂದರೆ ಜುಟ್ಟು-ಜನಿವಾರಗಳನ್ನು ಧರಿಸಿ ಸಂಸ್ಕೃತ ಕಲಿಯುವ ಬಾಲಕನೆಂದು (ಬಾಲಕಿಗೆ ಇಂಥ ಸೌಕರ್ಯವಿಲ್ಲ), ಬ್ರಹ್ಮಚಾರಿಯೆಂದರೆ ಮದುವೆಯಾಗದ-ಮದುವೆಯೊಲ್ಲದ ಒಂಟಿ ಬದುಕಿನ ಮನುಷ್ಯರೆಂದು, ಸಂನ್ಯಾಸಿಯೆಂದರೆ ಸಾಂಸಾರಿಕ ಜವಾಬ್ದಾರಿಗಳನ್ನು ಹೊರಲೊಲ್ಲದೆ ಅಥವಾ ಕಳಚಿಕೊಂಡು, ಲೈಂಗಿಕ ಬಯಕೆಗಳಿಂದ ಮುಕ್ತವಾಗಿ, ಕಾವಿಧಾರಿಯಾಗಿ ಮೋಕ್ಷವನ್ನು ಬಯಸುತ್ತಾ, ಸಾಂಕೇತಿಕವಾಗಿ 'ಸತ್ತು' ಲೋಕ ಕಲ್ಯಾಣಕ್ಕಾಗಿ ಜೀವಿಸುವ ಸರಳಜೀವಿಗಳೆಂದು ಅರ್ಥಾಂತರವಾಗಿದೆ. ಸಂನ್ಯಾಸಿಯಾಗುವುದೆಂದರೆ ಸಾಂಕೇತಿಕವಾಗಿ ಸತ್ತು ತನ್ನ ಶ್ರಾದ್ಧವನ್ನು ತಾನೇ ಮಾಡಿಕೊಂಡು, ಹಳೆಯ ಸಂಬಂಧಗಳನ್ನು ಮುರಿದುಕೊಂಡು, ಹೊಸ ಜನ್ಮವನ್ನು ಪಡೆದು, ಹೊಸ ಹೆಸರನ್ನು ಪಡೆಯುವ ವೈಧಾನಿಕ ಕ್ರಮವನ್ನು ಅನುಸರಿಸುವುದು. ವೈದಿಕ ಪದ್ಧತಿಗಳನ್ನು ಅನುಸರಿಸುತ್ತಿದ್ದ ಸನಾತನ ಸಮಾಜದಲ್ಲಿ ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ ಮತ್ತು ಸಂನ್ಯಾಸಗಳೆಂಬ ನಾಲ್ಕು ಜೀವನ ವಿಧಾನಗಳನ್ನು ಗುರುತಿಸಲು ಬಳಕೆಯಾಗುತ್ತಿದ್ದ 'ಆಶ್ರಮ' ಪದದ ಅರ್ಥ, ಆಧುನಿಕ ಕಾಲದ ಸಾಧು-ಸನ್ಯಾಸಿಗಳು ಜೀವಿಸುವ ಸ್ಥಳವೆಂದು ಅರ್ಥಾಂತರವಾಗಿದೆ. ಹಿಂದಿನಂತೆ ಪ್ರಾಣಿ-ಪಕ್ಷಿಗಳು ಸಂಚರಿಸುವ ಅರಣ್ಯಗಳಲ್ಲಿ ಆಶ್ರಮ ಕಟ್ಟಿಕೊಂಡು ಜೀವಿಸುವ ಬದಲು, ತಾವಿರುವ ಪ್ರದೇಶಗಳಲ್ಲಿಯೇ ಮರಗಿಡಗಳನ್ನು ಬೆಳೆಸುವುದು, ಪ್ರಾಣಿ-ಪಕ್ಷಿಗಳನ್ನು ತಂದು ಸಾಕುವುದು ಮುಂತಾದ ಕೃತಕ ವಿಧಾನಗಳಲ್ಲಿ ಅರಣ್ಯದಂತೆ ತೋರುವ ಪರಿಸರದ ಆಶ್ರಮವನ್ನು ನಿರ್ಮಿಸಿಕೊಳ್ಳುವ ವಿಧಾನ ಬಳಕೆಗೆ ಬಂದಿದೆ. ಮನೆಮನೆಗೆ ಹೋಗಿ ಭಿಕ್ಷೆ ಬೇಡಿ ಆಹಾರವನ್ನು ಸಂಪಾದಿಸಿಕೊಳ್ಳುವುದರ ಬದಲು, 'ಭಿಕ್ಷೆ' ಕೊಡುವವರೇ ಆಶ್ರಮಕ್ಕೆ ಬಂದು ಆಹಾರಕ್ಕಾಗಿ ಏರ್ಪಾಟು ಮಾಡುವುದು, ಅಥವಾ ಅದರ ವೆಚ್ಚಕ್ಕಾಗಿ ದಾನ-ಧರ್ಮದ ರೂಪದಲ್ಲಿ ಧನ-ಧಾನ್ಯಗಳನ್ನು ಕೊಡುವುದು ಈ ಕಾಲದಲ್ಲಿ ಜಾರಿಯಲ್ಲಿರುವ ಕ್ರಮ.

ವೈದಿಕ ಸಮಾಜದಲ್ಲಿ ಋಷಿ-ಮುನಿ ಎಂಬ ಪದಗಳಿಗೆ ವರ್ಣ, ಜಾತಿ, ಮತ, ಸಿದ್ಧಾಂತ ಅಥವಾ ಜ್ಞಾನಶಾಖೆಗಳ ನಿರ್ದಿಷ್ಟ ಕಟ್ಟುಪಾಡುಗಳಾಗಲಿ, ಆಹಾರ-ಪಾನೀಯ ಪದ್ಧತಿಯ ನಿರ್ಬಂಧ, ಮಡಿವಂತಿಗೆಗಳಾಗಲಿ ಇರಲಿಲ್ಲ. ವೇದಾಂತ ಮೂಲದ ಚಿಂತನೆ-ಪ್ರತಿಪಾದನೆ ಮಾಡಿದ ವಸಿಷ್ಠ-ವಿಶ್ವಾಮಿತ್ರ-ವ್ಯಾಸರು ಋಷಿಗಳು. ಕಾಮಸೂತ್ರವನ್ನು ರಚಿಸಿದ ವಾತ್ಸಾಯನನೂ ಋಷಿಯೇ. ಕಾಡಿನಲ್ಲಿ ಸಿಗುತ್ತಿದ್ದ ಕಂದಮೂಲಗಳನ್ನು, ಹಣ್ಣು-ಹಂಪಲುಗಳನ್ನು ತಿಂದು ಜೀವಿಸುತ್ತಿದ್ದ ತಾಪಸಿಗಳೂ ಋಷಿಗಳೇ. ಆಡಿನ ರೂಪದಲ್ಲಿದ್ದ ವಾತಾಪಿಯನ್ನು ತಿಂದು ಜೀರ್ಣಿಸಿಕೊಂಡ ಅಗಸ್ತ್ಯನೂ ಋಷಿಯೇ. ಮೃಚ್ಛಕಟಿಕದಲ್ಲಿ ಕಳ್ಳನ ಪಾಲಿಗೆ ತಾನು ಕನ್ನ ಕೊರೆಯುವ ಮುಂಚೆ ನೆನೆದು ವಂದಿಸುವ ತನ್ನ ಗುರು ತಸ್ಕರಾಚಾರ್ಯನೂ ಋಷಿಯೇ.

ವೈದಿಕ ಧರ್ಮಕ್ಕೆ ಆಧಾರಸ್ತಂಭವೆನಿಸಿರುವ ತತ್ವ, ತರ್ಕ, ವಿಚಾರ, ವಾದಗಳನ್ನು ಮಂಡಿಸುವ ಪ್ರಾಚೀನ ಗ್ರಂಥಗಳನ್ನು, ಕಾವ್ಯ ಪುರಾಣಗಳನ್ನು ರಚಿಸಿದರೆಂದು ಹೇಳಲಾಗುವ ಯಾವೊಬ್ಬ ಋಷಿ-ಮುನಿಯೂ ಆಧುನಿಕ ಕಾಲದ ಅರ್ಥದಲ್ಲಿ ಬ್ರಾಹ್ಮಣ ಜಾತಿಗೆ ಸೇರಿದವರಲ್ಲ. ಬ್ರಾಹ್ಮಣರೆಂದರೆ ಸತ್ಯ ಹೇಳುವವರು, ಸರಳ ಜೀವನ ನಡೆಸುವವರು, ದಯೆಯುಳ್ಳವರು ಮತ್ತು ಬ್ರಹ್ಮಜ್ಞಾನವನ್ನು ತಿಳಿದವರು, ಅಭ್ಯಸಿಸುವವರು ಎಂಬ ವಿವರಣೆ ಮಹಾಭಾರತದಲ್ಲಿ ಸಿಗುತ್ತದೆ. ಬ್ರಾಹ್ಮಣ ಎಂಬ ಪದ ಈ ಅರ್ಥದಲ್ಲಿ ಆಧುನಿಕ ಕಾಲದಲ್ಲಿ ಬಳಕೆಯಾಗುತ್ತಿಲ್ಲ. ಬ್ರಾಹ್ಮಣ ಎಂದರೆ ಕನಿಷ್ಠ ಜನಿವಾರ ಧರಿಸಿದ ವ್ಯಕ್ತಿಯ ಜಾತಿಸೂಚಕ ಪದ ಅಷ್ಟೆ.

ಬುದ್ಧನಿಗೂ ಹಿಂದೆ ವೈದಿಕಧರ್ಮದಲ್ಲಿ ಯಾವ ವಯಸ್ಸಿನಲ್ಲಿ ಯಾರು ಬೇಕಾದರೂ ಸನ್ಯಾಸಿಯಾಗುವ ಸೌಲಭ್ಯ ಇದ್ದಂತೆ ತೋರುವುದಿಲ್ಲ, ಬಾಲ ಸನ್ಯಾಸಿಗಳಂತೂ ಇರಲೇ ಇಲ್ಲ. ಬುದ್ಧನ ಉಪದೇಶದಿಂದ ಆಕರ್ಷಿತರಾಗಿ ಸನ್ಯಾಸಿಯಾದವರಿಂದ ಹಿಡಿದು, ಜೀವನದ ವೈಫಲ್ಯಗಳನ್ನು ಎದುರಿಸಲಾರದೆ ಹೊಣೆಗಾರಿಕೆಯಿಂದ ಪಲಾಯನ ಮಾಡಿದವರು, ಸಾಲ ತೀರಿಸಲಾಗದೆ ತಪ್ಪಿಸಿಕೊಂಡು ಸಂಘದ ಆಶ್ರಯ ಪಡೆದು ಸನ್ಯಾಸಿಗಳಾಗಿ ಬದುಕುತ್ತಿದ್ದವರ ವರೆಗೆ ನಾನಾ ಕಾರಣಗಳಿಗಾಗಿ ಬೌದ್ಧಭಿಕ್ಷುಗಳಾದ ಜನರು ಬುದ್ಧನ ಅನುಯಾಯಿಗಳಾಗಿದ್ದರು ಎಂದರೆ ಉತ್ಪ್ರೇಕ್ಷೆಯಾಗದು. ಬುದ್ಧ ಬಿಕ್ಷುಗಳು ಸಾಂಘಿಕವಾಗಿ ತಂಗಲು ಅನುವಾಗುವಂತೆ ಬೌದ್ಧವಿಹಾರಗಳನ್ನು ಬೌದ್ಧಮತದ ಅನುಯಾಯಿಗಳಾದ ರಾಜಮಹಾರಾಜರು ಕಟ್ಟಿಸಿಕೊಡುವುದಲ್ಲದೆ ದತ್ತಿಗಳನ್ನೂ ಕೊಡಮಾಡಿದರು.

ಒಂದು ಕಾಲದಲ್ಲಿ ಅಸ್ಪೃಶ್ಯತೆಯ ಆಚರಣೆಗಾಗಿ ಕುಪ್ರಸಿದ್ಧವಾಗಿದ್ದ ಕೇರಳದ ನಂಬೂದರಿ ಬ್ರಾಹ್ಮಣ ಪಂಗಡಕ್ಕೆ ಸೇರಿದ ಶಂಕರಾಚಾರ್ಯರು ನಮಗೆ ಗೊತ್ತಿರುವ ಮೊದಲ ಬಾಲ ಸನ್ಯಾಸಿ. ಎಂಟು ವರ್ಷಕ್ಕೇ (ವಟುವಾಗುವ ಬದಲು) ಜ್ಞಾನಸಿಂಧುವಾದ ಸನ್ಯಾಸಿಯಾದನೆಂದು ಹೇಳಲಾಗುವ ಅಸಾಮಾನ್ಯ ಪ್ರತಿಭೆಯ ಈ ಬಾಲಕ ತನ್ನ ಎಂಟನೆಯ ವರ್ಷದಲ್ಲಿ ಮೊಸಳೆಗೆ ಬಲಿಯಾಗಿ 'ಸತ್ತು' 'ಸಂನ್ಯಾಸಿ'ಯೆನಿಸಿದ ಮಿತ್ ಇದಕ್ಕೆ ಆಧಾರವೋ ಎಂದು ನಿರ್ಣಯಿಸುವುದು ಈಗ ಸಾಧ್ಯವಿಲ್ಲ. ಆದರೆ ಪ್ರತಿವಾದಿಗಳಿಂದ 'ಪ್ರಚ್ಛನ್ನ ಬೌದ್ಧ'ರೆಂದು ಕರೆಸಿಕೊಂಡ ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ಸ್ಥಾಪಿಸಿದರೆಂದು ಹೇಳಲಾಗುವ 'ಮಠ'ಗಳು, ಬೌದ್ಧವಿಹಾರಗಳ ಮಾದರಿಯನ್ನು ಅನುಸರಿಸಿ ಕಟ್ಟಿದವುಗಳು ಎಂಬುದು ಇಲ್ಲಿ ಪ್ರಸ್ತುತ. ತಾತ್ವಿಕವಾಗಿ ಎಲ್ಲಾ ಭೇದಗಳನ್ನು ನಿರಾಕರಿಸುವ ಅದ್ವೈತಮತವನ್ನು ಪ್ರಚುರಪಡಿಸುವ ಉದ್ದೇಶಕ್ಕಾಗಿ ಸ್ಥಾಪಿಸಿದ ಈ ಮಠಗಳು ಇಂದು ಶಿಷ್ಯಕೋಟಿಯ ನೆಪವೊಡ್ಡಿ ಪೂಜೆ-ಪುನಸ್ಕಾರ, ಯಾಗ-ಹೋಮಗಳ ಮೂಢ ಕ್ರಿಯೆಗಳಲ್ಲಿ ಮುಳುಗಿ ಜಾತಿ ಆಧಾರಿತ ಉತ್ತಮಿಕೆಯ ಬ್ರಾಹ್ಮಣಿಕೆಯ ಮುದ್ರೆಯೊತ್ತುವ ಜಾತಿ ನೋಂದಣಿಯ ಧಾರ್ಮಿಕ ಕೇಂದ್ರಗಳಾಗಿವೆ.

ವೈಧಾನಿಕವಾಗಿ 'ಸಂನ್ಯಾಸ' ಪಡೆಯದೆಯೂ ಚತುರ



ಬುದ್ಧಿಜೀವಿಗಳಾದವರು ಯಾರು ಬೇಕಾದ
ಸಂತ, ಭೈರಾಗಿ, ಬಾಬಾ, ಅವಧೂತ, ಸ
ಎಂಬ ಹೆಸರಿಟ್ಟುಕೊಂಡು ಎಲ್ಲೋ ಕುಳಿತು
ಗಳಿಕೆಯಲ್ಲಿ ತಮ್ಮ ಶಕ್ತ್ಯಾನುಸಾರ ಸು
ಐಷಾರಾಮೀ ಜೀವನ ನಡೆಸಬಹುದಾದ
ಆಧುನಿಕ ಕಾಲದಲ್ಲಿದೆ. ಮೌಢ್ಯದಿಂದ ಹೊ
ಜನಸಾಮಾನ್ಯರ ಮಾನಸಿಕ ಅಸಮತೋಲನಗ
ಕಷ್ಟಗಳನ್ನು ನಗದೀಕರಿಸಿ ರಾಜ್ಯದ ಮುಖ್ಯಮ
ಹೆಚ್ಚಿನ ಅಧಿಕಾರ ಚಲಾಯಿಸುವ ಧಾರ್ಮಿ
'ಧರ್ಮಾಧಿಕಾರಿ'ಗಳು ಸನ್ಯಾಸಿಯಾಗದೆ
ಶ್ವೇತಾಂಬರಧಾರಿಯಾಗಿ ವೈರಾಗ್ಯ
ಕಂಗೊಳಿಸಬಹುದು. ಇಷ್ಟಾದರೂ,
ಬ್ರಾಹ್ಮಣರಲ್ಲದವರಿಗೆ ಸನ್ಯಾಸಿಯಾಗುವ
ಎಂದು ಹಿಂದೂ ಪುರೋಹಿತಶಾಹಿ ತಕರ
ಜಾತಿಯಿಂದ ಕಾಯಸ್ಥರಾದ 'ವೀರ ಸನ್ಯಾಸಿ' ವಿ
ಕಿರುಕುಳ ಕೊಟ್ಟರು. ಆಗ ಅವರು ಬ್ರಹ್ಮ
ಅಬ್ರಾಹ್ಮಣರ ಕೈಯಲ್ಲಿ, ಅದನ್ನು ಬ್ರಾಹ್ಮಣರು
ಪಡೆದುಕೊಂಡರಾದ್ದರಿಂದ ಜಾತಿ ಬ
ಪುರೋಹಿತರಿಗೆ ಸನ್ಯಾಸಕ್ಕೆ ಯಾರು ಯೋ
ಬಗ್ಗೆ ನಿರ್ಣಯಿಸುವ ಅಧಿಕಾರವೇ ಇಲ್ಲ ಎಂದ
ನೀಡಿದರು.

ಪಶ್ಚಿಮದ ಕ್ರೈಸ್ತ ಮಿಷಿನರಿಗಳ ಧಾ
ಕೇಂದ್ರಗಳ ಮಾದರಿಯನ್ನು ಅನುಸರಿಸಿ
ರಾಮಕೃಷ್ಣ ಮಠವನ್ನು ವಿವೇಕಾನಂದರು
ಕ್ರೈಸ್ತ ಮಿಷಿನರಿಗಳ ಕ್ರಿಸ್ತ ಮಠಗಳ ಮಾದರಿಯ
ಸೇವೆ ಮಾಡುವುದೆಂದರೆ ದೀನ-ದಲಿತ
ಮಾಡುವುದು ಎಂದು ಪ್ರತಿಪಾದಿಸುವ ರಾಮ
ಮುಖ್ಯಕೇಂದ್ರದ ಆಡಳಿತ ನಿಯಂತ್ರಣಕ್ಕೊಳ
ಮಾನ್ಯತೆ ಪಡೆದ ಮಠದ ಉಪಕೇಂದ್ರಗಳ
ಎಲ್ಲೆಡೆ, ವಿದೇಶಗಳಲ್ಲೂ ಸ್ಥಾಪಿತಗೊಂಡು ಜನ
ಹಣ ಸಂಗ್ರಹ, ಆಸ್ತಿ ಸಂಗ್ರಹ ಮಾಡುತ್ತಿವೆ. ಶಿಕ್ಷ
ವೈದ್ಯಕೀಯ ಸೇವೆ, ಸಂತ್ರಸ್ತರಿಗೆ ಪರಿಹಾರ
ಅಮೂರ್ತವಾದ ತತ್ವಾನ್ವೇಷಣೆಯನ್ನು ಸಾಮಾಜ
ವಿಸ್ತರಿಸುತ್ತಾ ಕಾಲಕ್ರಮೇಣ ಪರಿಷತ್ ಹಿಂದು
ಧಾರ್ಮಿಕ ಮತ್ತು ಸಾಂಸ್ಕೃತಿಕ ಪ್ರಚಾರ
ತಂದುಕೊಡುವಂಥ ಸೇವಾ ವ್ಯಾಪಾರದಲ್ಲಿ

ಇವನ್ನು ಅನುಸರಿಸಿ, ಸನಾತನವಾ
ದ್ವೈತಮತವನ್ನು ಪೋಷಿಸಿ ಪ್ರಚಾರಮಾಡುವ
ಬ್ರಾಹ್ಮಣ ಮಠಗಳು ಧರ್ಮಪ್ರಚಾರವೆಂದರೆ ವೈ
ಪ್ರಚಾರವೆಂದೂ, ಸಮಾಜದ ಸಾಂಸ್ಕೃತಿಕ ಉ
ಕೆಳಜಾತಿಗಳ ಬ್ರಾಹ್ಮಣೀಕರಣವೆಂದೂ ಗ್ರ
ವೈದ್ಯಕೀಯ ಸೇವೆ, ಬಡವರ ಉದ್ಧಾರದ ಹೆ
ಮಾಡಲು, ಆಸ್ತಿ ಸಂಗ್ರಹಿಸಿ, ಆರ್ಥಿಕವಾಗಿ ಬ
ಮಹಾರಾಷ್ಟ್ರದ ಚಿತ್ಪಾವನ ಬ್ರಾಹ್ಮಣ
ಸಂಘಟನೆಯಾಗಿ ಬ್ರಾಹ್ಮಣರ ಸಾಂಸ್ಕೃತಿಕ
ಅನ್ಯಕೋಮಿನ ದ್ವೇಷ ಮತ್ತು ಹಿಂದೂ ಐಕ್ಯತೆ
ರಾಜಕೀಯ ಅಧಿಕಾರಕ್ಕಾಗಿ ಕೆಲಸ
ಸಂಘಪರಿವಾರಕ್ಕೆ, ಮಠಮಾನ್ಯಗಳ ಈ
ವರದಾನದಂತೆ ಒದಗಿಬಂತು. ಹೀಗಾಗಿ ಎಲ್ಲಿ
ಧರ್ಮ, ಸಂಸ್ಕೃತಿ ಕೇಂದ್ರಿತ ಚಟುವಟಿಕೆಗಳು ನ
ಅಲ್ಲಿ ಸಂಘಪರಿವಾರ, ವ್ಯಾಪಾರಿ ಹಿತಾಸಕ್ತಿಯ
ತನ್ನ ರಾಜಕೀಯವನ್ನು, ಅದನ್ನು ಮುನ್ನೊತ್ತುವ
ಪ್ರತಿಷ್ಠಾಪಿಸುತ್ತಾ ಬಂದಿದೆ. ತನ್ನ ಹಿಂದೂತ್ವದ ಅ
ಗಟ್ಟಿಯಾಗಿ ನೆಲೆಗೊಳಿಸುತ್ತಾ ಬಂದಿದೆ.

ಬ್ರಾಹ್ಮಣ ಮಠಗಳನ್ನು ಅನುಸರಿಸಿ ಇತ
ಮಠಗಳು ಧಾರ್ಮಿಕ ಉತ್ಥಾನ ಮತ್ತು
ಹೆಸರಿನಲ್ಲಿ ರಾಜಕೀಯ ಮಾಡುತ್ತಿವೆ. ಕ
ಸರ್ಕಾರವನ್ನು ಅಧಿಕಾರಕ್ಕೆ ತರಬಲ್ಲಷ್ಟು-ಕೆಳಗ
ವೀರಶೈವ-ಲಿಂಗಾಯತ ಮಠಗಳು ಪಕ್ಷ
ಮೆದುಕೇಂದ್ರಗಳೂ ಆಗಿವೆ. ಸಂಘಪರಿವಾರ
ಮಹಾಸಭಾ, ವಿಶ್ವ ಹಿಂದೂ ಪರಿಷತ್
ಧಾರ್ಮಿಕ ಮುಖದ ರಾಜಕೀಯ ಸಂಘಟನೆ
ಜಾತಿಮತಗಳ ಮಠಾಧೀಶರು ಮತ್ತು ಮ
ಮುಖ್ಯಸ್ಥರು ಸಕ್ರಿಯರಾಗಿ ಭಾಗವಹಿಸಿಯ
ಮಾತೃಸಂಸ್ಥೆಯಾದ ರಾಷ್ಟ್ರೀಯ ಸೇವಾ ಸಂ
ಯಾವ ಸಂಬಂಧವೂ ಇಲ್ಲ ಎಂದು ಸುಳ್ಳು
'ನಾವು ಸಮಾನ ಮನಸ್ಕರು' ಎಂದು ರಾ
ಭಾಷೆಯಲ್ಲಿ, ಸುಳ್ಳು-ನಿಜಗಳ 'ಕಂದು ನೆಲೆ'ಯ
ನುಣುಚಿಕೊಳ್ಳುತ್ತಾರೆ.

ಟಿನಾ ದಾಬಿ ಮತ್ತು ಆಮೀರ್ ಖಾನ್‌ನ ಸಾಧನೆ ಮತ್ತು ಪ್ರೇಮ ಕತೆ




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

2015ರ ಸಾಲಿನ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದ ದಲಿತ ಯುವತಿ ಟಿನಾ ದಾಬಿ ವಿರುದ್ಧ ಮತ್ತೊಮ್ಮೆ ಕೋಮುವಾದಿಗಳು ಮತ್ತು ಜಾತಿವಾದಿಗಳು ಉರಿದು ಬೀಳುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಆಕೆಯನ್ನು ಇನ್ನಿಲ್ಲದಂತೆ ಲೇವಡಿ ಮಾಡುತ್ತಿದ್ದಾರೆ.

ನೆನಪಿದೆಯೇ, ಹಲವು ತಿಂಗಳುಗಳ ಹಿಂದೆ ಯುಪಿಎಸ್‌ಸಿ ಪರೀಕ್ಷೆಯ ಫಲಿತಾಂಶಗಳು ಹೊರಬಿದ್ದಾಗ ದೇಶದ ಪ್ರಜ್ಞಾವಂತರಿಗೆ ಸಂತೋಷವಾಗಿತ್ತು. ಯಾಕೆಂದರೆ ಕಳೆದ ಎಪ್ಪತ್ತು ವರ್ಷಗಳಲ್ಲಿ ಯಾವ ದಲಿತ ವ್ಯಕ್ತಿಯೂ ಈ ಪರೀಕ್ಷೆಗಳಲ್ಲಿ ಪ್ರಥಮ ಸ್ಥಾನ ಪಡೆದಿರಲಿಲ್ಲ. ಆ ಸಾಧನೆಯನ್ನು ಟಿನಾ ಮಾಡಿದ್ದಳು. ಬುದ್ಧಿವಂತೆಯೂ, ಸುಂದರಿಯೂ ಆದ ಟಿನಾ ಸೂಕ್ಷ್ಮಸಂವೇದನೆಯನ್ನು ಹೊಂದಿರುವ ಯುವತಿ. ಅಂತಹ ಯುವತಿಗೆ ಮುಜುಗರವಾಗುವಂತೆ, ಅವಮಾನವಾಗುವಂತೆ ಜಾತಿವಾದಿಗಳು ಆಕೆಯ ವಿರುದ್ಧ ಕೆಂಡಕಾರಿದ್ದರು. ಯಾಕೆಂದರೆ ಅವರ ಜಾತಿವಾದಿ ಮನಸ್ಸುಗಳಿಗೆ ದಲಿತ ಯುವತಿಯೊಬ್ಬಳು ಇಂತಹ ಸಾಧನೆಯನ್ನು ಮಾಡಿದ್ದು ಸಹಿಸಲಸಾಧ್ಯವಾಗಿತ್ತು.

ಎಲ್ಲರಿಗೂ ಗೊತ್ತಿರುವಂತೆ ಯುಪಿಎಸ್‌ಸಿ ಪರೀಕ್ಷೆಗಳು ಮೂರು ಹಂತಗಳಲ್ಲಿ ನಡೆಯುತ್ತವೆ. ಮೊದಲನೆಯದು 'ಪ್ರಿಲಿಮಿನರಿ' ಪರೀಕ್ಷೆಗಳು.



ಆಮೀರ್ ಖಾನ್ ಮತ್ತು ಟಿನಾ ದಾಬಿ

ಎರಡನೆಯದು 'ಮೇನ್' ಪರೀಕ್ಷೆಗಳು. ಮೂರನೆಯದು 'ಸಂದರ್ಶನ'ದ ಸುತ್ತು. ಮೊದಲನೆ ಹಂತದಲ್ಲಿ 'ಕಟ್ ಆಫ್' ಪಾಯಿಂಟ್ ಅಂತ ಇರುತ್ತೆ. ಅದು ಪ್ರತಿ ವರ್ಷ ಬದಲಾಗುತ್ತಿರುತ್ತದೆ. 2015ರಲ್ಲಿ 'ಪೇಪರ್ 1'ನಲ್ಲಿ ಜನರಲ್ ಕ್ಯಾಟಗರಿಗೆ ಕಟ್ ಆಫ್ ಪಾಯಿಂಟ್ ಇದ್ದದ್ದು 107.34 ಅಂಕಗಳು. ಆದರೆ ಮೀಸಲಾತಿ ವರ್ಗಕ್ಕೆ ಕಟ್ ಆಫ್ ಪಾಯಿಂಟ್ ಇದ್ದದ್ದು 94 ಅಂಕಗಳು. ಹಾಗೆಯೇ 'ಪೇಪರ್ 2'ನಲ್ಲಿ ಎಲ್ಲರಿಗೂ ಕಟ್ ಆಫ್ ಅಂತ ಇದ್ದದ್ದು 66 ಅಂಕಗಳು. ಮೊದಲನೆ ಸುತ್ತಿಗಿಂತ ಎರಡನೆ ಸುತ್ತು ಕಠಿಣವಾದದ್ದಾದ್ದರಿಂದ ಪರೀಕ್ಷೆಯಲ್ಲಿ ಪಾಸ್ ಆಗಲು ಬಯಸುವವರು ಹೆಚ್ಚಾಗಿ ಅದಕ್ಕೇ ಒತ್ತು ಕೊಡುತ್ತಾರೆ. ಟಿನಾ ಮಾಡಿದ್ದೂ ಅದನ್ನೇ. ಆಕೆ ಮೊದಲನೆ ಪ್ರಿಲಿಮಿನರಿ ಪರೀಕ್ಷೆಯಲ್ಲಿ ಮೀಸಲಾತಿ ವರ್ಗದಡಿ ಅರ್ಜಿಯನ್ನು ಸಲ್ಲಿಸಿದ್ದಳು. ಯಾಕೆಂದರೆ ಆಕೆಯ ಉದ್ದೇಶ ಹೇಗಿದ್ದರೂ ಅದರಲ್ಲಿ ಪಾಸ್ ಆಗುತ್ತೇನಾದ್ದರಿಂದ ಮೇನ್ ಪರೀಕ್ಷೆಯ ಸಿದ್ಧತೆಗೆ ಒತ್ತು ಕೊಡುವುದಾಗಿತ್ತು. ಆಕೆಗೆ 'ಪೇಪರ್ 1'ನಲ್ಲಿ ಬಂದದ್ದು 96 ಅಂಕಗಳು; 'ಪೇಪರ್ 2'ರಲ್ಲಿ ಸಿಕ್ಕದ್ದು 99 ಅಂಕಗಳು.

ಆದರೆ ಟಿನಾ ಮೇನ್ ಪರೀಕ್ಷೆಗಾಗಲಿ, ಸಂದರ್ಶನದ ಸುತ್ತಿಗಾಗಲಿ ಮೀಸಲಾತಿಯಡಿ ಅರ್ಜಿಯನ್ನು ಸಲ್ಲಿಸಲಿಲ್ಲ. ಯಾಕೆಂದರೆ ತನ್ನ ತಂದೆತಾಯಿ ಸಾಕ್ಷರಸ್ಥರಾಗಿದ್ದು ಮತ್ತು ತಾನು ಆರ್ಥಿಕವಾಗಿ ಮೇಲುವರ್ಗದ ಕುಟುಂಬದಿಂದ ಬಂದಿರುವುದರಿಂದ ಮೀಸಲಾತಿಯಡಿ ತನ್ನಷ್ಟು ಅದೃಷ್ಟವಂತರಲ್ಲದ ಇತರೆ ದಲಿತರು ಆ ಸೌಲಭ್ಯವನ್ನು ಪಡೆಯಲಿ ಎಂಬ ಆಶಯ ಆಕೆಯದಾಗಿತ್ತು.

'ಮೇನ್' ಪರೀಕ್ಷೆಯಲ್ಲಿ ಟಿನಾ ಪಡೆದದ್ದು 52 ಅಂಕಗಳನ್ನು. ಆಕೆಯ ನಂತರ ಎರಡನೆ ಸ್ಥಾನ ಪಡೆದಾತ ಗಳಿಸಿದ್ದು 45 ಅಂಕಗಳನ್ನು. ಹೀಗೆ ಟಿನಾಳಿಗೆ ಪ್ರಥಮ ಸ್ಥಾನ ಸಿಕ್ಕಿದ್ದು ಆಕೆಯ ಪ್ರತಿಭೆಯಿಂದಲೇ ಹೊರತು ಮೀಸಲಾತಿಯಿಂದಲ್ಲ.

ಆದರೇನಂತೆ, ಅದನ್ನು ಜಾತಿವಾದಿಗಳು ಸಹಿಸುತ್ತಾರೆಯೇ? ಅದ್ಯಾರೋ ಅಂಕಿತ ಶ್ರೀವಾಸ್ತವ ಎನ್ನುವವನು ಯುಪಿಎಸ್‌ಸಿ ಪ್ರಿಲಿಮಿನರಿ ಪರೀಕ್ಷೆಯಲ್ಲಿ ತಾನು ಒಟ್ಟಾರೆ 230 ಅಂಕಗಳನ್ನು ಗಳಿಸಿದ್ದರೂ ಪಾಸಾಗಲಿಲ್ಲ, ಆದರೆ ಕೇವಲ ಒಟ್ಟು 195 ಅಂಕಗಳನ್ನು ಗಳಿಸಿದ್ದ ಟಿನಾ ಪಾಸ್ ಆಗಿದ್ದಾಳೆ. ತನಗಾದ ಈ 'ಅನ್ಯಾಯ'ಕ್ಕೆ ತನ್ನಷ್ಟು ಪ್ರತಿಭಾವಂತೆಯಲ್ಲದ ಟಿನಾ ತರಹದವರು ಮುಂದೆ ಬರುವುದಕ್ಕೆ ಮೀಸಲಾತಿಯೇ ಕಾರಣ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಉರಿದುಕೊಂಡಿದ್ದ. ಹೇಗಿದ್ದರೂ ಇವತ್ತು ಸಾಮಾಜಿಕ ಜಾಲತಾಣಗಳಲ್ಲಿ ಮೇಲುಜಾತಿಗಳ ಜಾತಿವಾದಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಬಹು ಬೇಗ ಆತನ ಪೋಸ್ಟ್ ವೈರಲ್ ಆಗಿತ್ತು. ಅವರಲ್ಲಿ ಹೆಚ್ಚಿನವರು ಜಾತಿ ಆಧಾರದ ಬದಲಾಗಿ ಆರ್ಥಿಕ ಸ್ಥಿತಿಯ ಮೇಲೆ ಮೀಸಲಾತಿಯನ್ನು ನೀಡಬೇಕು ಎಂದೂ, ಮೀಸಲಾತಿಯಿಂದಾಗಿ ಪ್ರತಿಭಾವಂತರಿಗೆ ಅನ್ಯಾಯವಾಗುತ್ತಿದೆ ಎಂದೂ, ತಮ್ಮ ಪೂರ್ವಿಕರು ಮಾಡಿದ ತಪ್ಪುಗಳಿಗಾಗಿ ಇನ್ನೆಷ್ಟು ದಿನ ತಾವು ಇಂತಹ ಅನ್ಯಾಯವನ್ನು ಸಹಿಸಬೇಕು ಎಂದೂ, ಈ ದಲಿತರಿಗೆ ಮೀಸಲಾತಿ ಕೊಟ್ಟಿದ್ದು ಸಾಕು ಎಂದೂ ಮೈಕೈ ಪರಚಿಕೊಂಡಿದ್ದರು.

ಹಾಗೆಯೇ ಇನ್ನೊಬ್ಬ ಹಲವು ವರ್ಷಗಳ ಹಿಂದೆ ತಾನು ಟಿನಾಳಿಗಿಂತಲೂ ಹೆಚ್ಚು ಅಂಕಗಳನ್ನು ಪಡೆದಿದ್ದರೂ ಯುಪಿಎಸ್‌ಸಿ ತನ್ನನ್ನು ಆಯ್ಕೆ ಮಾಡಿರಲಿಲ್ಲ ಎಂದೂ ಗೋಳಾಡಿದ್ದ. ಆದರೆ ಪ್ರತಿ ವರ್ಷ ಕಟ್ ಆಫ್ ಮಾರ್ಕ್ಸ್ ಬದಲಾಗುತ್ತದೆ ಎಂಬುದನ್ನು ಹೇಳಲು ಆತ ಬೇಕಂತಲೇ ಮರೆತಿದ್ದ. ಆ ಸತ್ಯವೂ ಜಾತಿವಾದಿಗಳಿಗೆ ಬೇಕಿರಲಿಲ್ಲವಾದ್ದರಿಂದ ಅವರೂ "ನೋಡಿ, ಇದೆಂತಹ ಅನ್ಯಾಯ" ಎಂದು ಚೀರಾಡಿದ್ದರು.

ಟಿನಾ ತನ್ನ ಹಕ್ಕಾದ ಮೀಸಲಾತಿಯ ಸೌಲಭ್ಯವನ್ನು ಪಡೆಯದೇ ಪ್ರಥಮ ಸ್ಥಾನ ಪಡೆದಿದ್ದಳು ಎಂಬ ಸತ್ಯ ಅವರ್‍ಯಾರಿಗೂ ಬೇಕಾಗಿರಲಿಲ್ಲ.

ಹೀಗೆ ಟಿನಾ ವಿರುದ್ಧ ಕೆಂಡಕಾರಿದ್ದು ಸಾಲದೆಂಬಂತೆ, ಆಕೆಯ ಹೆಸರಲ್ಲಿ ನಕಲಿ ಫೇಸ್‌ಬುಕ್ ಖಾತೆಗಳನ್ನು ತೆರೆದು ಟಿನಾ ತಮ್ಮಂತೆ ಮೋದಿಯ ಭಕ್ತೆ ಎಂದೂ, ಆಕೆ ಜಾತಿ ಆಧಾರಿತ ಮೀಸಲಾತಿಯ ಬದಲಾಗಿ ಆರ್ಥಿಕ ಸ್ಥಿತಿಯನ್ನಾಧರಿಸಿದ ಮೀಸಲಾತಿಯನ್ನು ಬೆಂಬಲಿಸುತ್ತಾಳೆ ಎಂಬಂತೆಯೂ ಪೋಸ್ಟ್‌ಗಳನ್ನು ಹಾಕಿದ್ದರು. ಅವೆಲ್ಲ ನಕಲಿ ಎಂದು ಗೊತ್ತಾದಾಗ ಫೇಸ್‌ಬುಕ್ ಆ ಪೋಸ್ಟ್‌ಗಳನ್ನು ರದ್ದು ಮಾಡಿತ್ತು.

ಈಗ ಅದೇ ಜಾತಿವಾದಿಗಳು ಕೋಮುವಾದಿಗಳ ಜೊತೆ ಕೈಜೋಡಿಸಿ ಮತ್ತೊಮ್ಮೆ ಟಿನಾ ವಿರುದ್ಧ ಕೆಂಡಕಾರಿದ್ದಾರೆ. ಇತ್ತೀಚಿಗೆ ಟಿನಾ ತನ್ನ ಫೇಸ್‌ಬುಕ್ ಖಾತೆಯಲ್ಲಿ ಒಂದು ಫೋಟೊ ಹಂಚಿಕೊಂಡಿದ್ದಳು. ಅದಕ್ಕೆ ರೇಣುಕಾ ಜೈನ್ ಎಂಬಾಕೆ "ನೆನಪಿದೆಯೇ, ಹೋದವರ್ಷ ಮೀಸಲಾತಿಯಿಂದಾಗಿ ತನಗಿಂತ ಹೆಚ್ಚು ಅಂಕಗಳನ್ನು ಪಡೆದಿದ್ದ ಯುವಕನಿಗೆ ಅನ್ಯಾಯ ಮಾಡಿದ್ದ ದಲಿತ ಯುವತಿ. ನಾಚಿಕೆಯಾಗಬೇಕು" ಎಂದು ಪ್ರತಿಕ್ರಿಯಿಸಿದಳು. ಅದು ಕೂಡ ಈಗ ವೈರಲ್ ಆಗಿದೆ.

ಆದರೆ ಈ ರೇಣುಕಾಳ ಕೋಪಕ್ಕೆ ನಿಜವಾದ ಕಾರಣ ಆ ಫೋಟೋದಲ್ಲಿ ದಲಿತಳಾದ ಟಿನಾ ಭಾರತದ ಯಾವುದೋ ಕೊಳಚೆ ಪ್ರದೇಶದಲ್ಲಿ ಇರದೆ ನೆದರ್ಲ್ಯಾಂಡ್ಸ್‌ನ ರಾಜಧಾನಿ ಆಮ್‌ಸ್ಟರ್‌ಡ್ಯಾಮ್‌ನಲ್ಲಿರುವುದು!

ಈ ರೇಣುಕಾ ಯಾರು ಎಂದು ನೋಡಿದರೆ ಆಕೆಯ ಅಸಹನೆಗೆ ಕಾರಣ ಗೊತ್ತಾಗುತ್ತದೆ. ಆಕೆಯ ಹೆಸರೇ ಹೇಳುವಂತೆ ಆಕೆ ಬಿಜೆಪಿಯ ಅಧ್ಯಕ್ಷ ಅಮಿತ್ ಶಾನಂತೆ ಜೈನ ಧರ್ಮಕ್ಕೆ ಸೇರಿರುವವಳು. ಆಕೆ ತಾನೋರ್ವ ಚಾರ್ಟೆರ್ಡ್ ಅಕೌಂಟೆಂಟ್, ಕಂಪನಿ ಸೆಕ್ರೆಟರಿ, ತೆರಿಗೆ ಸಲಹೆಗಾರ್ತಿ ಮತ್ತು ಪೋರ್ಟ್‌ಫೋಲಿಯೋ ಮ್ಯಾನೇಜರ್ ಎಂದು ಹೇಳಿಕೊಂಡಿದ್ದಾಳೆ. ಹೀಗೆ ನಾಲ್ಕು ನಾಲ್ಕು ವೃತ್ತಿಗಳಲ್ಲಿರುವ ರೇಣುಕಾಳ ಹವ್ಯಾಸ ಮ್ಯುನಿಚ್‌ನಲ್ಲಿ ಸ್ಕೈ ಡೈವಿಂಗ್ ಮಾಡುವುದು ಮತ್ತು ನ್ಯೂಜಿಲ್ಯಾಂಡ್‌ನಲ್ಲಿ ಬಂಗಿ ಜಂಪಿಂಗ್ ಮಾಡುವುದು. ಅಷ್ಟು ಹೇಳಿದರೆ ಈಕೆಯ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳು ಯಾರಿಗಾದರೂ ಸುಲಭವಾಗಿ ಅರ್ಥವಾಗುತ್ತದೆ. ಇಂತಹ ರೇಣುಕಾಳಿಗೆ ದಲಿತ ಯುವತಿ ಟಿನಾ ತನ್ನಂತೆಯೇ ವಿದೇಶಗಳಲ್ಲಿ ಪ್ರವಾಸ ಮಾಡುವುದು, ಅದಕ್ಕೆ ಬೇಕಾದಷ್ಟು ಹಣ ಇರುವುದು, ತನಗಿಂತ ಸುಂದರಿಯಾಗಿರುವುದು... ಇವನ್ನೆಲ್ಲ ಸಹಿಸಲು ಹೇಗೆ ಸಾಧ್ಯ? ರೇಣುಕಾ ತರಹದ ಕ್ರಿಮಿಗಳಿಗೆ ದಲಿತರು ಈಗಲೂ ಮಲ ಹೊರುತ್ತಾ ಬಡತನದಲ್ಲೇ ಜೀವನ ಸಾಗಿಸುತ್ತಾ ನಿರಕ್ಷರಿಗಳಾಗಿರಬೇಕು.


ಇನ್ನು ಕೋಮುವಾದಿಗಳ ಕಣ್ಣು ಕೆಂಪಗಾಗಿಸಿರುವುದು ಅದೇ ಫೋಟೋದಲ್ಲಿ ಟಿನಾ ಜೊತೆ ಇರುವ ವ್ಯಕ್ತಿ. ಆತ ಬೇರೆ ಯಾರೂ ಅಲ್ಲ, ಯುಪಿಎಸ್‌ಸಿ ಪರೀಕ್ಷೆಯಲ್ಲಿ ಟಿನಾ ನಂತರ ಎರಡನೆ ಸ್ಥಾನ ಪಡೆದ ವ್ಯಕ್ತಿ. ಆತನ ಹೆಸರು ಅಥರ್ ಆಮೀರ್ ಖಾನ್! ಅಂದರೆ ಮುಸಲ್ಮಾನ. ಅದರಲ್ಲೂ ಕಾಶ್ಮೀರದ ಮುಸಲ್ಮಾನ. ಇಷ್ಟು ಸಾಕಲ್ಲ ಚಡ್ಡಿಗಳಿಗೆ ಉರಿ ಹತ್ತಲು!!

ಆಮೀರ್ ಖಾನ್ ಕಾಶ್ಮೀರದ ದೇವಿಪೋರ ಎಂಬ ಹಳ್ಳಿಯವನು. ಆತನ ತಂದೆ ಹೆಣ್ಣುಮಕ್ಕಳಿಗೆಂದು ಸರ್ಕಾರ ಸ್ಥಾಪಿಸಿರುವ ಶಾಲೆಯಲ್ಲಿ ಮೇಷ್ಟ್ರು. ತಾಯಿ ಗೃಹಸ್ಥೆ. ಚಿಕ್ಕವನಾಗಿದ್ದಾಗಿನಿಂದಲೂ ಹೆಚ್ಚು ಅಂಕಗಳನ್ನು ಗಳಿಸುತ್ತಿದ್ದ ಆಮೀರ್ ಹತ್ತನೆ ತರಗತಿಯಲ್ಲಿ 'ಯುವ ವಿಜ್ಞಾನಿ' ಎಂಬ ಪ್ರಶಸ್ತಿಯನ್ನು ಪಡೆದಿದ್ದ. ಅದನ್ನು ಆತ ಸ್ವೀಕರಿಸಿದ್ದು ಆಗ ರಾಷ್ಟ್ರಪತಿಯಾಗಿದ್ದ ಎ.ಪಿ.ಜೆ.ಅಬ್ದುಲ್ ಕಲಾಂ ಅವರಿಂದ. ಶಾಲೆ ಮುಗಿಸಿದನಂತರ ಈತ ಸೇರಿದ್ದು ಪ್ರತಿಷ್ಠಿತ ಐಐಟಿ ಸಂಸ್ಥೆಯನ್ನು. ಆದರೆ ಆತನಿಗೆ ಐಎಎಸ್ ಅಧಿಕಾರಿ ಆಗಬೇಕೆಂಬ ಆಸೆ ಇತ್ತು. ಐಐಟಿಯಲ್ಲಿದ್ದಾಗಲೇ ಯುಪಿಎಸ್‌ಸಿ ಪರೀಕ್ಷೆಗೆ ಸಿದ್ಧತೆಗಳನ್ನು ಮಾಡಿಕೊಳ್ಳಲಾರಂಭಿಸಿದ ಆಮೀರ್ ಹೋದ ವರ್ಷ ಪಾಸಾದ. ಆದರೆ ಆಗ ಆತನಿಗೆ ಸಿಕ್ಕಿದ್ದು 560ನೇ ರ್‍ಯಾಂಕ್. ಕಡಿಮೆ ಅಂಕ ಬಂದಿದ್ದರಿಂದ ಆತನಿಗೆ ಐಎಎಸ್ ಬದಲಾಗಿ ಭಾರತೀಯ ರೈಲ್ವೆ ಇಲಾಖೆಯಲ್ಲಿ ಹುದ್ದೆ ಸಿಕ್ಕಿತ್ತು. ಆದರೂ ಆತ ತನ್ನ ಐಎಎಸ್ ಕನಸನ್ನು ತೊರೆಯಲಿಲ್ಲ. ರೈಲ್ವೆ ಇಲಾಖೆಯ ತರಬೇತಿಯೊಂದಿಗೆ ಯುಪಿಎಸ್‌ಸಿಗಾಗಿ ತನ್ನ ಓದನ್ನೂ ಮುಂದುವರೆಸಿದ. 2015ರ ಪರೀಕ್ಷೆಯಲ್ಲಿ ಎರಡನೆ ಸ್ಥಾನ ಪಡೆಯುವ ಮೂಲಕ ತನ್ನ ಕನಸನ್ನು ನನಸಾಗಿಸಿಕೊಂಡ.

ಟಿನಾ ಮತ್ತು ಆಮೀರ್ ಭೇಟಿಯಾಗಿದ್ದು ಅವರಿಬ್ಬರೂ ಐಎಎಸ್ ಅಧಿಕಾರಿಗಳಾಗುವುದಕ್ಕೆ ಮುನ್ನ ಸಿಗುವ ತರಬೇತಿ ಶಿಬಿರಕ್ಕೆ ಕಳೆದ ಮೇ ತಿಂಗಳಲ್ಲಿ ಹಾಜರಾದಾಗ. ಟಿನಾಳನ್ನು ನೋಡಿದ್ದೇ ಆಮೀರ್ ಸಂಪೂರ್ಣವಾಗಿ 'ಫಿದಾ' ಆದ. ಅವತ್ತು ಸಂಜೆಯೇ ಆಕೆಯ ಕೊಠಡಿಯ ಬಾಗಿಲ ಮುಂದೆ ಹಾಜರಾದ ಆಮೀರ್ ತನ್ನ ಪ್ರೇಮವನ್ನು ನಿವೇದಿಸಿಕೊಂಡ. ಆದರೆ ಟಿನಾ ಅಷ್ಟು ಬೇಗ ಒಪ್ಪಲಿಲ್ಲ. ಆತ ಹಲವಾರು ತಿಂಗಳ ಕಾಲ ಆಕೆಯ ಮನವೊಲಿಸುವಂತೆ ಮಾಡಿದಳು. ಕೊನೆಗೆ ಆತನ ಪ್ರೀತಿ ನಿಜವಾದದ್ದು ಎಂದು ಅರಿವಾಗಿ ಟಿನಾ ಹೋದ ತಿಂಗಳು ಸಮ್ಮತಿಸಿದಳು. "ಆತ ಪ್ರತಿದಿನ ನನ್ನ ಮನವೊಲಿಸಲು ಪ್ರಯತ್ನಿಸಿದ್ದಕ್ಕಾಗಿ ನಾನು ಧನ್ಯಳಾಗಿದ್ದೇನೆ. ಆತ ಅತ್ಯುತ್ತಮ ವ್ಯಕ್ತಿ" ಎಂದಿದ್ದಾಳೆ ಟಿನಾ.

ಸದ್ಯದಲ್ಲೇ ತಮ್ಮ ನಿಶ್ಚಿತಾರ್ಥ ನಡೆಯಲಿದೆ ಎಂದಿರುವ ಟಿನಾ ಎಂದೂ ಆಮೀರ್‌ನೊಂದಿಗಿನ ಸಂಬಂಧದ ಬಗ್ಗೆ ಮುಚ್ಚುಮರೆ ಮಾಡಿಲ್ಲ. ಬದಲಾಗಿ ಇಬ್ಬರೂ ತಮ್ಮ ಫೇಸ್‌ಬುಕ್ ವಾಲ್‌ಗಳಲ್ಲಿ ಜೊತೆಗಿರುವ ಫೋಟೋಗಳನ್ನು ಹಂಚಿಕೊಂಡಿದ್ದಾರೆ. ಮಾತ್ರವಲ್ಲ, ಇದೇ ನವೆಂಬರ್‌ರಂದು ತಾವಿಬ್ಬರೂ ಈಗ ಜೊತೆಯಾಗಿರುವುದನ್ನು ಬಹಿರಂಗಪಡಿಸಿದ್ದಾರೆ.

ಆದರೆ ಎಂದಿನಂತೆ ಕೆಲವರಿಗೆ ಇದನ್ನು ಸಹಿಸಲು ಆಗಿಲ್ಲ. "ಯಾಕೆ ನೀನು ಅವನೊಂದಿಗೆ ಟೈಮ್‌ವೇಸ್ಟ್ ಮಾಡುತ್ತಿದ್ದೀಯಾ?", "ಯಾಕೆ ಬೇರೆ ಧರ್ಮದವನೊಂದಿಗಿದ್ದೀಯಾ?" ಎಂದೆಲ್ಲ ಕುಟುಕಿದ್ದಾರೆ. ಅದಕ್ಕೆಲ್ಲ ಟಿನಾ ಕೊಟ್ಟಿರುವ ಉತ್ತರ ಹೀಗಿದೆ: "ಮುಕ್ತವಾಗಿ ಯೋಚಿಸುವ ಸ್ವತಂತ್ರ ಮಹಿಳೆಯಾಗಿ ಜೀವನದಲ್ಲಿ ನನಗೆ ಬೇಕಾದ ಆಯ್ಕೆ ಮಾಡಿಕೊಳ್ಳುವ ಹಕ್ಕು ನನಗಿದೆ. ಪರಸ್ಪರ ಪ್ರೀತಿ ಮಾಡುತ್ತಿರುವ ನಾವಿಬ್ಬರೂ ಸಂತೋಷವಾಗಿದ್ದೇವೆ. ನಮ್ಮ ತಂದೆತಾಯಂದಿರೂ ನಮ್ಮ ಸಂಬಂಧದ ಬಗ್ಗೆ ಸಂತೋಷವಾಗಿದ್ದಾರೆ. ಆದರೂ ಕೆಲವರು ಇರುತ್ತಾರೆ- ಅವರ ಸಂಖ್ಯೆ ತುಂಬಾ ಕಡಿಮೆ ಇದ್ದರೂ - ಅವರು ಬೇರೆ ಧರ್ಮದವನನ್ನು ನನ್ನ ಜೀವನ ಸಂಗಾತಿಯಾಗಿ ಆಯ್ಕೆ ಮಾಡಿಕೊಂಡಿದ್ದನ್ನು ಪ್ರಶ್ನಿಸುತ್ತಾರೆ. ಆದರೆ ಸಂತೋಷದ ಸಂಗತಿ ಯಾವುದೆಂದರೆ ಬಹಳಷ್ಟು ಜನ ನಮ್ಮಿಬ್ಬರಿಗೂ ಶುಭ ಹಾರೈಸಿರುವುದು."



ದಲಿತ ಯುವತಿ ಟಿನಾ ಮತ್ತು ಬಡ ಮುಸಲ್ಮಾನ ಕುಟುಂಬದ ಆಮೀರ್ ಇಬ್ಬರೂ ಕಷ್ಟಪಟ್ಟು ಓದಿದ್ದರಿಂದಲೇ ಅವರು ಇವತ್ತು ಐಎಎಸ್ ಅಧಿಕಾರಿಗಳಾಗಿರುವುದು. ಅದು ಯಾರೂ ಅವರಿಗೆ ದಯಪಾಲಿಸಿದ್ದಲ್ಲ. ಹಾಗೆಯೇ ಇನ್ನೊಂದು ಮುಖ್ಯ ವಿಷಯ ಯಾವುದೆಂದರೆ ಅವರಿಬ್ಬರಿಗೂ ಅಪಾರ ಸಾಮಾಜಿಕ ಕಾಳಜಿ ಇರುವುದು. ಅದು ಅವರಿಬ್ಬರ ಸಂದರ್ಶನಗಳಲ್ಲಿ ಮತ್ತು ಭಾಷಣಗಳಲ್ಲಿ ವ್ಯಕ್ತವಾಗಿದೆ. ಜೊತೆಗೆ ಇಬ್ಬರೂ ಸುಂದರವಾಗಿದ್ದಾರೆ. ಅವರಿಬ್ಬರದ್ದು ಬರೀ ಸಾಧನೆಯ ಕತೆಯಲ್ಲ; ಜಾತಿ, ಧರ್ಮ, ಭಾಷೆ ಎಂಬ ಗಡಿಗಳನ್ನು ಮೀರಿದ ಅಪ್ಪಟ ಪ್ರೇಮ ಕತೆ. ಅವರಿಬ್ಬರು ಯುವ ಜನತೆಗೆ ಸ್ಫೂರ್ತಿ ಆಗಬೇಕಿದೆ. ■




ಹೆಗ್ಗನಹಳ್ಳಿಯ ಲೇಡಿ ಡಾನ್

ಸೊ... ಮಗ, ಎಲ್ಲಾ ಹಾಳು ಮಾಡಿಬಿಟ್ಟ. ಇವತ್ತು ಬೆಂಗಳೂರಿಗೆ ಉಪ ಮೇಯರ್ ಆಗಬೇಕಿದ್ದದ್ದು ಗೋಪಾಲಯ್ಯನ ಹೆಂಡತಿಯಲ್ಲ..... ನಾನು ಬೆಂಗಳೂರಿಗೆ ಉಪಮೇಯರ್ ಆಗಿರುತ್ತಿದ್ದೆ. ಅದೆಲ್ಲಿದ್ನೋ ಹಾಳಾದೋನು ನಮ್ಮ ಕುಟುಂಬಕ್ಕೇ ಶನಿಯಂತೆ ವಕ್ಕರಿಸಿಬಿಟ್ಟ. ಹಾವಿಗೆ ಹಾಲೆರೆದರೆ ಏನಾಗುತ್ತೆ ಅನ್ನೋದಕ್ಕೆ ನಮಗಾದ ಗತಿಗಿಂತ ಬೇಕೆ...? ಬೇಕಾಗಿತ್ತಾ ಇದೆಲ್ಲಾ ನನಗೆ....?

ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯ ಲಾಕಪ್ ಪಕ್ಕದ ಬೆಂಚಿನ ಮೇಲಿಂದ ಎದ್ದವಳೇ ಪಕ್ಕದ ಗೋಡೆಗೆ ತನ್ನ ತಲೆ ಜಜ್ಜುತ್ತಾ ಬುಸುಗುಡುತ್ತಿದ್ದಾಳೆ ವರಮಹಾಲಕ್ಷ್ಮಿ. ಹೆಚ್ಚೂ ಕಮ್ಮಿ ಆರಡಿ ಎತ್ತರದ, ಬೆಂಗಳೂರು ಹೊರವಲಯದ ಯಾವುದೋ ಗೌಡರ ಮನೆತನದ, ಘಟವಾಣಿ ಗೌಡತಿಯ ಗತ್ತಿನಲ್ಲೇ ಮುಮ್ಮಲು ಮರುಗುತ್ತಿದ್ದಾಳೆ ವರಮಹಾಲಕ್ಷ್ಮಿ. ವಯಸ್ಸು ಹತ್ತಿರತ್ತಿರ ನಲವತ್ತೇಳಿರಬೇಕು. ಬೆಂಗಳೂರು ಕಂಡ ಮಾಫಿಯಾ ರಾಣಿಯರ ಪೈಕಿ ಕಳ್ಳಭಟ್ಟಿ ರಾಣಿ ಮಾರಿಮುತ್ತು, ಭಕ್ಷಿಗಾರ್ಡನ್ನಿನ ಗಾಂಜಾ ದೊರೆಸಾನಿ ತಮಿಳ್‌ಕುಡಿ, ಆಂಜನಪ್ಪ ಗಾರ್ಡನ್ನಿನ ಸಾರಾಯಿ ರಾಣಿ ಮಾಲಾ, ಶಾಮಣ್ಣ ಗಾರ್ಡನ್ನಿನ ಗಾಂಜಾ ರಾಣಿ ಆಫಾ ಬೇಗಮ್..... ಮುಂತಾದವರಿಗಿಂತ ಹೈಟೆಕ್ಕಾಗಿ, ವೈಟ್ ಕಾಲರ್ರಾಗಿ, ಅವರಷ್ಟೇ ರಕ್ತದಾಹಿ ಮತ್ತು ಅವರೆಲ್ಲರಿಗಿಂತ ನಿರಂಕುಶಳಾಗಿ ಮಾಫಿಯಾ ರಾಣಿಯಂತೆ ಮೆರೆದವಳು ವರಮಹಾಲಕ್ಷ್ಮಿ...!

ನೋಡಲು ಮಾರಿಮುತ್ತುವಿನಂತೆ ರಕ್ಕಸಿಯಲ್ಲ, ತಮಿಳ್‌ಕುಡಿ, ಬೇಗಂ ಆಫಾಳ ಹಾಗೆ ಘಟವಾಣಿಯೂ ಅಲ್ಲ, ಕುರೂಪಿಯಲ್ಲ, ಕುಖ್ಯಾತಿಯೂ ಆ ಮಟ್ಟಕ್ಕಿರಲಿಲ್ಲ. ಹೆಚ್ಚೆಂದರೆ ಪೀಣ್ಯ, ಹೆಗ್ಗನಹಳ್ಳಿ ಕ್ರಾಸ್, ಲಗ್ಗೆರೆ ಮತ್ತು ಸುಂಕದ ಕಟ್ಟೆಯಿಂದಾಚೆಗೆ ಈಕೆಯ ಕುಖ್ಯಾತಿಯೂ ಹಬ್ಬಲಿಲ್ಲ ನಿಜ. ಆದರೆ ಸದ್ದಿಲ್ಲದೆ ಆಕೆಯ ಕೈಗಳು ಬೆಂಗಳೂರಿನಿಂದಾಚೆಗೆ, ಅದರ ಸುತ್ತಮುತ್ತಲ ಜಿಲ್ಲೆಗಳ ಯಾವ್ಯಾವುದೋ ಹುತ್ತದ ಯಾವ್ಯಾವುದೋ ಹಕೀಕತ್ತಿಗೆ ಹರಡಿಕೊಂಡಿದ್ದಂತೂ ನಿಜ. ನೇರವಾಗಿ ತಾನೇ ಮುಂದೆ ನಿಂತು ಯಾವುದನ್ನೂ ಮಾಡಿದವಳಲ್ಲ ವರಮಹಾಲಕ್ಷ್ಮಿ. ಮಾಡಿಸುತ್ತಿದ್ದವಳು. ಎಲ್ಲೋ ಮೈಸೂರು ರಸ್ತೆಯ ಗಾಳಿ ಆಂಜನೇಯ ದೇವಸ್ಥಾನದ ಹಿಂಭಾಗದ ದೊಡ್ಡ ಮೋರಿಯೊಳಕ್ಕೆ ರಾತ್ರೋರಾತ್ರಿ ಟ್ಯಾಂಕರುಗಟ್ಟಲೇ ಫರ್ನೇಸ್ ಆಯಿಲ್ಲಿನ ವಿಷತ್ಯಾಜ್ಯ ಸದ್ದಿಲ್ಲದೇ ಹರಿದುಹೋಗುತ್ತಿದ್ದರೆ, ಪೊಲೀಸರು, ಪಾಲಿಕೆಯ ಅಧಿಕಾರಿಗಳ ರಕ್ಷಣೆಯಲ್ಲೇ ಟ್ಯಾಂಕರುಗಟ್ಟಲೇ ವಿಷತ್ಯಾಜ್ಯ ಬಾಪೂಜಿನಗರದ ದೊಡ್ಡ ಮೋರಿಯಲ್ಲಿ ಖಾಲಿಯಾಗುತ್ತಿದ್ದರೆ; ಅದರ ಸೂತ್ರಧಾರಳಂತಿದ್ದ ವರಮಹಾಲಕ್ಷ್ಮಿಯ ನೆರಳು ಕೂಡ ಹೊರಜಗತ್ತಿನ ಗಮನಕ್ಕೆ ಬರುತ್ತಿರಲಿಲ್ಲ-



ಚಿಕ್ಕತಿಮ್ಮೇಗೌಡ

ಚಾಣಾಕ್ಷೆ....

ಇದು ವರಮಹಾಲಕ್ಷ್ಮಿಯ ಚಾಲಾಕಿ ತಲೆಗಾರಿಕೆ ಮತ್ತು ಸ್ತ್ರೀ ಸಹಜ ಅಬಲಾನಕಗಳ ಹೊರತಾದ ಪರಾಕ್ರಮದ ಕೆಲ ನಿದರ್ಶನಗಳಷ್ಟೇ. ಈಗ ತನ್ನ ಗಂಡ ಗೋವಿಂದೇಗೌಡನ ಮಾಜಿ ಬಂಟ ಚಿಕ್ಕತಿಮ್ಮೇಗೌಡನನ್ನು ಸುಪಾರಿ ಕೊಟ್ಟು ಕೊಲ್ಲಿಸಿ ಪರಪ್ಪನ ಅಗ್ರಹಾರ ಜೈಲಲ್ಲಿ ತನ್ನೆಲ್ಲಾ ಗಾಯಗಳನ್ನು ನೆಕ್ಕುತ್ತಾ ಬುಸುಗುಡುವ ವರಮಹಾಲಕ್ಷ್ಮಿ ಕೇವಲ ಬಜಾರಿಯಷ್ಟೇ ಇಲ್ಲ, ಸ್ತ್ರೀ ಸಹಜ ನ್ಯೂನತೆಗಳೆಲ್ಲವನ್ನೂ ಮೀರಿದಾಕೆ, ಅದೆಂಥಾ ದೈತ್ಯನಿಗೂ ಸರಿಸಾಟಿಯಾಗಿ ನಿಂತು ಬಡಿದಾಡುವಿಕೆ, ಯಾವ ಮಾಫಿಯಾ ಡಾನ್‌ಗೂ ಕಮ್ಮಿಯಿಲ್ಲದ ಹಾಗೆ ನೂರಾರು ಕೋಟಿಯ ಸಾಮ್ರಾಜ್ಯವೊಂದನ್ನು ಕಟ್ಟಿದಾಕೆ ಮತ್ತು ಆಳಿದಾಕೆ!

ಕಳೆದ ಪಾಲಿಕೆ ಚುನಾವಣೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಗ್ಗನಹಳ್ಳಿ ವಾರ್ಡಿನಿಂದ ಜೆಡಿಎಸ್ ಅಭ್ಯರ್ಥಿಯಾಗಿ ನಿಂತಿದ್ದ ವರಮಹಾಲಕ್ಷ್ಮಿ ಏನಾದರೂ ಗೆದ್ದಿದ್ದರೆ ಈ ಹೊತ್ತಿಗೆ ಬೆಂಗಳೂರಿನ ಉಪಮೇಯರ್ ಆಗಿರುತ್ತಿದ್ದಳೇನೋ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ದಾಸರಹಳ್ಳಿಗೆ ತಾನೇ ಜೆಡಿಎಸ್ ಅಭ್ಯರ್ಥಿಯಾಗಿದ್ದರೂ ಅಚ್ಚರಿಯಿರಲಿಲ್ಲ. ಗಂಡ ಗೋವಿಂದೇಗೌಡನನ್ನೇ ಅದುಮಿಟ್ಟು ತಾನು ಜೆಡಿಎಸ್ ಅಭ್ಯರ್ಥಿಯಾಗಿ ದಾಸರಹಳ್ಳಿಗೇನಾದರೂ ಎಮ್ಮೆಲ್ಲೇಯಾದಳೆಂದರೆ ಕರ್ನಾಟಕದ ಯಾರೇ ಮಾಫಿಯಾ ರಾಣಿಯನ್ನೂ ಮೀರಿಸಬಲ್ಲಂಥ ಎತ್ತರಕ್ಕೇರುವ ದುರಾಶೆಯನ್ನೂ ದುರುದ್ದೇಶವನ್ನೂ ದೂರಾಲೋಚನೆಯನ್ನೂ ಒಟ್ಟೊಟ್ಟಿಗೆ ನಿಭಾಯಿಸುವಲ್ಲಿ ನಡೆದ ಸಣ್ಣ ಯಡವಟ್ಟೇ ಈಗಿನ ದುರ್ಗತಿಗೆ ಕಾರಣವಾಯಿತು.

ಮತ್ತು ಅಂಥಾದೊಂದು ದುರ್ಗತಿ ಚಿಕ್ಕತಿಮ್ಮಯ್ಯ ಅಲಿಯಾಸ್ ಚಿಕ್ಕ ತಿಮ್ಮೇಗೌಡನೆಂಬ ದ್ರೋಹಿಯ ತಾಳಿಯೇ ಬರಬಹುದೆಂಬ ಲೆಕ್ಕಾಚಾರವಾದ ಆಕೆಗೆಲ್ಲಿತ್ತು?

ಗಂಡನ ಬಂಟನ ರೂಪತಾಳಿ

ಕೆಡುಕೆಂಬುದು ಪತಿಯ ಮಾಜಿ ಬಂಟನ ತಾಳಿತ್ತಾದರೂ ಅದಕ್ಕೆ ಕಾರಣನಾದವನು ಸಾಕುಮಗ ಅಲಿಯಾಸ್ ಸುರೇಶ್‌ಕುಮಾರ್!

ಒಂದಾನೊಂದು ಕಾಲದಲ್ಲಿ ಯಃಕಶ್ಚಿತ್ ಗಾಮೆ[...] ಕೆಲಸದ ಹುಡುಗಿಯಾಗಿ ತದನಂತರ ಇನ್ನಾವು[...] ಫ್ಯಾಕ್ಟರಿಯ ದಿನಗೂಲಿಯಾಗಿ ಪ್ಲಾಸ್ಟಿಕ್ ಡಬ್ಬಿಯಲ್ಲಿ[...] ಕಟ್ಟಿಕೊಂಡು ರಸ್ತೆ ಬದಿ ಹಲ್ಲುಕಿರಿದನೆ[...] ಗೋವಿಂದಪ್ಪನೆಂಬ ಪೇಂಟರ್‌ನ ಪ್ರೀತಿಗೆ ಬಿದ್ದು ಆತ[...] ಮದುವೆಯಾಗಿ, ಕಾಲಕ್ರಮೇಣ ನೂರಾರು ಕೋ[...] ಒಡತಿಯಾಗಿ ಗಂಡ ಗೋವಿಂದಪ್ಪನನ್ನು ಗೋವಿ[...] ಗೌಡನನ್ನಾಗಿಸಿ, ಬಿಬಿಎಂಪಿಯ ಹೆಗ್ಗನಹಳ್ಳಿ ವಾ[...] ಆತನನ್ನು ಪಕ್ಷೇತರ ಕೌನ್ಸಿಲರ್‌ನನ್ನಾಗಿ ಗೆಲ್ಲಿಸಿ ಆ ಮ[...] ಜೆಡಿಎಸ್ ಅಧಿಪತಿ ಕುಮಾರಣ್ಣನ ವಿಶ್ವಾಸ[...] ಮುಂಬರುವ ವಿಧಾನಸಭಾ ರಣಾಂಗಣದಲ್ಲಿ ದಾಸರಹ[...] ಪಾಳೇಗಾರ ಬಿಜೆಪಿಯ ಮುನಿರಾಜುವನ್ನು ಮಣ್ಣುಮ[...] ತಾನು ಪೀಣ್ಯ-ದಾಸರಹಳ್ಳಿಯ ಅಗಣಿತ ಸಾಮ್ರಾ[...] ದೊರೆಸಾನಿಯಾಗಬೇಕೆಂಬ ಕನಸು ಕಂಡ[...] ವರಮಹಾಲಕ್ಷ್ಮಿ!

ಕಳೆದ ಪಾಲಿಕೆ ಚುನಾವಣೆಯಲ್ಲಿ ತಾನೇ ಹೆಗ್ಗನಹ[...] ದೊರೆಸಾನಿಯೆಂಬ ದೌಲತ್ತಿನಲ್ಲೇ ಇನ್ನಿಲ್ಲದಂತೆ ಹೆ[...]ದ್ದಳು. ದುರಾದೃಷ್ಟ ಗಂಡನ ಬಲಗೈ ಬಂಟನ ಅ[...] ತಾಳಿತ್ತು. ಪ್ರತಿಫಲವೆಂಬಂತೆ ಬಿಜೆಪಿಯ ಭಾ[...] ಕೃಷ್ಣಯ್ಯರಿಗೆ ಹದಿನಾಲ್ಕು ಚಿಲ್ಲರೆ ಸಾವಿರದಷ್ಟು[...] ಬಂದರೆ ಜೆಡಿಎಸ್‌ನ ವರಮಹಾಲಕ್ಷ್ಮಿಗೆ ದಕ್ಕಿದ್ದು ಕೆ[...] ಒಂಬತ್ತೂವರೆ ಸಾವಿರದಷ್ಟು. ಅಂದರೆ ಐದೂವರೆ ಸಾ[...] ಮತಗಳ ಅಂತರದಿಂದ ತನ್ನ ಮಡದಿ ಭಾಗ್ಯಮ್ಮ[...] ಬಿಜೆಪಿಯಿಂದ ಗೆಲ್ಲಿಸಿದ್ದ ಮಾಜಿ ಕೌನ್ಸಿಲರ್ ಕೃಷ್ಣಯ[...] ಒಂದಾನೊಂದು ಕಾಲದಲ್ಲಿ ಗೋವಿಂದೇಗೌ[...] ಜೊತೆಗಿದ್ದವನೇ-

ಜೆಡಿಎಸ್ ವಿರುದ್ಧ ಬಿಜೆಪಿ ಭಾರೀ ಅಂತರದಿಂ[...] ಗೆದ್ದಿತ್ತಾದರೂ ಗೆಲುವಿಗೆ ಕಾರಣನಾದವನು ಬೇರೆ ಯ[...] ಅಲ್ಲ, ಸೋತ ಗೋವಿಂದೇಗೌಡನ ಮಾಜಿ ಬ[...] ಚಿಕ್ಕತಿಮ್ಮಯ್ಯ ಅಲಿಯಾಸ್ ಚಿಕ್ಕತಿಮ್ಮೇಗೌಡ ಎಂಬ[...] ಹೆಗ್ಗನಹಳ್ಳಿಗಾಗಲಿ, ಸುಂಕದಕಟ್ಟೆಗಾ[...] ಗೊತ್ತಿರಲಿಲ್ಲವೆಂದೇನಲ್ಲ. ಕಳೆದ ಪಾಲಿಕೆ ಚುನಾವಣೆ[...] ಪಕ್ಷೇತರವಾಗಿಯೇ ಗೋವಿಂದೇಗೌಡ ಗೆಲ್ಲಲು ಕಾರ[...]ದವನು ಇದೇ ಹೆಗ್ಗನಹಳ್ಳಿಯ ಚಿಕ್ಕತಿಮ್ಮಯ್ಯ. ಗೋವಿಂಗೌಡನ ಮನೆಮಗನಂತಾಗುವುದಕ್ಕೂ ಕಾರಣ[...] ಆತ ಗೋವಿಂದೇಗೌಡನ ದತ್ತುಪುತ್ರ ಸೂರಿ ಉ[...] ಸುರೇಶ್‌ಕುಮಾರ್. ಕತೆ ಶುರುವಾಗಿದ್ದು 1985 [...]

ಹಳೇ ಪಾತ್ರೆ, ಹಳೇ ಕಬ್ಬಿಣ

ಆಗ ಲಗ್ಗೆರೆ ಸುತ್ತಮುತ್ತ ಸ್ಲಮ್ಮಿನಲ್ಲಿ ಇಟ್ಟಾಡಿಕೊ[...] ಗೋವಿಂದಪ್ಪ ಎಂಬ ಪೇಂಟರ್‌ನ ಕಣ್ಣಿಗೆ ಬಿದ್ದ[...] ವರಮಹಾಲಕ್ಷ್ಮಿ. ಆಗಿನ್ನೂ ಕಾಮಾಕ್ಷಿಪಾಳ್ಯ ಹಳ್ಳಿಯಾ[...] ಈಗಿನಂತೆ ಸುಂಕದಕಟ್ಟೆ ಬೆಳೆದಿರಲಿಲ್ಲ. ಕುಣಿ[...] ನಾಗಮಂಗಲ ಅಕ್ಕಪಕ್ಕದ ಹಳ್ಳಿಗಳಿಂದ ಉದರನಿ[...] ಬೆಂಗಳೂರಿಗೆ ವಲಸೆ ಬಂದಿದ್ದ ವರಮಹಾಲಕ್ಷ್ಮಿ ಆ[...] ಹದಿನಾರರ ಬಾಲಕಿ. ಮೊದಮೊದಲು ಪೀಣ್ಯ ಸೆ[...] ಸ್ಪೇಜ್‌ನ ಗಾರ್ಮೆಂಟ್ ಫ್ಯಾಕ್ಟರಿಗಳಿಗೆ ಹೋಗುತ್ತಿದ್ದ[...] ಕಾಲಕ್ರಮೇಣ ಗಣಪತಿ ನಗರದ ಏರೋಸ್ ಫಾ[...] ಎಂಬ ಫ್ಯಾಕ್ಟರಿ ಸೇರಿಕೊಂಡಳು. ತಿಂಗಳಿಗೆ ಆರುನ[...] ರೂಪಾಯಿಗಳ ಸಂಬಳ. ಬೆಳಗ್ಗೆ ಪ್ಲಾಸ್ಟಿಕ್ ಡಬ್ಬಿಯೊಂ[...] ಬುತ್ತಿ ತುಂಬಿಸಿಕೊಂಡು ಹೆಗ್ಗನಹಳ್ಳಿ ಮೇನ್‌ರೋ[...] ನಡೆದುಬರುತ್ತಿದ್ದರೆ ಅದರ ಚಮಕ್ಕೇ ಬೇರೆಯಂತಿತ್ತು. ಕಿರಿಯಲೇನು ಕಮ್ಮಿ ಪೋಕರಿಗಳೆ? ಹಳ್ಳಕ್ಕೋ ಕೊಳ್ಳ[...] ಗೊತ್ತಿಲ್ಲ ಅಂತೂ ಬಿದ್ದವನು ಪೇಂಟರ್ ಗೋವಿಂ[...]

ವರಲಕ್ಷ್ಮಿಯ ಕೈಗುಣವೋ ಅದೃಷ್ಟವೋ ಗೋವಿಂ[...] ದುರ್ದೆಸೆಗಳೆಲ್ಲಾ ರಾತ್ರೋರಾತ್ರಿ ಬದಲಾದವು. ಯಃ[...] ಪೇಂಟರ್ ಆಗಿದ್ದ ಗೋವಿಂದೇಗೌಡ ಇದ್ದಕ್ಕಿ[...] ಪೇಂಟಿಂಗ್ ಕಾಂಟ್ರಾಕ್ಟಗಿಳಿದ. ಅದಕ್ಕೂ ವರಮಹಾ[...] ಮಹಿಮೆಯೇ ಕಾರಣವಾಗಿತ್ತು. ತಾನು ಕೆಲಸ ಮಾಡ[...] ಏರೋಸ್ ಫಾರ್ಮಾದ ಮಾರ್ವಾಡಿ ಮಾಲೀಕನ ವಿ[...] ಗಳಿಸುವ ಮೂಲಕ ಆತನ ನಂಬಿಕೆಗೆ ಪಾತ್ರಳಾ[...] ವರಮಹಾಲಕ್ಷ್ಮಿ ಆತನ ಮನೆ ಮತ್ತು ಫ್ಯಾಕ್ಟರಿಯ ಪೇಂಟಿ[...] ಕಾಂಟ್ರಾಕ್ಟನ್ನು ಗಂಡ ಗೋವಿಂದಪ್ಪನಿಗೇ ಕೊಡಿಸಿಕೊ[...] ಅದೇ ಹೊತ್ತಿಗೆ ಫ್ಯಾಕ್ಟರಿಯ ತ್ಯಾಜ್ಯ ಮತ್ತು ಕಸ ಸಾಗಾಣಿ[...] ಹೊಣೆ ಹೊತ್ತಿದ್ದ ಸಾಬಿಯೊಬ್ಬನನ್ನು ಹೊರದಬ್ಬಲಾಯ[...] ಆ ಗುತ್ತಿಗೆಯೂ ಗಂಡನ ಪಾಲಾಗುವಂತೆ ವರಮಹಾ[...] ನಿಭಾಯಿಸಿದ್ದಳು. ಕಸದರಾಶಿಯ ನಡುವೆ ಕಬ್ಬಿಣ, ಪಾ[...] ಮತ್ತು ಅಲ್ಯೂಮಿನಿಯಂ ತುಂಡುಗಳೂ ಬರುತ್ತಿದ್ದ[...] ಅಂಥ ಹಳೇ ಪಾತ್ರೆ, ಹಳೇ ಕಬ್ಬಿಣಗಳನ್ನೇ ಒಟ್ಟು[...] ಗೋವಿಂದಪ್ಪ ಮಾರಲಾರಂಭಿಸಿದ.

▶▶ 1[...]

ದಿಟ್ಟ ಡಿಸಿಪಿ ಅನುಚೇತ್ ಮತ್ತು ಸುಪಾರಿ ದುಡ್ಡಿನಲ್ಲಿದ್ದ ಹಳೇ ನೋಟುಗಳು!

ಆತುರಗಾರನಿಗೆ ಬುದ್ಧಿ ಮಟ್ಟ ಎಂಬಂತೆ ಹೆಂಡತಿಯ ಗುಲಾಮನಾದ ಮಾಜಿ ಕೌನ್ಸಿಲರ್ ಗೋವಿಂದೇಗೌಡ ತನ್ನ ಪತ್ನಿಯ ದುರ್ಬುದ್ಧಿಯೇ ವಿನಾಶಕ್ಕೆ ಮೂಲವೆಂಬುದನ್ನು ಮರೆತುಬಿಟ್ಟ. ಬಲಗೈ ಬಂಟನಾಗಿದ್ದ ಚಿಕ್ಕತಿಮ್ಮಯ್ಯ ಯಾವತ್ತು ಸಾಕು ಮಗನನ್ನೇ ತಮ್ಮ ವಿರುದ್ಧ ಎತ್ತಿಕಟ್ಟಿ ಕೋಟಿಗಟ್ಟಲೇ ನಷ್ಟಕ್ಕೆ ಕಾರಣವಾದನೋ ಅವತ್ತೇ ಆತನ ಮರಣಶಾಸನವನ್ನೂ ಬರೆಯಲಾಗಿತ್ತು. ಅದು ಮೂವತ್ತು ಲಕ್ಷದ ಸುಪಾರಿ. ರಾಜಗೋಪಾಲನಗರ ಪೊಲೀಸ್ ಠಾಣೆಯ ಖತರ್‌ನಾಕ್ ಕ್ರಿಮಿ ಸ್ಲಂ ಭರತನೇ ಚಿಕ್ಕತಿಮ್ಮಯ್ಯನನ್ನು ಮುಗಿಸಲು ಸುಪಾರಿ ಪಡೆದು ಅದನ್ನು ತನ್ನ ನೆಚ್ಚಿನ ಬಂಟ ಸುಂಕದಕಟ್ಟೆಯ ಕಜಿನ್ಸ್ ಉರ್ಫ್ ಮಣಿಕಂಠನಿಗೆ ಒಪ್ಪಿಸಿದ್ದ.


ಆದರೆ ಮೂರು ತಿಂಗಳ ಹಿಂದೆ ಮಣಿಕಂಠನೇ ಅಪಘಾತವೊಂದಕ್ಕೆ ಸಿಲುಕಿ ಕಾಲು ಮುರಿದುಕೊಂಡ. ಆ ಹೊತ್ತಿಗಾಗಲೇ ಕಜಿನ್ಸ್‌ಗೆ ಐದು ಲಕ್ಷದ ಅಡ್ವಾನ್ಸ್ ಕೂಡ ಸಂದಾಯವಾಗಿತ್ತು. ಯಾವತ್ತು ಮಣಿಕಂಠ ಆಸ್ಪತ್ರೆ ಸೇರಿಕೊಂಡನೋ ಸುಪಾರಿಯ ಹೊಣೆ ವಿಜಯನಗರದ ಕ್ರಿಮಿ ಆರ್‌ಎಕ್ಸ್ ಸೂರಿ ಅಲಿಯಾಸ್ ಸುರೇಶನ ಹೆಗಲಿಗೆ ಬಿತ್ತು. ಪುಡಿಗಾಸಿಗೆ ಯಾರನ್ನು ಬೇಕಾದರೂ ಚುಚ್ಚಿ ಹೆಣವಾಗಿಸಬಲ್ಲ ಕ್ರಿಮಿಗಳಿಗೆ ಹೆಗ್ಗನಹಳ್ಳಿಯಲ್ಲಾಗಲಿ, ರಾಜಗೋಪಾಲನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಾಗಲಿ ಯಾವ ಕೊರತೆಯೂ ಇಲ್ಲ. ನವೆಂಬರ್ ಎರಡು ಗೆಳೆಯ ನಾಗಣ್ಣನ ಜೊತೆ ಗಜಾನನನಗರದಲ್ಲಿ ಬರುತ್ತಿದ್ದಂತೆಯೇ ಸೂರಿ ಪಡೆ ಚಿಕ್ಕತಿಮ್ಮಯ್ಯನನ್ನು ಅಡ್ಡಗಟ್ಟಿ ಕೊಚ್ಚಿಹಾಕಿತ್ತು.



ಆಗಲೂ ಗೋವಿಂದೇಗೌಡನೇ ಮಾಡಿಸಿದ್ದಾನೆಂದರೆ ಪೊಲೀಸರು ನಂಬಿರಲಿಲ್ಲ. ಆದರೆ ವರಮಹಾಲಕ್ಷ್ಮಿಯ ಫೋನ್ ಕರೆಗಳ ವಿವರವಿತ್ತಲ್ಲ ಅದು ಹಂತಕರು ಮತ್ತು ವರಮಹಾಲಕ್ಷ್ಮಿಯ ನಡುವಿನ ಇಡೀ ಸುಪಾರಿಯನ್ನೇ ಬಯಲಿಗೆಳೆದಿತ್ತು.

ಕೊಟ್ಟ ಹತ್ತು ಲಕ್ಷದ ಅಡ್ವಾನ್ಸ್‌ನಲ್ಲಿದ್ದ ಐನೂರು ಸಾವಿರದ ಹಳೇನೋಟುಗಳ ಎಕ್ಸ್‌ಚೇಂಜ್ ಕುರಿತಂತೆ ಹಂತಕರು ಮತ್ತು ಸುಪಾರಿ ಕೊಟ್ಟವನ ನಡುವಿನ ಚೌಕಾಸಿಯೊಂದೇ ಇಡೀ ವೃತ್ತಾಂತವನ್ನು ಬಿಚ್ಚಿಟ್ಟಿತು. ದಿಟ್ಟ ಡಿಸಿಪಿ ಅನುಚೇತ್ ಯಾವ ಮುಲಾಜಿಗೂ ಜಗ್ಗದೆ ಹಂತಕ ಪಡೆಯನ್ನು ಹಿಡಿದು ಹಾಕಿದ್ದರು.


ಚಾಮರಾಜಪೇಟೆ ಗೂಂಡಾ ಪೋಲೀಸಪ್ಪನಿಗೆ ಶಿಕ್ಷೆ ಇಲ್ಲವೇ?


ರಿಯಾಜ್

ಆತ ಪೊಲೀಸ್ ಅಧಿಕಾರಿ. ಜನರಿಗೆ ರಕ್ಷಣೆ ನೀಡಬೇಕಾದ್ದು ಅವನ ಕರ್ತವ್ಯ. ಆದರೆ ಮಾಡಿದ್ದು ಮಾತ್ರ ಅದಕ್ಕೆ ತದ್ವಿರುದ್ಧ ಕೆಲಸ. ರೊಕ್ಕಸ್ಥ ಆಪ್ತನೊಬ್ಬನ ಕೌಟುಂಬಿಕ ಕಲಹದಲ್ಲಿ ನೆರವಾಗುವ ಧಾವಂತದಲ್ಲಿ ವ್ಯಕ್ತಿಯೊಬ್ಬನನ್ನು ಠಾಣೆಗೆ ಕರೆಸಿಕೊಂಡು ಹಿಗ್ಗಾಮುಗ್ಗಾ ಹೊಡೆದಿದ್ದ; ಅದೂ, ಥರ್ಡ್‌ಕ್ಲಾಸ್ ಕ್ರಿಮಿನಲ್‌ಗೆ ಹೊಡೆಯುವಂತೆ ಬಟ್ಟೆ ಬಿಚ್ಚಿ, ಮೈಮೇಲೆ ನೀರು ಸುರಿದು, ಬಾಸುಂಡೆಗಳು ನರ್ತಿಸುವಂತೆ ಬಾರಿಸಿದ್ದ. ಅಷ್ಟಕ್ಕೂ ಆ ಪರಿ ದರ್ಪಿಷ್ಟ ಪೊಲೀಸ್ ಅಧಿಕಾರಿಯಿಂದ ಏಟು ತಿಂದದ್ದು ಒಬ್ಬ ಅಡ್ವೊಕೇಟ್. ಖಾಕಿಗೂ, ಕಪ್ಪುಕೋಟ್‌ಗೂ ಅಷ್ಟಕ್ಕಷ್ಟೆ ಅನ್ನೋದು ಗೊತ್ತಿರುವ ಸಂಗತಿಯೇ ಆದರೂ, ಪೊಲೀಸರು ಲಾಯರ್‌ಗಳನ್ನು ಸುಖಾಸುಮ್ಮನೆ ತಡವಿಕೊಳ್ಳುವುದಿಲ್ಲ. ಅಂತದ್ದರಲ್ಲಿ ಆತ ಅಡ್ವೊಕೇಟ್ ಅಂತ ಗೊತ್ತಿದ್ದೂ 'ನಿಗೂಢ' ಮರ್ಜಿಗೆ ಬಿದ್ದವನಂತೆ ಆ ಇನ್ಸ್‌ಪೆಕ್ಟರ್ ಹಲ್ಲೆ ಮಾಡುತ್ತಾನೆಂದರೆ ಇನ್ನು ಅವನ ಕೈಗೆ ಸಿಕ್ಕ ಸಾಮಾನ್ಯ ಜನರ ಪಾಡು ಹೇಗಿರಬೇಡ.


ಇದು ಸಿಲಿಕಾನ್ ಸಿಟಿಯ ಹೃದಯಭಾಗದಲ್ಲಿರುವ ಚಾಮರಾಜಪೇಟೆ ಠಾಣೆಯ ಇನ್ಸ್‌ಪೆಕ್ಟರ್ ಎಸ್.ಆರ್. ತನ್ವೀರ್‌ನ ರುದ್ರನರ್ತನದ ಸ್ಯಾಂಪಲ್. ತನ್ವೀರ್ ಸಾಹೇಬರ ಈ ಪರಾಕ್ರಮದ ವಿರುದ್ಧ ಕರ್ನಾಟಕ ರಾಜ್ಯ ಮಾನವಹಕ್ಕುಗಳ ಆಯೋಗದಲ್ಲಿ ದೂರೂ ದಾಖಲಾಗಿದೆ. ಅಲ್ಲೂ ತನ್ನ ಕೈಚಳಕ ತೋರಿಸಿದ ತನ್ವೀರ್ ಕೇಸೇ ಬಿದ್ದುಹೋಗುವಂತೆ ಕರಾಮತ್ತು ನಡೆಸಿದ್ದ. ಆದರೆ ಅದೀಗ ಬಯಲಾಗಿ ಅವನ ಕೃತ್ಯಕ್ಕೆ ಸಾಥ್ ನೀಡಿದ ಆಯೋಗದ ಇಬ್ಬರು ನೌಕರರು ಕೆಲಸ ಕಳೆದುಕೊಂಡು ಮನೆ ಸೇರಿದ್ದಾರೆ. ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ತನ್ವೀರ್ ಮೇಲೆ ಸ್ವತಃ ಮಾನವಹಕ್ಕು ಆಯೋಗವೇ ದೂರು ನೀಡಿದೆ. ಅಷ್ಟಾದರೂ ಈತ ಬುದ್ಧಿ ಕಲಿತಂತೆ ಕಾಣುತ್ತಿಲ್ಲ. ಈಗಲೂ ತನ್ನ ಪೊಲೀಸ್ ಪವರ್ ಬಳಸಿಕೊಂಡು ರೌಡಿಗಳನ್ನು ಛೂಬಿಟ್ಟು ದೂರು ನೀಡಿದ ಅಡ್ವೊಕೇಟ್ ಬೆದರಿಸುವ ಕೆಲಸವನ್ನು ಮುಂದುವರೆಸಿದ್ದಾನೆ. ಅಚ್ಚರಿಯ ಸಂಗತಿಯೆಂದರೆ ಆಯೋಗದಲ್ಲಿ ದೂರನ್ನು ರದ್ದು ಮಾಡಲು ತನ್ವೀರ್ ನಡೆಸಿದ್ದ ಸಂಚು ಆಂತರಿಕ ತನಿಖೆಯಿಂದ ಸಾಬೀತಾಗಿ, ಆ ಇಬ್ಬರು ನೌಕರರನ್ನು ವಜಾ ಮಾಡಲಾಗಿದ್ದರೂ ಆಯೋಗ ಕೊಟ್ಟ ದೂರಿನಲ್ಲಿ ಎ-1 ಆರೋಪಿಯಾಗಿರುವ ತನ್ವೀರ್ ಮಾತ್ರ ಇದುವರೆಗೆ ಖಾಕಿ ಖದರ್ರಿನಲ್ಲೇ ವಿಜೃಂಭಿಸುತ್ತಿದ್ದಾನೆ. ಎ-2, ಎ-3 ಆರೋಪಿಗಳಿಗೆ ಶಿಕ್ಷೆ, ಎ-1 ಆರೋಪಿಗೆ ರಕ್ಷೆ!

ಇದೆಲ್ಲ ಶುರುವಾದದ್ದು 2016ರ ಫೆಬ್ರವರಿಯಲ್ಲಿ. ಅಸಲಿಗೆ ಈ ರಾದ್ಧಾಂತದ ಮೂಲಸಂಗತಿ ತನ್ವೀರ್‌ನ ಠಾಣಾ ವ್ಯಾಪ್ತಿಗೆ ಬರುವುದೇ ಇಲ್ಲ. ಜಗಜೀವನ್ ರಾಂ ನಗರದ ರಿಯಾಜ್ ಎನ್ನುವ ರೊಕ್ಕಸ್ಥ ಪ್ರಭಾವಿಯ ಕುಟುಂಬದಲ್ಲಿ ಸಣ್ಣದೊಂದು ಬಿರುಕು ಕಾಣಿಸಿಕೊಂಡು ಗಂಡ-ಹೆಂಡಿರ ನಡುವೆ ವೈಮನಸ್ಸು ತಲೆಎತ್ತಿತ್ತು. ಅದು ಡೈವೋರ್ಸ್ ಹಂತಕ್ಕೂ ಬಂದು ತಲುಪಿತ್ತು. ಆಕೆಗೆ ಕಾನೂನು ನೆರವು ನೀಡುತ್ತಿದ್ದುದು ತನ್ವೀರ್‌ನಿಂದ ಹಲ್ಲೆಗೆ ಒಳಗಾದ ಡಿ. ವೆಂಕಟೇಶ್ ಎಂಬ ಜೂನಿಯರ್ ಅಡ್ವೊಕೇಟ್. ಅದೇ ಕಾರಣಕ್ಕೆ ರಿಯಾಜ್‌ಗೆ ವೆಂಕಟೇಶ್ ಮೇಲೆ ಮುನಿಸಿತ್ತು. ಹಾಗಾಗಿ ರಿಯಾಜ್, ವೆಂಕಟೇಶ್‌ಗೆ ಕೇಸಿನಿಂದ ಹಿಂದೆ ಸರಿಯುವಂತೆ ಕೊಲೆ ಬೆದರಿಕೆ ಹಾಕಿದ್ದ. ಈ ಕುರಿತು ಬ್ಯಾಟರಾಯನಪುರ ಠಾಣೆಯಲ್ಲಿ ವೆಂಕಟೇಶ್ ರಿಯಾಜ್ ಮೇಲೆ ದೂರನ್ನೂ ನೀಡಿದ್ದಾರೆ. ತನ್ನ ಆಪ್ತ ತನ್ವೀರ್‌ನ ಪೊಲೀಸ್ ಭಾಷೆಯಲ್ಲಿ ಅಡ್ವೊಕೇಟ್‌ಗೆ 'ಅಡ್ವೈಸ್' ಮಾಡಿಸಿದರೆ ಆತ ಕೇಸಿನಿಂದ ಹಿಂದೆ ಸರಿಯಬಹುದು ಅನ್ನೋ ಲೆಕ್ಕಾಚಾರದಲ್ಲಿ ರಿಯಾಜ್ ಸೀದಾ ತನ್ವೀರ್‌ನ ಚಾಮರಾಜಪೇಟೆ ಠಾಣೆಯನ್ನು ಎಡತಾಕಿದ್ದ. ಅಲ್ಲಿ ಅದೇನು ವ್ಯವಹಾರ ಕುದುರಿತೊ ಏನೊ, ಫೆಬ್ರವರಿ 19ರಂದು ತನ್ವೀರ್‌ನ ಠಾಣೆಯಿಂದ ವೆಂಕಟೇಶ್‌ಗೆ ಫೋನ್ ಕರೆಹೋಗಿತ್ತು. ಅದ್ಯಾವುದೊ ಕೇಸಿನ ವಿಚಾರವಾಗಿ ನಿಮ್ಮ ಸಹಿ ಬೇಕಿದೆ, ಹಾಗಾಗಿ ಸಾಹೇಬರು ಕರೆಯುತ್ತಿದ್ದಾರೆ ಬನ್ನಿ ಅಂತ ಫೋನ್ ಮಾಡಿದ ಪಿಸಿ ವೆಂಕಟೇಶ್‌ಗೆ ಸುದ್ದಿ ಮುಟ್ಟಿಸಿದ್ದ.


ಇನ್ಸ್‌ಪೆಕ್ಟರ್ ತನ್ವೀರ್

ರಿಯಾಜ್ ವ್ಯೂಹದ ಅರಿವಿರದಿದ್ದ ವೆಂಕಟೇಶ್ ಸೀದಾ ಠಾಣೆಗೆ ಹೋಗಿದ್ದಾನೆ. ಅಲ್ಲಿದ್ದ ತನ್ವೀರ್ ಮೊದಮೊದಲು ನಯವಾಗೇ ಡೀಲ್ ಕುದುರಿಸಲು ಇಪ್ಪತ್ತು ಸಾವಿರ ತಗೊಂಡು ಬ್ಯಾಟರಾಯನಪುರ ಠಾಣೆಯ ಕೇಸು ವಾಪಾಸ್ ತೆಗೆದುಕೊಳ್ಳುವಂತೆ ಆಫರ್ ಇಟ್ಟಿದ್ದ. ಆದರೆ ವೆಂಕಟೇಶ್ ಅದಕ್ಕೆ ಒಪ್ಪಿರಲಿಲ್ಲ. ಆಗಲೇ ನೋಡಿ ತನ್ವೀರ್‌ನ ಪರಾಕ್ರಮ ಅನಾವರಣಗೊಂಡದ್ದು. ಅಡ್ವೊಕೇಟ್ ವೆಂಕಟೇಶ್‌ನನ್ನು ಲಾಕಪ್‌ಗೆ ತಳ್ಳಿ, ಬಟ್ಟೆ ಬಿಚ್ಚಿಸಿ ಬೆತ್ತಲು ಮಾಡಿ, ಮೈಗೆಲ್ಲ ನೀರೆರಚಿ ತನ್ನ ಒಂದಿಬ್ಬರು ಸಿಬ್ಬಂದಿ ಸಮೇತ ಚೆನ್ನಾಗಿ ಥಳಿಸಿದ್ದ. ಅವನ ಬಲಗೈನ ರಕ್ತ ಹೆಪ್ಪುಗಟ್ಟುವಂತೆ ಬೂಟುಗಾಲಲ್ಲಿ ಒದ್ದಿದ್ದ. ತನ್ವೀರ್‌ನ ಏಟುಗಳಿಗೆ ತತ್ತರಿಸಿಹೋದ ವೆಂಕಟೇಶ್‌ನಿಂದ ಬಲವಂತವಾಗಿ ಖಾಲಿ ಪೇಪರ್‌ಗೆ ಸಹಿ ಪಡೆದು, ಹೆಬ್ಬೆಟ್ಟು ಒತ್ತಿಸಿಕೊಂಡು ಹೊರಕ್ಕೆ ಗದುಮಿದ್ದರು.

ಇತ್ತ ಠಾಣೆಯಿಂದ ಹೊರಬಂದ ವೆಂಕಟೇಶ್ ನೇರವಾಗಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಎಂಎಲ್‌ಸಿ (ಮೆಡಿಕೋ-ಲೀಗಲ್ ಕೇಸ್) ಮಾಡಿಸಿದ್ದ. ಫೆಬ್ರವರಿ 24ರಂದು ರಾಜ್ಯ ಮಾನವಹಕ್ಕು ಆಯೋಗಕ್ಕೆ ಬಂದ ವೆಂಕಟೇಶ್, ಅಧಿಕಾರ ದುರುಪಯೋಗಪಡಿಸಿಕೊಂಡು ವಿನಾಕಾರಣ ಹಲ್ಲೆ ಮಾಡಿದ ತನ್ವೀರ್ ಮೇಲೆ ದೂರು ದಾಖಲಿಸಿದ್ದ.


ಎಸಿಪಿ ವಿನಯ್ ಗಾಂವ್ಕರ್



ಮಧುಶರ್ಮ

ತನ್ವೀರ್ ಪ್ರಭಾವಕ್ಕೆ ಕೇಸೇ ಖತಂ

ತನ್ನ ವಿರುದ್ಧ ಮಾನವಹಕ್ಕು ಉಲ್ಲಂಘನೆಯ ಕೇಸು ದಾಖಲಾದದ್ದನ್ನು ಕೇಳಿ ತನ್ವೀರ್ ತಡಬಡಿಸಿಹೋಗಿದ್ದ. ಹೇಗಾದರು ಮಾಡಿ ದೂರಿಗೆ ಒಂದು ಗತಿ ಕಾಣಿಸದಿದ್ದರೆ ತನ್ನ ವೃತ್ತಿಗೇ ಕುತ್ತು ಬರಲಿದೆ ಎಂದರಿತ ಆತ ಅದಕ್ಕೆ ಬೇಕಾದ ತಯಾರಿಗಿಳಿದಿದ್ದ. ಆಗ ಅವನ ನೆರವಿಗೆ ಬಂದದ್ದು ಆಯೋಗದಲ್ಲಿ ಕೆಲಸ ಮಾಡುತ್ತಿದ್ದ ಗ್ರೂಪ್ ಡಿ ನೌಕರ ಲೋಕೇಶ್ ಮತ್ತು ಸ್ಟೆನೊ ಮೇಘಾ. ಮೊದಲು ಲೋಕೇಶ್ ಜೊತೆ ಡೀಲ್ ಕುದುರಿಸಿಕೊಂಡ ತನ್ವೀರ್ ಒಂದಿಷ್ಟು ಹಣದ ಆಮಿಷವೊಡ್ಡಿ ಹೇಗಾದರು ಮಾಡಿ ಕೇಸು ಬಿದ್ದುಹೋಗುವಂತೆ ಮಾಡಲು ಹೇಳಿದ್ದ. ಹಣದಾಸೆಗೆ ಬಲಿಯಾದ ಲೋಕೇಶ್ ತನ್ನ ಕಚೇರಿಯ ಮೇಘಾಳ ಜೊತೆ ಸೇರಿಕೊಂಡು ವೆಂಕಟೇಶ್ ಕೊಟ್ಟುಹೋಗಿದ್ದ ದೂರನ್ನೇ ಎತ್ತಿ ಆ ಜಾಗದಲ್ಲಿ ದೋಷಪೂರಿತ ಹೊಸದೊಂದು ಸೃಷ್ಟಿತ ದೂರನ್ನು ಇಟ್ಟಿದ್ದರು. ಬದಲಾಯಿಸಿದ ಈ ದೂರಿನಲ್ಲಿ ಮಾನವಹಕ್ಕುಗಳ ಆಯೋಗಕ್ಕೆ ಉದ್ದೇಶಿಸಿದ್ದ ವಿಳಾಸವನ್ನು ಬೆಂಗಳೂರು ದಕ್ಷಿಣ ವಿಭಾಗದ ಎಸಿಪಿಗೆ ಉದ್ದೇಶಿಸಿ ಟೈಪಿಸಿದ್ದರು. ಅಲ್ಲದೇ ಅರ್ಜಿದಾರರ ವಿಳಾಸವನ್ನೇ ಅಪೂರ್ಣವಾಗಿ, ಗೋಜಲುಗೋಜಲಾಗಿ ದಾಖಲಿಸಿದ್ದರು ಮತ್ತು ಕೊನೆಯಲ್ಲಿ ಇರಬೇಕಿದ್ದ ಅರ್ಜಿದಾರರ ಸಹಿಯನ್ನು ಖಾಲಿಬಿಟ್ಟಿದ್ದರು.

ಸಹಜವಾಗಿಯೇ ತಮ್ಮ ಕಚೇರಿಗೆ ಸಂಬಂಧಿಸಿದೆ ಬೇರೊಬ್ಬರಿಗೆ ಉದ್ದೇಶಿಸಿದ್ದ ವಿಳಾಸವೇ ಇರದ, ಕಡೇಪಕ್ಷ ಅರ್ಜಿದಾರರ ಸಹಿಯೂ ಇಲ್ಲದ ದೂರನ್ನು ಆಯೋಗ ತಾನೆ ಹೇಗೆ ಮಾನ್ಯ ಮಾಡೀತು? ಕೇಸನ್ನು ವಜಾ ಮಾಡಿತ್ತು. ಇತ್ತ ಆಯೋಗಕ್ಕೆ ಕಂಪ್ಲೇಂಟ್ ಕೊಟ್ಟು ತುಂಬಾ ದಿನವಾದರೂ ಸುದ್ದಿ ಬಾರದಿದ್ದರಿಂದ ಸಂಶಯಗೊಂಡ ವೆಂಕಟೇಶ್ ಹೋಗಿ ವಿಚಾರಿಸಿದಾಗ ಅರ್ಜಿಯಲ್ಲಿದ್ದ ಮೂರು ದೋಷಗಳ ಕಾರಣದಿಂದ ನಿಮ್ಮ ದೂರನ್ನು ವಜಾ ಮಾಡಲಾಗಿದೆ ಅನ್ನೋ ಲಿಖಿತ ಉತ್ತರ ಅವರ ಕೈತಲುಪಿತ್ತು. ಆತ ಅಕ್ಷರಶಃ ಶಾಕ್ ಆಗಿದ್ದ. ಯಾಕೆಂದರೆ ವೆಂಕಟೇಶ್ ಕಂಪ್ಲೇಂಟ್ ಕೊಟ್ಟಾಗ ಅದರ ಒಂದು ದೃಢೀಕೃತ ನಕಲು ಪ್ರತಿಯನ್ನು ಪಡೆದಿಟ್ಟುಕೊಂಡಿದ್ದ. ಅದರಲ್ಲಿ ಈ ಮೇಲಿನ ಯಾವ ದೋಷಗಳೂ ಇರಲಿಲ್ಲ. ಕೂಡಲೇ ಆತ ಆಯೋಗದ ಕಾರ್ಯದರ್ಶಿ ಮಧುಶರ್ಮರನ್ನು ಭೇಟಿಯಾಗಿ ತನ್ನ ಬಳಿಯಿದ್ದ ದೂರಿನ ಪ್ರತಿ ಮತ್ತು ಕೇಸು ರದ್ದಾಗಲು ಆಯೋಗ ಕೊಟ್ಟ ಉತ್ತರವನ್ನೂ ಮುಂದಿಟ್ಟಿದ್ದ.

ನಡೆದಿದ್ದ ಅಯೋಮಯ ಕಂಡು ಸ್ವತಃ ಮಧುಶರ್ಮರವರೆ ದಂಗಾಗಿಹೋಗಿದ್ದರು. ತಮ್ಮ ಕಾಲಬುಡದಲ್ಲೇ ಇಂತ ಅವ್ಯವಹಾರ ನಡೆದದ್ದನ್ನು ಕಂಡು ಸಿಟ್ಟಿಗೆದ್ದ ಅವರು ಆಯೋಗದ ಡಿಎಸ್‌ಪಿ ಕೇಶವ್‌ರವರಿಗೆ ಸಂಪೂರ್ಣ ತನಿಖೆ ನಡೆಸಿ ವರದಿ ಒಪ್ಪಿಸುವಂತೆ ಆದೇಶಿಸಿದ್ದರು. ತನಿಖೆ ಸಾಗಿದಂತೆ ತನ್ವೀರ್‌ನ ಕರ್ಮಕಾಂಡಗಳೆಲ್ಲ ಒಂದೊಂದಾಗಿ ಹೊರಬಂದವು. ಲೋಕೇಶ್ ಮತ್ತು


ವೆಂಕಟೇಶ್

ಮೇಘಾ ಮೊದಮೊದಲು ತಪ್ಪಿಸಿಕೊಳ್ಳಲು ನೆಪ ನೀಡಿದರಾದರೂ ತನಿಖೆ ಬಿಗಿಗೊಂಡಾಗ 'ಇನ್ಸ್‌ಪೆಕ್ಟರ್ ತನ್ವೀರ್‌ರೆ ತಮಗೆ ಹಣದ ಆಮಿಷವೊಡ್ಡಿ ಇಂಥಾ ಕೆಲಸ ಮಾಡಿಸಿದ್ದರು' ಅನ್ನೋ ತಪ್ಪೊಪ್ಪಿಗೆ ನೀಡಿದ್ದರು. ಅವರ ಇಂಚಿಂಚು ಹೇಳಿಕೆಗಳನ್ನು ಮೊಬೈಲ್ ಕಾಲ್ ಡೀಟೈಲ್‌ಗಳು ಆಧಾರಸಹಿತ ರುಜುವಾತು ಪಡಿಸಿದ್ದವು. ತನಿಖೆ ಪೂರ್ಣಗೊಳಿಸಿದ ಕೇಶವ್‌ರವರು 'ಇನ್ಸ್‌ಪೆಕ್ಟರ್ ತನ್ವೀರ್, ತಮ್ಮ ವೈಯಕ್ತಿಕ ಲಾಭಕ್ಕಾಗಿ ತಮ್ಮ ಸ್ಥಾನ ಮತ್ತು ಹಣ ದುರುಪಯೋಗಪಡಿಸಿಕೊಂಡು ಮಾನವಹಕ್ಕು ಆಯೋಗದ ದಾಖಲೆಗಳನ್ನು ನಾಶಪಡಿಸಿ ಖೋಟಾ ದಾಖಲೆಗಳನ್ನು ಸೃಷ್ಟಿಸಿರುವುದು ನಿಜ ಮತ್ತು ಇದರಲ್ಲಿ ನಮ್ಮ ಕಚೇರಿಯ ಲೋಕೇಶ್ ಮತ್ತು ಮೇಘಾ ಭಾಗಿಯಾಗಿರುವುದೂ ಸಂಶಯಾತೀತವಾಗಿ ಸಾಬೀತಾಗಿದೆ' ಅನ್ನೋ ವರದಿಯನ್ನು ಮಧುಶರ್ಮ ಮೇಡಂ ಕೈಗೊಪ್ಪಿಸಿದ್ದರು.


ಬಿತ್ತು ಮತ್ತೊಂದು ಕೇಸು

ಮಧುಶರ್ಮರವರು ಅಧಿಕಾರ ದುರ್ಬಳಕೆಯ ಈ ಪ್ರಕರಣದಲ್ಲಿ ವಿಶೇಷ ಆಸಕ್ತಿ ವಹಿಸಿದ್ದರಿಂದ ಸ್ವತಃ ಮಾನವಹಕ್ಕು ಆಯೋಗವೇ ತನ್ನ ವಿಲೇಖನಾಧಿಕಾರಿ ಸೂರ್ಯನಾರಾಯಣ ಗೌಡರ ಮೂಲಕ ತನ್ವೀರ್, ಲೋಕೇಶ್, ಮೇಘಾ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಅಕ್ಟೋಬರ್ 03ರಂದು ದೂರು ದಾಖಲಿಸಿತ್ತು. ಅದರಲ್ಲಿ ಇನ್ಸ್‌ಪೆಕ್ಟರ್ ತನ್ವೀರ್‌ನೇ ಎ-1 ಆರೋಪಿ. ಅಲ್ಲದೇ ಆತನೊಂದಿಗೆ ಶಾಮೀಲಾಗಿದ್ದ ಲೋಕೇಶ್ ಮತ್ತು ಮೇಘಾರನ್ನು ಕೆಲಸದಿಂದ ವಜಾ ಮಾಡಿ ಮನೆಗೆ ಕಳುಹಿಸಲಾಗಿದೆ.

ಈ ಕೇಸನ್ನು ಕಬ್ಬನ್‌ಪಾರ್ಕ್ ಉಪವಿಭಾಗದ ಎಸಿಪಿಯವರಾದ ವಿನಯ್ ಗಾಂವ್ಕರ್ ತನಿಖೆ ನಡೆಸುತ್ತಿದ್ದಾರೆ. ಈ ಹಿಂದೆ ಮೆಸ್ಕಾಂ ವಿಚಕ್ಷಣಾ ದಳದಲ್ಲಿದ್ದಾಗ ವಿನಯ್ ತಕ್ಕಮಟ್ಟಿಗೆ ಒಳ್ಳೆಯ ಆಫೀಸರ್ ಎನಿಸಿಕೊಂಡಿದ್ದರು. ಹಾಗಾಗಿ ಮಾನವಹಕ್ಕು ಆಯೋಗದಿಂದಲೇ ತಪ್ಪಿತಸ್ಥನೆಂದು ಘೋಷಿಸಲ್ಪಟ್ಟ ತನ್ವೀರ್‌ಗೆ ಆದಷ್ಟು ಬೇಗ ತಕ್ಕ ಶಾಸ್ತಿ ಆಗಲಿದೆ ಅಂತಲೇ ಭಾವಿಸಲಾಗಿತ್ತು. ಆದರೆ ಅದೇನು ಒತ್ತಡವೋ, ಒಪ್ಪಂದಗಳೋ ಗೊತ್ತಿಲ್ಲ. ಕೇಸು ದಾಖಲಾಗಿ ಒಂದೂವರೆ ತಿಂಗಳಾಗುತ್ತ ಬಂದರೂ ತನ್ವೀರ್ ಆರಾಮಾಗಿ ಖಾಕಿಯಲ್ಲೇ ಮಿಂಚುತ್ತಿದ್ದಾನೆ. ಸಾಲದೆಂಬಂತೆ ಎರಡು ಬಾರಿ ದೂರುದಾರ ವೆಂಕಟೇಶ್ ಬಳಿ ರೌಡಿಗಳನ್ನು ಕಳುಹಿಸಿ ಜೀವಬೆದರಿಕೆ ಹಾಕಿಸುವ ಮೂಲಕ ಕೇಸು ವಾಪಾಸ್ ತೆಗೆಸುವ ಕಿಡಿಗೇಡಿತನವನ್ನೂ ತೋರಿದ್ದಾನೆ. ಈ ಬೆದರಿಕೆಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಎಸಿಪಿ ಮತ್ತು ಡಿಸಿಪಿಗಳಿಗೂ ವೆಂಕಟೇಶ್ ದೂರು ನೀಡಿದ್ದಾರೆ. ಅಷ್ಟಾದರೂ ತನ್ವೀರ್‌ನ ಮೇಲೆ ಇಲಾಖೆ ಕ್ರಮಕೈಗೊಳ್ಳಲು ಮೀನಾಮೇಷ ಎಣಿಸುತ್ತಿರುವುದು ಇಡೀ ಇಲಾಖೆಯ ವಿಶ್ವಾಸಾರ್ಹತೆಯನ್ನೇ ಅನುಮಾನಿಸುವಂತೆ ಮಾಡಿದೆ.

ಆತ ಮಾನವಹಕ್ಕು ಉಲ್ಲಂಘನೆ ಮಾಡಿದ್ದು ನಿಜವೋ ಇಲ್ಲವೋ ಅನ್ನೋದನ್ನು ದೂರುದಾರ ವೆಂಕಟೇಶ್ ಎರಡನೇ ಬಾರಿ ಹೊಸದಾಗಿ ಕೊಟ್ಟ ದೂರಿನ ಮೇಲೆ ಆಯೋಗ ವಿಚಾರಣೆ ನಡೆಸುತ್ತೆ. ಆದರೆ ಸ್ವತಃ ಮಾನವಹಕ್ಕು ಆಯೋಗವೇ ತನ್ವೀರ್ ಲಂಚ ಮತ್ತು ಸಾಕ್ಷ್ಯನಾಶ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಅಂತ ಘೋಷಿಸಿ (ಅನುಮಾನಿಸಿ ಅಲ್ಲ!) ದೂರು ನೀಡಿದಾಗಲೂ ಇಲಾಖೆ ಮೌನ ವಹಿಸಿರುವುದೇಕೆ?

■ ಗಿರೀಶ್ ತಾಳಿಕಟ್ಟೆ



(k) ವಿಳಾಸ : Registrar, KSHRC, 5th Phase M S Building, Bengaluru city, Karnataka-560001 (l) ಲಿಂಗ : Male

6. ಗುಪ್ತಿರುವ / ಅನುಮಾನಿತ/ಅಪರಿಚಿತ ವ್ಯಕ್ತಿಯ ಪೂರ್ಣ ವಿವರಗಳು

Sl.No.	ಹೆಸರು / ತಂದೆಯ ಹೆಸರು / ಜಾತಿ / ವಿಳಾಸ	ವಿಧ	ವ್ಯಕ್ತಿಯ ವಿಧ	ಲಿಂಗ	ವಯಸ್ಸು	ವೃತ್ತಿ
1	Tanveer(A1) ,Police Inspector Chamarajpet Police Station,BengaluruBengaluru city, Karnataka	Accused	Police	Male		Police officer
2	Megha(A2) ,Stenographer (Part time) KSHRC, 5Th Phase,M S BuildingBengaluru city, Karnataka-560001	Accused	Adult	Female		
3	Lokesh S(A3) ,D Group Employee, KSHRC, 5Th Phase M S BuildingBengaluru city Karnataka-560001	Accused	Adult	Male		

ಆಯೋಗ ತನ್ವೀರ್ ಮೇಲೆ ಕೊಟ್ಟ ಕೇಸಿನ ಎಫ್‌ಐಆರ್

ಮೈಸೂರ್ ಮೇಯರ್‌ಗಿರಿ: ಈ ಬಾರಿ ಮೇಯೋರು ಯಾರು?

ಮೈಸೂರು ಮಹಾನಗರ ಪಾಲಿಕೆಯ ಹಾಲಿ ಮೇಯರ್ ಬಿ.ಎಲ್.ಭೈರಪ್ಪ ಉಪ ಮೇಯರ್ ವನಿತಾ ಪ್ರಸನ್ನರವರ ಅಧಿಕಾರಾವಧಿ ನವೆಂಬರ್ 12ಕ್ಕೆ ಅಂತ್ಯಗೊಂಡಿರುವುದರಿಂದ ಸರ್ಕಾರ ಹೊಸ ಮೀಸಲಾತಿ ಪಟ್ಟಿಯನ್ನು ವಾರದ ಹಿಂದೆಯೇ ಪ್ರಕಟಿಸಿದೆ: ಈ ಬಾರಿ ಮೇಯರ್‌ಗಿರಿ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದರೆ ಉಪಮೇಯರ್ ಕುರ್ಚಿಯನ್ನು ಸಾಮಾನ್ಯ ಮಹಿಳೆಗೆ ನಿಗದಿಗೊಳಿಸಲಾಗಿದೆ. ಇದು ಮೈಸೂರಿನ ರಾಜಕೀಯ ವಲಯದಲ್ಲಿ ಭಾರೀ ಸಂಚಲನ ಉಂಟುಮಾಡಿದೆ. ಯಾಕೆಂದರೆ ಈ ಬಾರಿ ಮೇಯರ್ ಸ್ಥಾನ ಬಿಸಿಎಂ (2ಬ) ಅಥವಾ ಪರಿಶಿಷ್ಟ ಪಂಗಡಕ್ಕೆ ಮೀಸಲಾಗಬಹುದು ಎಂಬ ರಾಜಕೀಯ ಲೆಕ್ಕಾಚಾರಗಳಿದ್ದವು. ಆದರೆ ಅದೆಲ್ಲ ತಲೆಕೆಳಗಾಗಿ ಎರಡೂ ಸಾಮಾನ್ಯ ವರ್ಗಗಳಿಗೆ ಮೀಸಲಾಗಿರುವುದರಿಂದ ಪ್ರಬಲ ಪೈಪೋಟಿಗೆ ವೇದಿಕೆ ಸಿದ್ಧಗೊಂಡಿದೆ.

ಮೈಸೂರು ರಾಜ್ಯದ ಮುಖ್ಯಮಂತ್ರಿಗಳ ತವರುಜಿಲ್ಲೆಯಾಗಿರುವುದರಿಂದ ತುಸು ಹೆಚ್ಚೇ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಪಾಲಿಕೆಯ ಮೇಯರ್ ಆಗುವುದೆಂದರೆ ರಾಜಕೀಯ ಬೆಳವಣಿಗೆಯತ್ತ ಒಂದು ಉನ್ನತ ಮೆಟ್ಟಿಲು ಏರಿದಂತೆ. ಅದಕ್ಕಾಗೇ ಮಹಾಪೌರ ಸ್ಥಾನದ ಮೇಲೆ ಎಲ್ಲರಿಗೂ ಕಣ್ಣು. ಹಾಗಾಗಿ ಮೈಸೂರು ಮಹಾನಗರ ಪಾಲಿಕೆ ಮಹಾಪೌರ, ಉಪಮಹಾಪೌರರ ಸ್ಥಾನ ಮೀಸಲಾತಿ ಹೊರಬೀಳುತ್ತಿದ್ದಂತೆ ಪಾಲಿಕೆಯ ಘಟಾನುಘಟಿ ಸದಸ್ಯರು ಆಗಲೇ ಒಳ ರಾಜಕಾರಣ ಶುರುವಿಟ್ಟುಕೊಂಡಿದ್ದಾರೆ.

ಈ ಒಳರಾಜಕೀಯಕ್ಕೆ ಮೂರು ಕಾರಣಗಳು ಧುತ್ತೆಂದು ಎದುರಾಗುತ್ತವೆ. ಮೊದಲನೆಯದಾಗಿ ಮಹಾಪೌರರ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವುದರಿಂದ ಘಟಾನುಘಟಿ ರಾಜಕಾರಣಿಗಳು ಇದರಲ್ಲಿ ಕೈ ತೂರಿಸುತ್ತಾರೆ. ಅಲ್ಲದೆ ಅಧಿಕಾರ ಹಿಡಿಯಲು ಸಾಮಾನ್ಯ ವರ್ಗದಲ್ಲಿ ಪೈಪೋಟಿ ಹೆಚ್ಚು, ಅಧಿಕಾರ ಬೇಡ ಎನ್ನುವ ಸಾಮಾನ್ಯ ವರ್ಗದ ಸದಸ್ಯರು ತುಂಬಾ ವಿರಳ ಅಥವಾ ಇಲ್ಲವೇ ಇಲ್ಲ ಎನ್ನಬಹುದು. ಇನ್ನೊಂದು ಕಾರಣ ಪ್ರಸ್ತುತ ಅಧಿಕಾರಾವಧಿಯಲ್ಲಿ ನಗರಪಾಲಿಕೆಯಲ್ಲಿ ಅಧಿಕಾರ ಹಿಡಿಯಲು ಯಾವ ಪಕ್ಷಕ್ಕೂ ಬಹುಮತ ಇಲ್ಲದಿರುವುದು. ಯಾವುದೇ ಪಕ್ಷ ಅಧಿಕಾರ ಹಿಡಿಯಬೇಕೆಂದರೆ ಇನ್ನೊಂದು ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳಬೇಕಾಗಿರುವುದು ಅನಿವಾರ್ಯ. ಕೊನೆಯ ಕಾರಣವೆಂದರೆ ಮುಖ್ಯಮಂತ್ರಿಗಳ ತವರು ಸ್ಥಾನದಲ್ಲಿ ಕಾಂಗ್ರೆಸ್ಸನ್ನು ಅಧಿಕಾರದಿಂದ ದೂರ ಇಡುವ ಪ್ರಯತ್ನದಲ್ಲಿ ಜಯ ಸಾಧಿಸಿರುವ ಜೆಡಿಎಸ್ ಮತ್ತು ಬಿಜೆಪಿ ಈಗಾಗಲೇ ಹೊಂದಾಣಿಕೆ ಮಾಡಿಕೊಂಡು ಅಧಿಕಾರ ಅನುಭವಿಸುತ್ತಿವೆ.

ಜೆಡಿಎಸ್-ಬಿಜೆಪಿ ಮೈತ್ರಿ

ಮೈಸೂರು ಮಹಾನಗರ ಪಾಲಿಕೆಯಲ್ಲಿ ಒಟ್ಟು 65 ಸದಸ್ಯ ಸ್ಥಾನಗಳಿದ್ದು, ಕಾಂಗ್ರೆಸ್‌ನಿಂದ 20 ಸದಸ್ಯರು, ಜೆಡಿಎಸ್‌ನ 20 ಸದಸ್ಯರು, ಬಿಜೆಪಿಯಲ್ಲಿ 13 ಸದಸ್ಯರು, 1 ಕೆಜೆಪಿ, 1 ಬಿಎಸ್‌ಆರ್, ಎಸ್‌ಡಿಪಿಐ ಪಕ್ಷದಿಂದ 2 ಸದಸ್ಯರು, 8 ಮಂದಿ ಪಕ್ಷೇತರ ಸದಸ್ಯರಿದ್ದಾರೆ. ಹಾಗಾಗಿ ಯಾವ ಪಕ್ಷಕ್ಕೂ ಬಹುಮತ ಸಿಗದೆ ಮೈತ್ರಿ ಅನಿವಾರ್ಯವಾಗಿತ್ತು, ಹಾಗಾಗಿ ಜೆಡಿಎಸ್ ಹಾಗೂ ಬಿಜೆಪಿ ಪಕ್ಷಗಳು ಹೊಂದಾಣಿಕೆ ಮಾಡಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದಿದ್ದವು. ಕಾಂಗ್ರೆಸ್ ಪಕ್ಷವೂ ಮೈತ್ರಿಗೆ ಉತ್ಸುಕತೆ ತೋರಿದರೂ ಉದ್ದೇಶಪೂರ್ವಕವಾಗಿ ಮೈತ್ರಿಯನ್ನು ತಪ್ಪಿಸಲಾಗಿತ್ತು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲಿ ಕಾಂಗ್ರೆಸ್ ಕೈನಿಂದ ಅಧಿಕಾರ ಕಿತ್ತುಕೊಳ್ಳುವುದು ಜೆಡಿಎಸ್ ಉದ್ದೇಶವಾಗಿತ್ತು. ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡಿದ್ದ ಬಿಜೆಪಿ ಪಕ್ಷ ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡು ಆ ಪಕ್ಷಕ್ಕೆ ಮೇಯರ್‌ಗಿರಿಯನ್ನು ಬಿಟ್ಟುಕೊಟ್ಟು ತಾನು ಉಪ ಮಹಾಪೌರರ ಸ್ಥಾನಕ್ಕೆ ಸಮಾಧಾನಗೊಂಡಿತ್ತು.

ಈಗಾಗಲೇ ಎರಡು ಅವಧಿಯಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿಯು ಅಧಿಕಾರದ ಚುಕ್ಕಾಣಿ ಹಿಡಿದಿದ್ದು ಈ ಬಾರಿಯೂ ಮುಂದುವರಿಯುವ ಸಾಧ್ಯತೆ ಹೆಚ್ಚಾಗಿದೆ. ಜೆಡಿಎಸ್ ಈ ಬಾರಿಯೂ ಮಹಾಪೌರರ ಸ್ಥಾನಕ್ಕೆ ಬಿಗಿಪಟ್ಟು ಹಿಡಿದಿದ್ದು, ಬಿಜೆಪಿ ಬೇಡಿಕೆಯಾಗಿರುವ ಮಹಾಪೌರ ಸ್ಥಾನ ಬಿಟ್ಟುಕೊಡಲು ಖಚಿತವಾಗಿ ನಿರಾಕರಿಸಿರುವುದರಿಂದ ಒಂದು ವೇಳೆ ಜೆಡಿಎಸ್-ಬಿಜೆಪಿ ಹೊಂದಾಣಿಕೆ ಮುಂದುವರಿದರೆ ಮಹಾಪೌರರ ಸ್ಥಾನ ಜೆಡಿಎಸ್ ಪಾಲಾಗುವುದು ಖಚಿತ. ಬಿಜೆಪಿ ಯಾಥಾಸ್ಥಿತಿಯಂತೆ ಉಪಮಹಾಪೌರರ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳಬೇಕಾಗುತ್ತದೆ. ಏಕೆಂದರೆ ಒಂದುವೇಳೆ ಬಿಜೆಪಿ ಮಹಾಪೌರರ ಸ್ಥಾನಕ್ಕೆ ಪಟ್ಟು ಹಿಡಿದರೆ ಜೆಡಿಎಸ್ ಬಿಜೆಪಿಯೊಂದಿಗಿನ ಮೈತ್ರಿ ಸಂಬಂಧವನ್ನು ಕಡಿದುಕೊಂಡು ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಂಡರೆ ಈಗಿರುವ ಉಪಮಹಾಪೌರರ ಸ್ಥಾನವೂ ಕೈತಪ್ಪಿ ಹೋಗುತ್ತದೆ ಎಂಬ ಆತಂಕ ಬಿಜೆಪಿಯದ್ದು.

ಕೈಗೆ ಅಧಿಕಾರ ಕೊಡಲು ಜೆಡಿಎಸ್ ಸಿದ್ಧವಿಲ್ಲ

ಒಂದುವೇಳೆ ಮೇಯರ್‌ಗಿರಿಗೆ ಹಠ ಹಿಡಿದು ಜೆಡಿಎಸ್, ಬಿಜೆಪಿಯೊಂದಿಗೆ ಮೈತ್ರಿ ಮುರಿದುಕೊಂಡು ಕಾಂಗ್ರೆಸ್ ಜೊತೆ ಕೈಜೋಡಿಸಿದರೂ ಆ ಪಕ್ಷಕ್ಕೆ ಮೇಯರ್‌ಗಿರಿ ಮತ್ತಷ್ಟು ಕಗ್ಗಂಟಾಗಲಿದೆ. ಏಕೆಂದರೆ ಎರಡೂ ಪಕ್ಷಗಳಲ್ಲಿ ಸದಸ್ಯರ ಸಂಖ್ಯೆಯಲ್ಲಿ (ಕಾಂಗ್ರೆಸ್-20, ಜೆಡಿಎಸ್-20) ಸಮಬಲವಿದೆ. ಆಗ ಕಡಿಮೆ ಸದಸ್ಯರಿರುವ ಬಿಜೆಪಿಯನ್ನು ಬ್ಲಾಕ್‌ಮೇಲ್ ಮಾಡಿದಂತೆ ಕಾಂಗ್ರೆಸ್‌ನ್ನು ಹೆದರಿಸಲು ಆಗದು ಎನ್ನುವ ಸತ್ಯ ಜೆಡಿಎಸ್‌ಗೆ ಗೊತ್ತು. ಅಲ್ಲದೇ ಈಗಾಗಲೇ ಎರಡು ಬಾರಿ ಮೇಯರ್‌ಗಿರಿ ಅನುಭವಿಸಿರುವುದರಿಂದ ಮತ್ತು ಇಷ್ಟುದಿನ ತಮ್ಮನ್ನು ಅಧಿಕಾರದಿಂದ ದೂರವಿಟ್ಟುದುದರಿಂದ ಮೇಯರ್‌ಗಿರಿ ತಮಗೇ ಬೇಕು ಅಂತ ಕಾಂಗ್ರೆಸ್ ಪಟ್ಟು ಹಿಡಿಯಬಹುದು. ಈ ಎಲ್ಲಾ ಕಾರಣದಿಂದ ಬಿಜೆಪಿ ಜೊತೆಗಿನ ಮೈತ್ರಿ ಕತ್ತರಿಸಿಕೊಳ್ಳುವುದು ಜೆಡಿಎಸ್‌ಗೂ ಸುಲಭದ ಮಾತಲ್ಲ.

ಮೀಸಲಾತಿ ಪ್ರಕಟವಾಗುತ್ತಿದ್ದಂತೆ ಜೆಡಿಎಸ್‌ನ ರಾಜಕೀಯ ಗರಿಗೆದರಿದ್ದರೆ ಬಿಜೆಪಿಯಲ್ಲಿ ಬಂದದ್ದು ಬರ ಎಂಬರತೆ ಸಪ್ಪೆಯಾಗಿದೆ. ಇನ್ನು ಕಾಂಗ್ರೆಸ್ ನ ನಿಗೂಢವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗ ಜಿಲ್ಲಾ ಉಸ್ತುವಾರಿ ಸಚಿವರಾದ ಎಚ್.ಸಿ.ಮಹದೇವ ಮೈಸೂರಿನ ಶಾಸಕರಾದ ವಾಸು, ಎಂ.ಕೆ.ಸೋಮಶೇಖ ಅವರಿಗೆ ಇದರಲ್ಲಿ ಯಾವುದೇ ಆಸಕ್ತಿ ಇದ್ದಂತೆ ಕಾಣುತ್ತಿ ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಂಡು ಉಪ ಅನುಭವಿಸುವುದಕ್ಕಿಂತ ಗೌರವವಾಗಿ ವಿರೋಧ ಪಕ್ಷದಲ್ಲಿ ಕೂರುವುದು ಲೇಸು ಎಂಬ ನಿಲುವು ಇವರಿಗೆ ಇದ್ದ ಕಾಣುತ್ತಿದೆ. ಆದರೆ ವಿರೋಧ ಪಕ್ಷದ ನಾಯಕರಾ ಜೆ.ಎಸ್.ಜಗದೀಶ್, ಮೈಸೂರಿನ ಶಾಸಕರಾದ ವಾಸು ಮ ಪಿರಿಯಾಪಟ್ಟಣದ ಶಾಸಕ ಬಿಡಿಎ ಅಧ್ಯಕ್ಷ ಕೆ.ವೆಂಕಟೇಶ ಬೆಂಬಲಿಗ ಪ್ರಶಾಂತ್‌ಗೌಡ ಮಹಾಪೌರರಾಗುವ ಕನ ಕಾಣುತ್ತಾ ಪೈಪೋಟಿ ನಡೆಸುತ್ತಿದ್ದಾರೆ. ಉಪ ಮಹಾಪೌ ಸ್ಥಾನಕ್ಕೆ ನಮ್ಮದೂ ಒಂದು ಕಾದಾಟವಿರಲಿ ಎಂಬ ರತ್ನಮ್ಮ ಶಾಂತವೀರೇಂದ್ರ ಸ್ವಾಮಿ, ಸಿ.ಎಸ್.ರಜನಿ ಅಣ್ಣ ಆಕಾಂಕ್ಷಿಗಳಷ್ಟೆ ಆಗಿದ್ದಾರೆ.


ಆಪರೇಷನ್ ಹಸ್ತ? ಬಿಜೆಪಿಗೆ ಮೇಯರ್‌ಗಿರಿ?


ಒಂದುವೇಳೆ ಕಾಂಗ್ರೆಸ್‌ನವರು ಜೆಡಿಎಸ್ ಅಥ ಬಿಜೆಪಿಯೊಂದಿಗಿನ ಹೊಂದಾಣಿಕೆ ನಿರಾಕರಿಸಿ ಸ್ವಂತವಾ ಚುನಾವಣೆ ಎದುರಿಸುತ್ತೇವೆಂದರೂ ಪಾಲಿಕೆ ಸದಸ್ಯರ (ಸ್ಥಾನಗಳ ಜೊತೆಗೆ ಒಬ್ಬ ಲೋಕಸಭಾ ಸದಸ್ಯ, ನಾಲ್ವ ಶಾಸಕರು, ನಾಲ್ವರು ವಿಧಾನ ಪರಿಷತ್ ಸದಸ್ಯರು ಮ ಚಲಾಯಿಸುವ ಹಕ್ಕು ಹೊಂದಿದ್ದು ಮಹಾಪೌರರಾಗ 38 ಮತಗಳ ಬೇಕಾಗುತ್ತದೆ. ಇದರಲ್ಲಿ ಕಾಂಗ್ರೆಸ್ ಪಾಲಿಕೆಯ 20 ಮಂದಿ ಸದಸ್ಯರು, ಮೂವರು ಶಾಸಕ ಒಬ್ಬ ವಿಧಾನ ಪರಿಷತ್ ಸದಸ್ಯ ಸೇರಿದರೆ 2 ಮತಗಳಾಗುತ್ತವೆ. ಬೇರೆ ಸದಸ್ಯರನ್ನು ಸೆಳೆಯುತ್ತೇವೆಂದ ಬಿಎಸ್‌ಆರ್‌ನ ಒಬ್ಬ ಸದಸ್ಯ, ಎಸ್‌ಡಿಪಿಐನ 2 ಸದಸ್ಯ 7 ಮಂದಿ ಪಕ್ಷೇತರರು ಸೇರಿದರೆ 10 ಮತಗಳಾಗುತ್ತ ಕಾಂಗ್ರೆಸ್‌ನ 24 ಮತಗಳೊಂದಿಗೆ 10 ಮತಗಳು ಸೇರಿದ 34 ಮತಗಳಾಗುತ್ತವೆ. ಆದರೆ ಮಹಾಪೌರರಾಗಲು 3 ಮತಗಳ ಅಗತ್ಯವಿದೆ. ಆದ್ದರಿಂದ ಕಾಂಗ್ರೆಸ್ ಅಧಿಕಾ ಹಿಡಿಯಬೇಕೆಂದರೆ ಅದು ಪ್ರಯಾಸದ ಕೆಲಸ. ಅಧಿಕಾ ಬೇಕೆಂಬ ಹಟವಿದ್ದರೆ ಬಿಜೆಪಿಯ ಜೊ ಕೈಜೋಡಿಸಬೇಕಾಗುತ್ತದೆ ಅಥವಾ ಅನಿವಾರ್ಯವಾ ಆಪರೇಷನ್ ಹಸ್ತಕ್ಕೆ ಕೈ ಹಾಕಬೇಕಾಗುತ್ತದೆ.


ಇಂದಿನ ಮೂರು ಅವಧಿಯಲ್ಲಿರುವಂತೆಯೇ ಜೆಡಿಎ ಬಿಜೆಪಿ ಹೊಂದಾಣಿಕೆ ಮಾಡಿಕೊಳ್ಳುವುದಾದರೆ ಪಾಲಿಕೆ ಜೆಡಿಎಸ್‌ನ 22 ಸದಸ್ಯರು, ಬಿಜೆಪಿಯ 13 ಸದಸ್ಯ ಒಬ್ಬ (ಬಿಜೆಪಿ) ಸಂಸದ, ಒಬ್ಬ (ಜೆಡಿಎಸ್) ಶಾಸಕ, ಮೂವ ವಿಧಾನ ಪರಿಷತ್ ಸದಸ್ಯರು ಸೇರಿ ಮಹಾಪೌರರಾಗ ಬೇಕಿರುವ 40 ಮತಗಳು ಸಿಗುತ್ತವೆ. ಹಾಗಾಗಿ ಜೆಡಿಎ ಅಧಿಕಾರ ಮಾರ್ಗ ಸ್ವಲ್ಪ ಸುಲಭ.

ಕಳೆದ ಮೂರು ಅವಧಿಯಲ್ಲೂ ಹೆಚ್ಚು ಸದಸ್ಯ ಬ ಇರುವ ಜೆಡಿಎಸ್‌ಗೆ ಮಹಾಪೌರ ಸ್ಥಾನ, ಸದಸ್ಯ ಬ ಕಡಿಮೆ ಇರುವ ಬಿಜೆಪಿಗೆ ಉಪಮಹಾಪೌರರ ಸ್ಥಾ ಹಂಚಿಕೊಂಡಾಗಿದೆ. ಹಿಂದಿನ ಮೂರು ಅವಧಿಯಲ









ಬುದ್ಧಿಜೀವಿಗಳು ಮತ್ತು ಮಠಾಧೀಶರು

02 ⏮

'ಬುದ್ಧಿಜೀವಿಗಳು ಹಿಂದೂ ಧರ್ಮದ ವಿರೋಧಿಗಳು' ಎಂದು ಪೇಜಾವರ ಮಠಾಧೀಶರು ಹೇಳಿದರೆಂದು ಇತ್ತೀಚೆಗೆ ಪತ್ರಿಕೆಗಳಲ್ಲಿ ವರದಿಯಾಯಿತು. ಇದಕ್ಕೆ ನಾಟಕದ ಪ್ರಸನ್ನ, ಆಕೆಡಮಿಕ್ ಚಿಂತಕರಾದ ಪೃಥ್ವಿ ದತ್ತ ಚಂದ್ರಶೋಭಿ ತಮ್ಮ ಪತ್ರಿಕಾ ಅಂಕಣಗಳಲ್ಲಿ ಸುದೀರ್ಘ ಪ್ರತಿಕ್ರಿಯೆ ನೀಡಿ ದಲಿತರು ಮತ್ತು ಜಾತಿಶೋಷಿತರ ಪರವಾಗಿ ಸ್ಪಂದಿಸುವ ಬುದ್ಧಿಜೀವಿಗಳು ಮಾನವೀಯತೆಯನ್ನು ಆಧರಿಸಿ ಯೋಚಿಸುವ ಪ್ರಗತಿಪರರು ಮತ್ತು ವೈಚಾರಿಕ ನೆಲೆಯುಳ್ಳವರು; ಪೇಜಾವರರಿಗೆ ದಲಿತರ ನೋವನ್ನು ಅರ್ಥಮಾಡಿಕೊಳ್ಳಬಲ್ಲ ಸಂವೇದನಾಶೀಲತೆ ಬೇಕು ಎಂದು ಹೇಳಿದರು. ಮಾಮೂಲಿನಂತೆ ಪೇಜಾವರರು ಎಲ್ಲ 'ಬುದ್ಧಿಜೀವಿಗಳೂ ಹಿಂದೂ ಧರ್ಮದ ವಿರೋಧಿಗಳು ಎಂದು ನಾನು ಹೇಳಿಲ್ಲ' ಎಂಬ ಸ್ಪಷ್ಟೀಕರಣ ನೀಡಿದರು. ಅಂದರೆ ಎಡಪಂಥೀಯ ಬುದ್ಧಿಜೀವಿಗಳು ಹಿಂದೂ ಧರ್ಮದ ವಿರೋಧಿಗಳು ಎಂಬುದು ಅವರ ಇಂಗಿತ. ಎಡಪಂಥೀಯ ಬುದ್ಧಿಜೀವಿಗಳು 'ಹಿಂದುತ್ವದ ವಿರೋಧಿಗಳು' ಎಂಬ ವರ್ಗಹಿತಾಧಾರಿತ ತೀರ್ಮಾನ ಅವರ ಮನದಾಳದಿಂದ ಹೊರಬರುವಾಗ 'ಹಿಂದೂ ಧರ್ಮದ ವಿರೋಧಿಗಳು' ಎಂದಾಗುತ್ತದೆ. ಏಕೆಂದರೆ ಅವರು ಸಂಘಪರಿವಾರದ ರಾಜಕೀಯ ಅಜೆಂಡಾ ಆದ 'ಹಿಂದುತ್ವವನ್ನು' ತರ್ಕದ ಚೆಂಡನ್ನಾಗಿಸಿ ಸಂಘಪರಿವಾರದ ಭಾವನಾರಹಿತ ಅಧಿಕಾರದ ಗೋಲಿನ ಕಡೆಗೇ ಹೋಗುವಂತೆ ತಡೆಯೊಡ್ಡುತ್ತಾ ಎದುರಾಳಿಗಳ ದಿಕ್ಕು ತಪ್ಪಿಸುವ ಚತುರ. ಎಡಪಂಥೀಯರು ವೈಚಾರಿಕವಾಗಿ ಮಂಡಿಸುವ ಮಾನವೀಯತೆಯ ತಡೆಗಳನ್ನು ತಪ್ಪಿಸಿ ಹಿಂದುತ್ವದ ಗೋಲಿನತ್ತ ತಮ್ಮ ಚೆಂಡನ್ನು ತೂರಿಸಲೆತ್ನಿಸುವ ಕಾಲ್ಚೆಂಡಿನ ಪಟುತ್ವದ ಬುದ್ಧಿಜೀವಿ.

ಮಹಾಭಾರತದಲ್ಲಿ ಯಕ್ಷನು ಹುಟ್ಟಿನಿಂದ ಬ್ರಾಹ್ಮಣನಾಗಿ ಪ್ರವೃತ್ತಿಯಲ್ಲಿ ಶೂದ್ರನಾಗಿದ್ದರೆ ಅಂಥವನು ಬ್ರಾಹ್ಮಣನೆ? ಹುಟ್ಟಿನಿಂದ ಶೂದ್ರನಾಗಿ ಪ್ರವೃತ್ತಿಯಲ್ಲಿ ಬ್ರಾಹ್ಮಣನಾಗಿದ್ದರೆ ಅಂತವನು ಶೂದ್ರನೆ? ಎಂದು ಕೇಳುವ ಪ್ರಶ್ನೆಗಳಿಗೆ, ಬ್ರಾಹ್ಮಣತ್ವ ಮತ್ತು ಶೂದ್ರತ್ವಗಳನ್ನು ವ್ಯಕ್ತಿಯ ಪ್ರವೃತ್ತಿಯಿಂದಲೇ ನಿರ್ಧರಿಸಬೇಕು ಎಂದು ಧರ್ಮರಾಯ ಉತ್ತರಿಸುತ್ತಾನೆ. ಛಾಂದೋಗ್ಯೋಪನಿಷತ್ತಿನಲ್ಲಿ ಅರೆಶಿಕ್ಷಣ ಪಡೆದು ಗುರುಕುಲದಿಂದ ಮರಳುವ ಶ್ವೇತಕೇತುವನ್ನು ಅವನ ತಂದೆಯು ನಮ್ಮ ವಂಶದಲ್ಲಿ ಹೆಸರಿಗೆ ಮಾತ್ರ ಬ್ರಾಹ್ಮಣರಾಗಿದ್ದವರು ಇರಲಿಲ್ಲ, ಆದ್ದರಿಂದ ನಿಜವಾಗಿ ಬ್ರಾಹ್ಮಣನೆನಿಸಲು ಬ್ರಹ್ಮಜ್ಞಾನವನ್ನು ಸರಿಯಾಗಿ ಅರಿತುಕೊ ಎಂದು ಅವನಿಗೆ ಬ್ರಹ್ಮಜ್ಞಾನವನ್ನು ವಿವರಿಸಿ ಹೇಳುತ್ತಾನೆ.

ಪೇಜಾವರ ಸ್ವಾಮಿಗಳು ಪಂಕ್ತಿಭೇದದ ಅಗತ್ಯವನ್ನು ವಿವರಿಸುತ್ತಾ ಬೇರೆ ಪಂಕ್ತಿ ಬಯಸುವ ಮಡಿವಂತ ಬ್ರಾಹ್ಮಣರಿಗೆ ಮಠದಲ್ಲಿ ಪ್ರತ್ಯೇಕ ಅವಕಾಶ ಕಲ್ಪಿಸುವುದು ಪಂಕ್ತಿಭೇದ ಅಲ್ಲ ಎನ್ನುತ್ತಾರೆ. ಈ ಮಡಿವಂತ ಬ್ರಾಹ್ಮಣರು ಯಾವ ಅರ್ಥದಲ್ಲಿ ಬ್ರಾಹ್ಮಣರು? ಬ್ರಾಹ್ಮಣರೆನಿಸಲು ಜುಟ್ಟು-ಜನಿವಾರ-ಅಂಗಾರ-ಗೋಪಿಚಂದನಗಳು ಸಾಕೆ?

ಪೇಜಾವರರು ತಮ್ಮ ಮಠಕ್ಕೆ ಭೇಟಿ ಕೊಡುವ ಎಷ್ಟೋ ಬ್ರಾಹ್ಮಣರು ಖಾಸಗಿಯಾಗಿ ಮಾಂಸ ತಿನ್ನುವುದರಿಂದ, ಹೆಂಡ ಕುಡಿಯುವುದರಿಂದ ತಾವು ಮಠಕ್ಕೆ ಬರುವ ಬ್ರಾಹ್ಮಣರೊಡನೆಯೂ ಊಟಕ್ಕೆ ಕೂರುವುದಿಲ್ಲ ಎಂದು ತಮ್ಮ ಪಂಕ್ತಿ ಭೇದವನ್ನು ಸಮರ್ಥಿಸುತ್ತಾರೆ. ಆ ಮಾಂಸ ತಿನ್ನುವ, ಹೆಂಡ ಕುಡಿಯುವ ಬ್ರಾಹ್ಮಣರು ಯಾವ ಅರ್ಥದಲ್ಲಿ ಬ್ರಾಹ್ಮಣರು? ಅಂಥವರು ಮಠಕ್ಕೆ ಬಂದಾಗ ಜುಟ್ಟು-ಜನಿವಾರ-ಅಂಗಾರ-ಗೋಪಿಚಂದನಗಳನ್ನು ಧರಿಸಬಹುದೆ?

ಪೇಜಾವರರು ಅಷ್ಟಮಠಗಳ ಇತರ ಯತಿಗಳೊಂದಿಗೆ, ಮಠದಲ್ಲೇ ಇರುವ ತಮ್ಮ ಖಾಸಾ ಶಿಷ್ಯರೊಂದಿಗೆ ಊಟ ಮಾಡುತ್ತಾರೆಯೆ? ಅವರ ವೈಯಕ್ತಿಕ ನೀತಿ-ನಡವಳಿಕೆ ಬಗ್ಗೆ ಎಂದೂ ಸಂದೇಹ ಮೂಡುವುದಿಲ್ಲವೆ?

ಪೇಜಾವರರೆ ಹೇಳುವಂತೆ, ಮಠದಲ್ಲೇ ವಿವ ಕಾರಣಗಳಿಗಾಗಿ ಬೇರೆ ಬೇರೆ ಪಂಕ್ತಿಗಳಲ್ಲಿ ಕೂತು, ಊ ಮಾಡುವ ಬೇರೆ ಬೇರೆ ಹಿನ್ನೆಲೆಯ ಎಲ್ಲರಿಗೂ ಒಂ ಬಗೆಯ, ಒಂದೇ ಗುಣ ಮಟ್ಟದ, ಖಾದ್ಯಗಳನ್ನು ಒಂ ಭಾವನೆಯಿಂದ ಬಡಿಸಲಾಗುತ್ತದೆಯೆ? ಹಾಗಿಲ್ಲದಿದ ಖಾದ್ಯಗಳ, ಭಾವನೆಗಳ ಭೇದ ಯಾಕಾಗಿ ಆಗುತ್ತದೆ??

ಮಠಕ್ಕೆ ಸೇರಿರುವ ಗದ್ದೆಗಳಲ್ಲಿ ದುಡಿ ದವಸ-ಧಾನ್ಯಗಳನ್ನು, ಗುಳ್ಳ, ಕುಂಬಳ, ತರಕಾರಿಗಳ ಮಠಕ್ಕೆ ಒದಗಿಸುವ ಶ್ರಮಜೀವಿಗಳ ಶ್ರಮಶಕ್ತಿ ಯಾವಜಾ ದೇಶದ ಯಾವುದೋ ಮೂಲೆಗಳಿಂದ ಮಠ ಸರಬರಾಜಾಗುವ ದ್ರಾಕ್ಷಿ, ಗೋಡಂಬಿ, ಕಲ್ಲುಸಕ್ಕ ಜೇನುತುಪ್ಪ ಹಾಲು ಮೊಸರುಗಳನ್ನು ಸರಬರಾಜು ಮಾಡು ಜನರು ಯಾವ ಜಾತಿ, ಯಾವ ಕುಲ, ಏನು ತಿಂದಿರುತ್ತಾ ಏನು ಕುಡಿದಿರುತ್ತಾರೆ ಎಂದು ತಿಳಿದು ಅವರು ಸರಬರಾ ಮಾಡುವ ವಸ್ತುಗಳನ್ನು ಮಠದಲ್ಲಿ ಬಳಸಲಾಗುತ್ತದೆಯೆ ಪಾದಪೂಜೆ ಮಾಡುವ ಭಕ್ತರು ಕೊಡುವ ಹಣಕ್ಕೆ ಜಾ ಇದೆಯೆ? ದೇಶ ವಿದೇಶಗಳ ಭಕ್ತರು ಭಕ್ತಿಯಿಂದ ಮಠ ಅರ್ಪಿಸುವ ಕಾಣಿಕೆ-ದಾನ-ಧರ್ಮಗಳ ಮೌಲ್ಯವನ್ನು ಯಾ ಸೃಷ್ಟಿಸುತ್ತಾರೆ? ಎಲ್ಲೋ ಸುರಿದ ಮಳೆ, ಕಾದ ಬಿಸಿ

ದೇ ರೀತಿ ಹೊಂದಾಣಿಕೆಯಲ್ಲಿ ಪಟ್ಟು ಬಿಡದ ಜೆಡಿಎಸ್ ಅಧಿಕಾರ ನುಭವಿಸುತ್ತದೆ. ಕಳೆದ ಮೂರು ಬಾರಿಯೂ ಜೆಡಿಎಸ್‌ಗೆ ಮಹಾಪೌರ ನ ಬಿಟ್ಟುಕೊಟ್ಟಿದ್ದು, ಈ ಬಾರಿಯಾದರೂ ಕಡಿಮೆ ಸದಸ್ಯ ಬಲ ಇದ್ದರೂ ರಿಯೇ ಬಿಜೆಪಿಗೆ ಅಧಿಕಾರ ಬಿಟ್ಟುಕೊಡಬೇಕು ಎಂದು ಬಿಜೆಪಿ ನಾಯಕರು ಡಿಎಸ್ ಮೇಲೆ ಒತ್ತಡ ಹೇರುತ್ತಿದ್ದಾರೆ. ಹಿಂದೆ ಹೊಂದಾಣಿಕೆ ಮಾಡಿಕೊಳ್ಳುವಾಗ ಡವಿದ್ದ ಮಾತುಕತೆಯನ್ನು ಪಾಲಿಸಬೇಕು ಎಂಬುದು ಬಿಜೆಪಿ ನಾಯಕರ ದ. ಆದರೆ ಅವರೇನೇ ಮಾಡಿದರೂ ಜೆಡಿಎಸ್‌ಗೆ ಅಷ್ಟೊಂದು ಧಾರಾಳವಾದ ನಸ್ಸಿಲ್ಲ. ಈ ಹಿಂದೆ ರಾಜ್ಯ ರಾಜಕಾರಣದಲ್ಲಿ ಜೆಡಿಎಸ್ ಬಿಜೆಪಿ ಮೈತ್ರಿಯ ರ್ಕಾರ ರಚನೆಯಾಗಿ ಮೊದಲೇ ತೀರ್ಮಾನವಾಗಿದ್ದ ಮಾತುಕತೆಯಂತೆ ಮುಖ್ಯಮಂತ್ರಿಯಾಗಿ ಅಧಿಕಾರ ಅನುಭವಿಸಿದ ಎಚ್.ಡಿ.ಕುಮಾರಸ್ವಾಮಿ ನಂತರ ಎಸ್.ಯಡಿಯೂರಪ್ಪ ಅವರಿಗೆ ಮುಖ್ಯಮಂತ್ರಿಯಾಗುವ ಅವಕಾಶ ನೀಡದೆ ಡಿದ ಮಾತನ್ನು ಗಾಳಿಗೆ ತೂರಿ ಯಡಿಯೂರಪ್ಪ ಅವರ ಕೈಗೆ ಚಿಪ್ಪು ಕೊಡಲಿಲ್ಲವೆ. ಈ ಹಿನ್ನೆಲೆ, ಸದಸ್ಯ ಬಲ ನೋಡಿದರೆ ಜೆಡಿಎಸ್ ಮಹಾಪೌರ ಸ್ಥಾನವನ್ನು ಬಿಟ್ಟುಕೊಡುವ ಯಾವುದೇ ಲಕ್ಷಣಗಳು ಕಾಣುತ್ತಿಲ್ಲ ಅದಕ್ಕೇ ಏನೋ ಬಿಜೆಪಿ ನಮಗೆ ಉಪಮಹಾಪೌರರ ಸ್ಥಾನವೇ ಗಟ್ಟಿ ಎಂದು ತಿಳಿದು ಮಹಾಪೌರರ ಸ್ಥಾನಕ್ಕೆ ಆಕಾಂಕ್ಷಿಗಳ ಹೆಸರೇ ಇಲ್ಲವಾಗಿ ಉಪ ಮಹಾಪೌರರ ಸ್ಥಾನಕ್ಕೆ ಸೀಮಾ ಪ್ರಸಾದ್, ರತ್ನ ಲಕ್ಷ್ಮಣ, ಪುಷ್ಪಾವತಿ ಆಕಾಂಕ್ಷಿಗಳಾಗಿದ್ದಾರೆ. ಇವರಲ್ಲಿ ಬಹುತೇಕ ಸೀಮಾ ಪ್ರಸಾದ್ ಅವರಿಗೆ ಉಪಮಹಾಪೌರರ ಸ್ಥಾನ (ಜೆಡಿಎಸ್ ಬಿಜೆಪಿ ಹೊಂದಾಣಿಕೆಯಾದರೆ) ಗಟ್ಟಿಯಾಗುವ ಲಕ್ಷಣಗಳು ಕಾಣಿಸುತ್ತಿವೆ.

ಮಹಾಪೌರರ ರೇಸ್‌ನಲ್ಲಿ...

ಜೆಡಿಎಸ್‌ನಲ್ಲಿ ರಾಜಕೀಯ ಚಟುವಟಿಕೆ ಗರಿಗೆದರಿದೆ. ಅದೂಅಲ್ಲದೆ ಈ ಬಾರಿ ಮಹಾಪೌರರ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವುದರಿಂದ ಪೈಪೋಟಿ ತುಸು ಹೆಚ್ಚಾಗಿಯೇ ಶುರುವಾಗಿದೆ. ಸಾಮಾನ್ಯ ವರ್ಗದಿಂದ ಆರಿಸಿ ಬಂದಿರುವ ಮೂವರು ಸದಸ್ಯರು ಮಹಾಪೌರ ಸ್ಥಾನವನ್ನು ಗಿಟ್ಟಿಸಿಕೊಳ್ಳಲು ಜೆಡಿಎಸ್ ವರಿಷ್ಠರ ಮೇಲೆ ಪ್ರಬಲ ಒತ್ತಡ ಹಾಕುತ್ತಿದ್ದಾರೆ.

ಜೆಡಿಎಸ್‌ನಿಂದ ಸತತ 4ನೇ ಬಾರಿ ಆಯ್ಕೆಯಾಗಿರುವ 27ನೇ ವಾರ್ಡ್ ಸದಸ್ಯ ಕೆ.ಟಿ.ಚಲುವೇಗೌಡ ಹಿರಿಯ ಸದಸ್ಯನಾಗಿ, ಪಕ್ಷಕ್ಕೆ ಹೆಚ್ಚು ನಿಷ್ಠನಾಗಿದ್ದೇನೆ ಹಾಗಾಗಿ ಮಹಾಪೌರ ಸ್ಥಾನವನ್ನು ತನಗೇ ನೀಡಬೇಕು ಎಂದು ಪಟ್ಟು ಹಿಡಿದಿದ್ದಾರೆ. ಎರಡನೆಯದಾಗಿ ಮಾಜಿ ಉಪ ಮಹಾಪೌರ 35ನೇ ವಾರ್ಡ್‌ನ ಎಂ.ಜೆ.ರವಿಕುಮಾರ್ ಪಕ್ಷ, ವರಿಷ್ಠರ ನಿಷ್ಠರಾಗಿದ್ದು ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ. ಇನ್ನು ಎರಡು ಬಾರಿ ಜೆಡಿಎಸ್‌ನಿಂದ ಆಯ್ಕೆಯಾಗಿರುವ ಕೆ.ವಿ.ಮಲ್ಲೇಶ್‌ಗೆ ಹಣಬಲ, ಸದಸ್ಯರ ಒಲವು ಎರಡೂ ಇದ್ದು ಪ್ರಬಲ ಆಕಾಂಕ್ಷಿಯಾಗಿದ್ದಾರೆ. ಅದೇರೀತಿ ಕಳೆದ ಬಾರಿ ಕೈತಪ್ಪಿಹೋದ ಸ್ಥಾನ ಈ ಬಾರಿಯಾದರೂ ಸಿಗಲಿ ಎಂದು ಮಾಜಿ ಉಪಮಹಾಪೌರ ಮಹದೇವಪ್ಪ, ಬಿ.ಎಂ.ನಟರಾಜ್ ಅರ್ಜಿ ಗುಜರಾಯಿಸಿದ್ದಾರೆ.

ಎಂ.ಜೆ.ರವಿಕುಮಾರ್ ಎಚ್.ಡಿ.ಕುಮಾರಸ್ವಾಮಿ ಮತ್ತು ಅನಿತಾ ಕುಮಾರಸ್ವಾಮಿ ಅವರಿಗೆ ತೀರಾ ಹತ್ತಿರವಿದ್ದು, ಕುಮಾರಸ್ವಾಮಿ ಅವರ ಒಲವು ಗಳಿಸಿದ್ದಾರೆ. ಇನ್ನು ಕೆ.ಟಿ.ಚೆಲುವೇಗೌಡ ಅವರು ನಾಲ್ಕು ಬಾರಿ ಗೆದ್ದಿರುವ ಹಿರಿಯ ಸದಸ್ಯರು. ಕೆ.ವಿ.ಮಲ್ಲೇಶ್‌ಗೆ ಸದಸ್ಯರ ಒಲವಿದ್ದರೂ ಪಕ್ಷದ ವರಿಷ್ಠರ ಒಲವಿಲ್ಲದ ಕಾರಣ ರೇಸ್‌ನಲ್ಲಿ ಹಿಂದೆ ಬೀಳುವ ಸಾಧ್ಯತೆ ಹೆಚ್ಚು, ಉಳಿದಂತೆ ರವಿಕುಮಾರ್ ಮತ್ತು ಚಲುವೇಗೌಡರ ನಡುವೆ ಪೈಪೋಟಿ ಹೆಚ್ಚಾಗಿದೆ. ಇದಕ್ಕೆ ಇಂಬು ನೀಡುವಂತೆ ಮೊನ್ನೆ ಮೈಸೂರಿನ ಕಾರ್ಯ ಕ್ರಮದಲ್ಲಿ ಭಾಗವಹಿಸಿದ್ದ ಎಚ್.ಡಿ.ರೇವಣ್ಣ ಮತ್ತು ಭವಾನಿ ರೇವಣ್ಣ ಈ ಇಬ್ಬರಲ್ಲಿ ಒಬ್ಬರ ಆಯ್ಕೆಯನ್ನು ಒತ್ತಿ ಹೇಳಿದ್ದಾರೆ. ರೇವಣ್ಣ ಹೇಳಿದ್ದು ಇಷ್ಟು, 'ಮಹಾಪೌರರ ಸ್ಥಾನದ ಆಕಾಂಕ್ಷಿಗಳಾಗಿರುವ ರವಿ ಕುಮಾರ್ ಮತ್ತು ಚಲುವೇಗೌಡರು ಒಟ್ಟಾಗಿ ಕುಳಿತು ಮಾತಾಡಿಕೊಂಡು ಮಹಾಪೌರರು ಯಾರಾಗಬೇಕೆಂದು ನಿರ್ಧರಿಸಿ ಸಮಸ್ಯೆ ಬಗೆಹರಿಸಿಕೊಳ್ಳಿ'. ಇದು ಈ ಇಬ್ಬರಲ್ಲಿ ಒಬ್ಬರು ಮಹಾಪೌರರಾಗುವುದನ್ನು ಖಚಿತಪಡಿಸುತ್ತದೆ. ಆದರೆ ಎಂ.ಜೆ.ರವಿಕುಮಾರ್, ಕುಮಾರಸ್ವಾಮಿ ದಂಪತಿಗೆ ತೀರಾ ಹತ್ತಿರವಾಗಿರುವುದರಿಂದ ರವಿಕುಮಾರ್ ಚಲುವೇಗೌಡರಿ ಗಿಂತ ಎರಡು ಹೆಜ್ಜೆ ಮುಂದೆ ಹೋಗಿ ನಿಲ್ಲುತ್ತಾರೆ. ಏನಾದರಾಗಲಿ ಡಿಸೆಂಬರ್ ಮೊದಲ ವಾರದಲ್ಲಿ ನಡೆಯುವ ಮಹಾಪೌರರ ಚುನಾವಣೆಯಲ್ಲಿ ಈ ಇಬ್ಬರಲ್ಲಿ ಯಾರು ಅಧಿಕಾರ ಹಿಡಿಯುತ್ತಾರೆ ಎಂಬುದನ್ನು ಕಾದು ನೋಡಬೇಕಿದೆ.


■ ಶರ

ಯಾರೋ ಹಾಕಿದ ಶ್ರಮ, ಎಲ್ಲೋ ಯಾರೋ ಬೆಳೆದ, ಅರೆದ ಕಬ್ಬಿನಿಂದ ಮಾಡಿದ ಸಕ್ಕರೆ, ಎಲ್ಲೋ ಬೆಳೆದ ಬೇಳೆಕಾಳು, ಅಕ್ಕಿ, ಗೋಧಿ, ಉದ್ದು ಹೆಸರು ಮುಂತಾದವುಗಳಿಂದಲ್ಲವೇ ನಮ್ಮ ಮೈ, ಮನಸ್ಸು, ಬುದ್ಧಿ ವಿವೇಕಗಳು ರೂಪುಗೊಂಡು ಕೆಲಸ ಮಾಡುವುದು? ಇದರಲ್ಲಿ ಜಾತಿ ಮತಗಳನ್ನು ಗುರುತಿಸುವುದು ಸಾಧ್ಯವೆ? ಯಾವ ಮಡಿವಂತರು, ಯಾವ ಜ್ಞಾನಿಗಳು ಇದನ್ನು ಮಾಡಬಲ್ಲರು?

ಮಧ್ವಾಚಾರ್ಯರು ಪ್ರತಿಪಾದಿಸಿದ ಪಂಚಮಹಾಭೇದ ವ್ಯಕ್ತಿ, ಪ್ರಕೃತಿ, ಜಗತ್ತು ಮತ್ತು ದ್ವೈವಿಕತೆಯ ಪರಿಕಲ್ಪನೆಗಳ ನಡುವಿನ ಭಾವನಾತ್ಮಕ ಸಂಬಂಧಗಳನ್ನು ತಾತ್ವಿಕವಾಗಿ ಅರ್ಥಮಾಡಿಕೊಳ್ಳುವ ಒಂದು ವೈಚಾರಿಕ ವಿಧಾನ. ನಮ್ಮ ಅನುಭವವನ್ನು ಆಧರಿಸಿ ಹುಟ್ಟುವ ಆಲೋಚನೆಗಳನ್ನು ಸಂಗತವಾಗುವ ರೀತಿಯಲ್ಲಿ ಜೋಡಿಸುವುದು ತರ್ಕದ ಉದ್ದೇಶ. ತರ್ಕವು ಆಲೋಚನೆಗಳನ್ನು, ಆಲೋಚನೆಗಳು ಸಂಬಂಧಗಳನ್ನು ನಿರಾಕರಿಸಿದರೆ ತರ್ಕವೇ ಅಂತಿಮ ಕಾಣ್ಕೆಯಾಗಿ ವಿಜೃಂಭಿಸುತ್ತದೆ. ಭಾವನೆಗಳು ಕಾಣಿಸುವುದೇ ಇಲ್ಲ, ಭಗವಂತನು ಭಾವಗೋಚರ ಎನ್ನುವುದು ಇದಕ್ಕೇ. ಕರಿಕಲ್ಲಿನಲ್ಲಿ ಪ್ರೇಮದ ಪ್ರತೀಕವಾದ ಕೃಷ್ಣನನ್ನು ಭಾವಿಸುವ ಮನಸ್ಸಿಗೆ ಸಮಾಜದ ಸಹಜೀವಿಗಳಲ್ಲಿನ ಜಾತಿಭೇದದ ಅವಮಾನ, ನೋವು, ನರಳಿಕೆ, ಕ್ರೋಧಗಳನ್ನು ಪ್ರೀತಿ-ವಿಶ್ವಾಸ-ನಂಬಿಕೆ-ಸಮಾನತೆಗಳ ಹಂಬಲವನ್ನು ಭಾವಿಸುವುದು ಕಷ್ಟವೆ? ಕಷ್ಟ ಎಂದಾದರೆ, ಭಾವಿಸುವ ಮನಸ್ಸನ್ನು ವೈಧಾನಿಕವಾಗಿ ಪೂಜಿಸುವ ಕಲ್ಲಿನೊಂದಿಗೆ ಕಲ್ಲಾಗಿಸುವ ತರ್ಕಬದ್ಧತೆಯನ್ನು ಕೊಳೆತ ಕುಂಬಳಕಾಯಿಯಂತೆ ತಿಪ್ಪೆಗೆಸೆಯಬೇಕು, ಅಲ್ಲವೆ?

■ ವಿ.ಎನ್.ಲಕ್ಷ್ಮೀನಾರಾಯಣ

ಕರೆನ್ಸಿ ವಿಷಯದಲ್ಲಿ ಚೆಲ್ರೆ ಬುದ್ಧಿ ಸರಿಲ್ಲ ಸಾರ್!



ಭಾರತ ಕಂಡರಿಯದ ಭೀಕರ ಅರ್ಥಶಾಸ್ತ್ರಜ್ಞರಾದ ಮೋದಿ ಮಹಾತ್ಮರು, ತುಘಲಕ್ ನಿಂತ ಜಾಗದಲ್ಲಿಯೇ ನಿಂತು, ಐದು ನೂರು ಮತ್ತು ಸಾವಿರ ರೂ. ನೋಟನ್ನು ಹರಿದು ಬಿಸಾಡಿದ ಕ್ಷಣದಿಂದ ದೇಶವೇ ಅಲ್ಲೋಲಕಲ್ಲೋಲವಾಗಿ ಹೋಗಿದೆಯಲ್ಲಾ. ಈ ವಿಷಮ ಸ್ಥಿತಿಯಲ್ಲಿ (ಶ್ರೀ)ಸಾಮಾನ್ಯನನ್ನ ಮಾತನಾಡಿಸಬೇಕಲ್ಲಾ ಎಂದು ಯೋಚಿಸಿದಾಗ, ನಮ್ಮ ವಾಟಿಸ್ನೆ ಹೆಸರು ಹೊಳೆಯಬೇಕೆ! ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು:

ರಿಂಗ್‌ಟೋನ್: "ಅಂಗೂ ಇಂಗೂ, ಯಂಗೂ ಇದ್ದೇ, ಇಂಗಾಗೋದೇ ಅಣ್‌ತಮ್ಮಾ, ಅಂಗೂ...."

"ಹಲೋ ಹೇಳಿ ಸಾರ್ ಏನ್ ಮ್ಯಾಟ್ರು ಬೇಕಾಗಿತ್ತು?"

"ಎಲ್ಲಿದ್ದಿ ವಾಟಿಸ್ನೆ?"

"ಮನೆತಾವ್ಳುಲೆ ಇದ್ದಿನಿ ಸಾ."

"ಎಲ್ಲೂ ಹೋಗಿಲ್ವೆ?"

"ಫೈನಾನ್ಸ್ ಎಮರ್ಜೆನ್ಸಿ ಸಾರ್. ಎಲ್ಲೂ ಹೋಗಿಲ್ಲ."

ಥೂತ್ತೇರಿ

► ಯಾಹೂ

"ಏನನ್ಸತ್ತೆ ಮೋದಿ ಮಾಡಿದ ಕೆಲ್ಸ?"

"ರಿಯಲಿ ಇವ್ರನ್ಯಾವನೊ ಹುಚ್ಚುಮುಕಳಿ ಸಾ. ನಮ್ಮಂಥೋರ ಶಾಪ ತಟ್ಟತದೆ."

"ಯಾಕೆ?"

"ಅವತ್ತು ಸಾರ್ ಮಂಡ್ಯಕ್ಕೊಗಿದ್ದೆ ಬಸ್‌ಚಾರ್ಜು ಬುಟ್ರೆ ಇನ್ನ ಐನೂರುಪಾಯಿ ನೋಟಿತ್ತು. ಮಂಡ್ಯದಲ್ಲಿ ಸಿಗಾಕಂಡೆ ಸಾ. ನನ್ನ ಪಜೀತಿ ಬ್ಯಾಡಿ."

"ಯಾಕೆ ಏನಾಯ್ತು?"

"ಐನೂರುಪಾಯಿ ಸತ್ತೋಗಿತ್ತು ಸಾರ್. ಥೇಟ್ ಡೆಡ್ ಬಾಡಿನೆ. ಯಾರು ತಗತಾಯಿಲ್ಲ, ಊರಿಗ್ಯಂಗೆ ಸಾರ್ ಬರದು? ಆಗ ನನ್ನೆಂಡ್ತಿಗೆ ಫೋನ್ ಮಾಡೀ, ಇಮ್ಮಿಡಿಯಟ್ಟಾಗಿ ಮಂಡೇವುಕೆ ಕರಿಸಿಗಂಡು, ಅವುಳ ತಂದ ನೂರುಪಾಯಿಲಿ ಊರು ಸೇರಿಕಂಡೆ ಸಾ. ಇಲ್ದೆಯಿದ್ರೆ ಗ್ಯಾರಂಟಿ ನಾನು ಮಂಡ್ಯಾದಲ್ಲಿ ಸತ್ತೆ ಹೋಯ್ತಿದ್ದೆ."

"ದೇಶದ ಜನಕ್ಕೆಲ್ಲಾ ಅನುಕೂಲ ಆಗುವಾಗ ಕೆಲವರಿಗೆ ತೊಂದ್ರೆ ಆಗತ್ತಂತೆ."

"ಏನು ತೊಂದ್ರೆ ಸಾ? ಇಂಡಿಯಾ ದೇಶವ ಏನು ತಿಳಕಂಡ ಇವುನು? ಇದೇನು ಗುಜರಾತೆ? ಸಾರ್, ನಾನು ತಿಳಕಂಡಂಗೆ ಇಲ್ಲಿಗಂಟ ಒಂದಿನ್ನೂರು ಜನ ಸತ್ತಿರಬಹುದು."

"ಅಂಗಂತೀಯಾ?"

"ಊ ಸಾರ್. ಗಾಡಿಕೊಪ್ಪಲು ಕೆಂಚೇಗೌಡ ಜಮೀನು ಮಾರಿದ ದುಡ್ಡ ತಂದು ಮನೇಲಿ ಮಡಿಕಂಡಿದ್ದನಂತೆ. ಯಾವಾಗ ಮೋದಿ ನೋಟು ರದ್ದು ಮಾಡಿದ್ನೊ ಆಗ ಅಯ್ಯಯ್ಯಪ್ಪಾ ಅಂತ ಎದೆ ಹಿಡಕಂಡು ಸತ್ತೋದ."

"ಬ್ಯಾಂಕಿಗೆ ಕೊಡಬವುದಿತ್ತು."

"ಅದವುನಿಗೆ ಗೊತ್ತಾಗಬೇಕಲ್ಲ ಸಾರ್? ಜಮೀನು ತಗಂಡೋನು ಕಳ್ಳದುಡ್ಡ ನನಿಗೆ ಕೊಟ್ಟವುನೆ, ನಾನು ಸಿಗಾಯ್ಕತ್ತಿನಿ ಅಂತ ಸತ್ತೆಹೋದ."

"ಥೂ ಅನ್ಯಾಯ. ಏನೋ ಹೋಗಿ ಏನೋ ಆಯ್ತಲ್ಲ ಹೇಳು."

"ಏನೋ ಅಲ್ಲ ಸಾರ್. ಏನೇನೋ ಆಯ್ತ ಅದೆ. ಇವುನು ನೋಟಿನ ಕಳ್ರ ಹಿಡಿತಿವಿ ಅಂದಿದ್ರೆ, ನಾವೆ ಹಟ್ಟಕೊಡತಿದ್ವೊ ಸಾರ್. ನಮ್ಮೂರಲ್ಲೊಬ್ಬ ಸಿದ್ದೇಗೌಡ ಅಂತ ಅವ್ನನೆ. ಅವುನಿಗೆ ಬ್ಯಾಂಕ್ ಯವಾರ ಗೊತ್ತಿಲ್ಲ, ಅದ್ಕೆ ಪೆಟಗೇಲಿ ದುಡ್ಡ ತುಂಬ್ಕವುನೆ. ಅಂಥೋನ್ನ ಹಿಡಿಬೇಕೊ, ನಮಿಗೆ ತೊಂದ್ರೆ ಕೊಡಬೇಕೊ ಹೇಳಿ. ಈ ಮುಂಡೆ ಮಗ ನಮ್ಮ ದೇಶಾನೇ ಅರ್ಥ ಮಾಡಿಕಂಡಿಲ್ಲ ಸಾ."

"ಮತ್ತೆ ಯಲ್ಲ ಹೊಗಳತರಲ್ಲ?"

"ಯಾಕೊಗಳತರೆ ಗೊತ್ತ ಸಾರ್. ಅವುನೆದ್ರಿಗೆ ನಿಂತಗಂಡು ಉತ್ತರ ಕೊಡೋರಿಲ್ಲ, ಆ ಕಾಂಗ್ರೆಸ್ ಮುಂಡೆ ಮಕ್ಕಳು ಏನಾದ್ರೊ, ಎಲ್ಲಿಗೋದ್ರೊ ಗೊತ್ತಿಲ್ಲ."

"ಎಲ್ಲೂ ಹೋಗಿಲ್ಲ, ಇಲ್ಲೆ ಅವ್ರುರೆ."

"ಅಲ್ಲ ಸಾರ್, ದೇಶವ ಹತ್ತೊರುಸ ಆಳಿದ ಆ ಮನಮೋಹನ್ ಸಿಂಗ್ ಯತ್ತಗೋದ ಸಾರ್? ಅವುನೇನೂ ಹಣಕಾಸಿನ ಅರದು ಕುಡುದು ಬುಟ್ಟವುನೆ ಅಂತ ಹೇಳತಿದ್ರು. ಈ ಟೇಮಲ್ಲಿ ಮೋದಿ ಎದ್ರಿಗೆ ನಿಂತಗಂಡು ಮಾತಾಡಬಾರ್ದ ಸಾರ್? ತನ್ನ ಸಂತೆ ಮುಗಿಸಿಗಂಡು ಮನಿಗೋಗಿಬುಟ್ರೆ ಮುಗಿತ."

"ಚಿದಂಬರಂ ಮಾತಾಡ್ತ ಅವುನೆ. ಟಿವಿಯೋರು ತೋರುಸ್ತಯಿಲ್ಲ."

"ಟಿವಿಯೋರು ಬುಡಿ ಸಾರ್. ಅವುರೊಂಥರ ಪಟ್ಟೆ ಪಾಡಿದ ಜನ. ಯಾರೆಂಜಲಾಕ್ತರೋ ಅಲ್ಲಿ ಬಾಲ ಅಲ್ಲಾಡಿಸಿಕೊಂಡು ನಿಂತಗತ್ವವೆ ಪಾಪ. ಅವುಕೇನು ಗೊತ್ತು ಸಾರ್ ಫೈನಾನ್ಸ್ ಮ್ಯಾಟ್ರು."

"ನಿಮ್ಮಳ್ಳಿ ಕಡೆ ಸುಧಾರಿಸಿದಿಯಾ?"

"ನಾವು ಯಾವತ್ತೂ ಬ್ಯಾಂಕ್ ನಚ್ಚಿಗಂಡು ಬದುಕಿದೋರ ಅಲ್ಲ ಸಾರ್. ಆದ್ರು ಈಚಿಗೆ ಕೆಲವರು ಬ್ಯಾಂಕತ್ರ ಹೋಗಿದ್ರು. ಅವ್ರುರಿಗೆ ಯರುಡು ಸಾವುರುಪಾಯಿ ನೋಟು ಸಿಕ್ಕದೆ. ಅದೂ ಎಲ್ಲೂ ನ್ಡಿತಾಯಿಲವಂತೆ."

"ಯಾಕೆ?"

"ಚಿಲ್ರೆ ಬೇಕಲ್ಲ ಸಾರ್. ಅದ್ಕೆ ಅದೂ ನಿಂತೋಗ್ಯದೆ. ಇನ್ನೊಂದು ಮಜ ಅಂದ್ರೆ ಆ ನೋಟ ಮೊಬೈಲಿಗಿಡದ್ರೆ ಮೋದಿ ಭಾಷಣ ಬತ್ತದೆ. ಅಲ್ಲ ಸಾರ್, ದೇಶದ ಕರೆನ್ಸಿ ವಿಷಯದಲ್ಲೂ ಇವ್ರನ ಚಿಲ್ರೆ ಬುಟ್ಟಿಲವಲ್ಲಾ, ಹೇಳಿ."

"ಚಿಲ್ರೆ ಬುದ್ಧಿ ಅಂತೀಯಾ?"

"ಹಂಡ್ರೆಡ್ ಪರಸೆಂಟು. ಇವುನು ಚಿಲ್ರೆ ಮನ್ಸ ಸಾರ್. ಅಲ್ಲ ಸಾರ್, ಅವುರವ್ವ ಪಾಪ ಈಗ್ಲೊ ಆಗ್ಲೊ ಅನ್ನಂಗವುಳೆ. ಆ ಯಮ್ಮನ್ನ ಬ್ಯಾಂಕತ್ರಕ್ಕೆ ಸಾಗಿಸಿಗಂಡು ಒಂದು ನಾಟಕ ಆಡ್ತರಲ್ಲಾ ಸಾರ್. ಇವುರು ಚಿಲ್ರೆ ಅಲವೆ. ಅದ್ಕೆ ಏನೊ ಈ ಹಾದರಕುಟ್ಟದ ಟಿವಿ ಮುಂಡೆವು ತೋರಿಸಿದ್ದೇ ತೋರಿಸಿದ್ದು, ಅದರ ಬದ್ಲು ಬಡುವುರು ಕೂಲಿಗೋಗದ ಬುಟ್ಟು ಕ್ಯೂ ನಿಂತಿರದ ತೋರಬೇಕಾಗಿತ್ತು ಸಾ. ಮೋದಿ ಹೆಂಡತಿ ಕ್ಯೂ ನಿಂತಿದ್ರೆ ತೋರ್ಲಿಸ್ಲಿ, ಅದೂ ಒಂದಿದು."

"ನಿನ್ನ ಮಾತು ಸರಿ."

"ನಾನ್ಯಾವಾಗ್ಲು ತಪ್ಪು ಮಾತಾಡಲ್ಲ ಸಾರ್. ಇನ್ನೊಂದು ಗಂಭೀರವಾದ ವಿಷಯ ಸಾರ್. ಈ ಮೋದಿ ಯಂತ ಪುಕ್ಕಲ ಅಂದ್ರೆ, ಲೋಕಸಭೆಗೆ ಹೋಗಿಲ್ಲ ನೋಡಿ. ನಮ್ಮ ಖರ್ಗೆ ಬಾಯಿಗೆದ್ರಿಕಂಡು ದೆಲ್ಲಿ ಬೀದಿಲಿ ಭಾಷಣ ವಡಿತಯಿದ್ದನಂತೆ. ಇದನ್ಯಲ್ಲ ನೋಡಿದ್ರೆ ಇವುನು ಬರೀ ಮಾತಿನ ಗಿರಾಕಿ ಸಾರ್."

"ಮೋದಿಯವರ ಈ ತೀರ್ಮಾನದಲ್ಲಿ ದೇಶದ ಕಳ್ಳ ಕುಬೇರು, ಮಾರವಾಡಿಗಳು, ಟ್ಯಾಕ್ಸ್ ಖದೀಮರಿಗೆಲ್ಲಾ ತೊಂದ್ರೆಯಾಗಿದೆ."

"ಅಲ್ಲಾ ಸಾರ್ ಅವುರೇನು ಇಡೀ ದೇಶದ ತುಂಬ ಇದ್ದಾರ. ನೋಡಿದ್ರೆ ಕಾಣುಸ್ತರೆ. ನನ್ನ ಕೇಳಿದ್ರೆ ನಮ್ಮ ರಾಜ್ಯದಲ್ಲಿರೋರ ಲಿಸ್ಟ್ ಕೊಡತಿದ್ದೆ ಸಾರ್. ಅವುರ ಹಿಡಕಂಡು ಜೈಲಿಗಾಕಬಹುದಿತ್ತು. ಹೋಗ್ಲಿ ಇಲ್ಲಿಗಂಟ ಯಾರ್ನಾರ ಜೈಲಿಗಾಕಿದ್ರೆ? ಮೋದಿ ತಿಕ್ಕಲತನಕೆ ಸರಿಯಾದುತ್ರ ಅಂದ್ರೆ ರೆಡ್ಡಿ ಮಗಳ ಮದುವೆ ಸಾರ್. ನಾನು ಮೆಚ್ಚಿದೆ ಅವುನ್ನ."

"ರೆಡ್ಡಿ ಮೆಚ್ಚಿಗಂಡ್ಯಾ?"

"ಇದೊಂದು ವಿಷಯದಲ್ಲಿ ಸಾರ್. ನೀನು ಮಾಡದು ಮಾಡಿಕೊ, ನಾನು ಮಾಡದ ಮಾಡಿಕತ್ತಿನಿ ಅನ್ನಂಗೆ ಅದೇನು ಮದುವೆ ಮಾಡಿದ ಸಾರ್. ಆ ಇನಕಂಟ್ಯಾಕ್ಸನವ್ರು ಈಗೋಗಿ ನೋಟಿಸ್ ಕೊಟ್ಟಿದ್ದಾರಂತೆ. ಥೂ ಅವುರ ನಾಟಕಕ್ಕಿಷ್ಟು ಬೆಂಕಿ ಹಾಕ."

"ಇನ್‌ಕಂ ಟ್ಯಾಕ್ಸಿನೋದ್ದು ನಾಟಕ ಅಂತಿಯಾ?"

"ನಾಟಕಲ್ದೆ ಇನ್ನೇನು ಸಾರ್. ಮದುವೆ ಯಂಗೆ ಮಾಡಿದೆ ಅಂತ ಹದಿನಾರು ಪ್ರಶ್ನೆ ಕೇಳಿದ್ದರಂತೆ. ರೆಡ್ಡಿ ಅವುರ ಫಾರಮ್ಮ ಫಿಲಪ್ ಮಾಡಿ ಕಳುಸ್ತನೆ. ಇದು ಸರಿಲ್ಲ ಅಂತ ಇವುರು ಕಳುಸ್ತರೆ. ಅದು ಸರಿಯಿದೆ ಅಂತ ಅವುನು ಕಳಸೊವತ್ತಿಗೆ ಎಲಕ್ಷನ್ ಬತ್ತದೆ. ಅಲ್ಲಿಗೆ ಯಲ್ಲ ಮುಗಿತದಲವ ಸಾರ್."

"ಪರವಾಗಿಲ್ಲ ನೀನು ಇವ್ರನೆಲ್ಲ ತಿಳಕಂಡಿದ್ದಿ."

"ನಾವು ದಿನಬೆಳಗಾದ್ರೆ ತಾಲೋಕಾಫೀಸು, ಪಂಚಾತಿ ಆಫೀಸು, ಡಿಸಿ ಆಫೀಸು ಅಂತ ತಿರುಗೋರು ಸಾರ್. ನಮಿಗೆ ಯಲ್ಲ ಮ್ಯಾಟ್ರು ಗೊತ್ತಾಯ್ತದೆ ಸಾ."

"ನಿಜವಾಗ್ಲು ಮೋದಿ ಇಂತ ಕೆಲಸ ಮಾಡದ್ಕು ಮೊದ್ಲು ನಿಮ್ಮಂಥೋರ ಜೊತೆ ಮಾತಾಡಬೇಕಾಗಿತ್ತು."

"ಅವುನೆಲ್ಲಿ ಮಾತಾಡ್ತನೆ ಸಾರ್. ನಿಜವಾಗ್ಲು ಇಂತ ಕ್ಯಲಸ ಮಾಡದ್ಕು ಮೊದ್ಲು ನಮ್ಮಂಥೋರ ಕೇಳದು ಬ್ಯಾಡಿ, ಸಾಮಾನ್ಯ ಜನಗಳ ಬಗ್ಗೆ ಯೋಚನೆ ಮಾಡಿದ್ರು ಸಾಕಾಗಿತ್ತು. ಅವುನು ಒಂಟ್ರು ಒಡಗೆ ಸುಂಟ್ರಗಾಳಿಯಂಥೋನು. ಇವತ್ತು ಅವುನು ಮಾಡಿರೊ ಕ್ಯಲಸ ನೋಡಿದ್ರೆ ಒಂದು ಕತೆ ಗೆಪ್ತಿಗೆ ಬತ್ತು."

"ಅದೇನೇಳು?"

"ಸಿದ್ದೇಗೌಡ ಅಂತ ವಬ್ಬ ಗದ್ದಗೌಡಿದ್ನಂತೆ. ಅವುನೆ ಊರು ಯಜಮಾನ. ಅವುನ ತ್ವಾಟದಲ್ಲಿ ಕಾಯಿ ಕಳತನ ಆಯ್ತಿದ್ದವಂತೆ. ಅದಕೆ ಅವನ ಮಗ ಏನು ಮಾಡಿದ ಅಂದ್ರೇ 'ಊರಲ್ಲಿರೊ ತೆಂಗಿನ ತ್ವಾಟದೋರ್ಯಲ್ಲ ಮನೆಲಿರೊ ನಿಮ್ಮ ಕಾಯಿತಂದು ಆಂಜನೇಯನ ಗುಡಿ ಮುಂದಾಕಿ' ಅಂದನಂತೆ. ಪಾಪ ಆಗ ಊರೋರು ಈ ತಿಕ್ಕಲಗೌಡನ್ನ ಹೆದರಾಯ್ಕಿದಲ್ಲ ಅಂತ ಕಾಯಿಸ್ಯಲ್ಲ ಹೊತಗಂಡು ಬಂದು ಊರದೇವ್ರುರು ಆಂಜನೇಯನ ಗುಡಿತ ಹಾಕಿದವಂತೆ. ಗುಡಿ ಪೂಜಾರಿಗಳು ಎಣಿಸಿ ಎಣಿಸಿ ಸಾಕಾಗಿ ಸತ್ತವಂತೆ. ಅಂಗೆ ಈ ಬ್ಯಾಂಕಿನ ಜನ ನೋಡಿದ್ರೆ ನನಿಗಾ ಪೂಜಾರಿಗಳು ಗೆಪ್ತಿಗೆ ಬತ್ತರೆ. ತನ್ನ ತ್ವಾಟದ ಕಾಯಿ ಕಳ್ತನ ಕಂಡಿಡಿಯಕ್ಕೆ ಗೌಡ ಬ್ಯಾರೆ ಮೆಥಡ್ ಮಾಡಬವುದಿತ್ತು, ಅಂಗೆ ಈ ಮೋದಿನೂ ಮಾಡಬವುದಿತ್ತು."

"ಏನು ಮಾಡಬವುದಿತ್ತು?"

"ನಮ್ಮಂಥೋರ ಕೇಳಬವುದಿತ್ತು."

"ಥೂತ್ತೇರಿ!!!" ■

ನಾಗಮಂಗಲ: ಕೀಚಕ ಪತ್ರಕರ್ತನಿಗೆ ಬಿತ್ತು ಗೂಸಾ



ವಂಚನೆ, ವಸೂಲಿ, ಕಾಮುಕತೆ ಸೇರಿದಂತೆ ಸಕಲೆಂಟು ದುರ್ಗುಣಗಳನ್ನು ಮೈಗೂಡಿಸಿಕೊಂಡಿರುವ ನಾಗಮಂಗಲದ ಪತ್ರಕರ್ತ ವೆಂಕಟೇಶ್‌ಗೆ ಜನ ಭರ್ತಿ ಗೂಸ ಕೊಟ್ಟಿದ್ದಾರೆ. ರಾಜ್ಯಮಟ್ಟದ ಪತ್ರಿಕೆಯೊಂದರ ವರದಿಗಾರನಾಗಿದ್ದನ್ನೇ ಬಂಡವಾಳ ಮಾಡಿಕೊಂಡು ಕೆಳಹಂತದ ನೌಕರನಿಂದ ಅಧಿಕಾರಿಗಳವರೆಗೆ ರೋಲ್‌ಕಾಲ್ ಮಾಡಿ ಹಾವಳಿಯಿಡುತ್ತಿದ್ದ ವಸೂಲಿ ಪತ್ರಕರ್ತ ಉಪ್ಪಾರಹಳ್ಳಿ ಎಸ್.ವೆಂಕಟೇಶ್ ಹೆಂಗಸೊಬ್ಬಳ ಮೈಮೇಲೆ ಕೈಹಾಕಿದ್ದಕ್ಕೆ ಸಮಾ ಬಡಿಸಿಕೊಂಡಿದ್ದಾನೆ. ವೆಂಕಟೇಶನದು ಕೇವಲ ಬ್ಲ್ಯಾಕ್‌ಮೇಲ್ ದಂಧೆಯಾಗಿದ್ದರೆ ಜನ ಸಹಿಸಿಕೊಳ್ಳುತ್ತಿದ್ದರೇನೊ, ಆದರೆ ಆತನ ಹಾದರದ ಕಥೆಯಿದೆಯಲ್ಲ, ಅದನ್ನು ನೋಡಿಕೊಂಡು ಸುಮ್ಮನಿರಲು ಸಾಧ್ಯವೇ ಇಲ್ಲ.

ಬಿತ್ತು ಗೂಸಾ

ನಾಗಮಂಗಲ ತಾಲ್ಲೂಕಿನ ಕಸಬಾ ಹೋಬಳಿಯ ಉಪ್ಪಾರಹಳ್ಳಿ ಗ್ರಾಮದ ವೆಂಕಟೇಶ್ ರಾಜ್ಯಮಟ್ಟದ ಪತ್ರಿಕೆಯೊಂದರ ವರದಿಗಾರನಾಗಿದ್ದ. ಪತ್ರಕರ್ತನ ಕಸುಬಿಗಿಂತ ವಂಚನೆ, ರೋಲ್‌ಕಾಲ್‌ಗಳಂತಹ ಉಪಕಸುಬುಗಳಲ್ಲೇ ಸಖತ್ ಬ್ಯುಸಿಯಾಗಿದ್ದ ಈತನಿಗೆ ಹಗ್ಗ ಕಡಿಯುವ ಚಾಳಿಯಿತ್ತು. ತನ್ನ ಊರಿನಲ್ಲೇ ಇದ್ದ ಹೆಂಗಸೊಬ್ಬಳ ಜೊತೆ ಅನೈತಿಕ ಸಂಬಂಧ ಹೊಂದಿದ್ದ ವೆಂಕಟೇಶ್ ಜನರ ಕಣ್ತುತಪ್ಪಿಸಿ ಆಕೆಯ ಜೊತೆ ಕಳ್ಳಾಟ ನಡೆಸುತ್ತಿದ್ದ. ಇದರ ವಾಸನೆ ಗ್ರಾಮಸ್ಥರಿಗೆ ಗೊತ್ತಿದ್ದರೂ ರೆಡ್‌ಹ್ಯಾಂಡಾಗಿ ಈತ ಸಿಕ್ಕಿರಲಿಲ್ಲ. ಕಳೆದ ನವೆಂಬರ್ 10ರ ರಾತ್ರಿ 10ರ ಸುಮಾರಿಗೆ ವೆಂಕಟೇಶ ಆ ಹೆಂಗಸಿನ ಮನೆಗೆ ಹೋಗಿದ್ದಾನೆ. ಯಾರೋ ವ್ಯಕ್ತಿ ತನ್ನ ಮನೆಯ ಗಲ್ಲಿಯಲ್ಲಿ ಹೋಗಿದ್ದನ್ನು ಈಕೆಯ ಸೊಸೆ ಸುಮ (ಹೆಸರು ಬದಲಿಸಿದೆ) ನೋಡಿದ್ದಾಳೆ. ಅನುಮಾನ ಬಂದು ಪಕ್ಕದ ಮನೆಯಲ್ಲಿದ್ದ ತನ್ನ ಅತ್ತೆಯನ್ನು ಕೇಳಿದ್ದಾಳೆ. ಸೊಸೆ ಕೇಳಿದ ಮಾತಿಗೆ ವೆಂಕಟೇಶನ ಸಖಿ ತಡಬಡಾಯಿಸಿದ್ದಾಳೆ. ಕೊನೆಗೆ ಸುಮ ಅತ್ತೆಯ ಮನೆಗೆ ನುಗ್ಗಿ ರೂಮಿನ ಬಾಗಿಲನ್ನು ತೆರೆದರೆ ಅಲ್ಲಿ ಅತ್ತೆಯ ಅಂತರಂಗದ ಸಖ ವೆಂಕಟೇಶ ಮಂಚದ ಮೇಲೆ ಕುಳಿತಿದ್ದಾನೆ. ಹೀಗೆ ಕಳ್ಳಬೆಕ್ಕು ವೆಂಕಟೇಶನ ಹಾದರದ ಕಥೆ ತೆರೆದುಕೊಂಡಿತ್ತು.


ಯಾವಾಗ ಸುಮ ತನ್ನ ಅಂದಿನ ಕಾಮದಾಟಕ್ಕೆ ಕಲ್ಲು ಹಾಕಿದಳೋ ಆಗ ಸಿಟ್ಟಾದ ವೆಂಕಟೇಶ ರೂಮಿಂದ ಆಚೆಬಂದವನೇ 'ಲೋಫರ್ ಮುಂಡೇ ನೀನ್ಯಾಕೆ ಇಲ್ಲಿಗೆ ಬಂದೆ. ನೀನ್ಯಾವಳೇ ಹಲ್ಕಾ ರಂಡೆ ಇದನ್ನೆಲ್ಲಾ ಕೇಳೋಕೆ' ಎಂದೆಲ್ಲ ಕೆಟ್ಟದಾಗಿ ಬೈಯುತ್ತಾ ಸುಮಳ ಜುಟ್ಟು ಹಿಡಿದು ನೆಲಕ್ಕೆ ಕೆಡವಿ ತುಳಿದಿದ್ದಾನೆ. ಆಕೆಯ ಮೈಮೇಲೆ ಕೈಹಾಕಿ ಅಸಭ್ಯವಾಗಿ ವರ್ತಿಸಿದ್ದಾನೆ. ಅಷ್ಟಾದರೂ ವೆಂಕಟೇಶನ ವಿಕೃತಿ ಕಡಿಮೆಯಾಗಲಿಲ್ಲ. ಕಾಮದಾಟ ತಪ್ಪಿಸಿದ ಸುಮಳ ಮೇಲೆ ಕ್ರೋಧಗೊಂಡ ವೆಂಕಟೇಶ ಅವಳ ಬಟ್ಟೆಯನ್ನು ಹರಿದು ಕೀಚಕನಂತೆ ವರ್ತಿಸಿದ್ದಾನೆ.

ವೆಂಕಟೇಶನ ಹೊಡೆತ ತಾಳದೆ ಸುಮಾ ಕಿರುಚಿದ್ದಂತೆ ಆಕೆಯ ಗಂಡ, ಮಾವ ಮತ್ತು ಊರಿನ ಜನ ಜಮಾಯಿಸಿ ಈ ಕಲಿಯುಗ ಕೀಚಕನಿಗೆ ಮುಖಮೂತಿ ನೋಡದೆ ರಕ್ತಬರುವಂತೆ ಚೆನ್ನಾಗಿ ಥಳಿಸಿದ್ದಾರೆ. ಧೂರ್ತ ವೆಂಕಟೇಶನ ಬುರುಡೆಯಿಂದ ಕೆಂಪಣ್ಣೆ ಸುರಿಯುವವರೆಗೂ ಸಮಾ ರುಬ್ಬಿದ ಜನ ನಂತರ ಬಿಟ್ಟುಕಳಿಸಿದ್ದಾರೆ. ಜನರ ಕೈಯಿಂದ ಬಡಿಸಿಕೊಂಡ ವೆಂಕಟೇಶ ಬೆಳ್ಳೂರಿನ ಬಿ.ಜಿ. ಆಸ್ಪತ್ರೆಗೆ ದಾಖಲಾಗಿದ್ದ. ತಲೆಬುರುಡೆ ಬಿಚ್ಚಿಹೋಗಿದೆ ಎಂದು ವೈದ್ಯರ ಮುಂದೆ ನಾಟಕವಾಡಿದ್ದ. ಮಾರನೇ ದಿನ ಅಂದರೆ ನವೆಂಬರ್ 11ರ ಬೆಳಗ್ಗೆ ಏಟು ತಿಂದ ಸುಮ ತನ್ನ ಪತಿ, ಮಾವನ ಜೊತೆ ಹೋಗಿ ನಾಗಮಂಗಲ ಪೊಲೀಸ್ ಠಾಣೆಯಲ್ಲಿ ವೆಂಕಟೇಶನ ಮೇಲೆ ದೂರು ದಾಖಲಿಸಿದಳು. ಐಪಿಸಿ ಸೆಕ್ಷನ್ 354 ಎ, 354 ಬಿ, 504 ರಡಿ ಅತ್ಯಾಚಾರ ಯತ್ನ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಎಫ್‌ಐಆರ್ ಹರಿದಿದ್ದಾರೆ. ಈ ವಿಷಯ ತಿಳಿಯುತ್ತಿದ್ದಂತೆಯೇ ಬಿ.ಜಿ. ಆಸ್ಪತ್ರೆಯ ವೈದ್ಯರಿಗೆ ಕಥೆ ಕಟ್ಟಿ ಬೆಂಗಳೂರಿನ ನಿಮ್ಹಾನ್ಸ್‌ಗೆ ದಾಖಲಾಗುತ್ತೇನೆ ಎಂದು ನಂಬಿಸಿ ಹೊರಬಂದ ವೆಂಕಟೇಶ ಎಸ್ಕೇಪಾಗಿದ್ದಾನೆ.

ವೆಂಕಟೇಶ ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಅಮೃತೂರಿನ ತನ್ನ ಷಡ್ಡಕನ ಮನೆಯಲ್ಲಿದ್ದಾನೆ ಎಂದು ಜನರೆ ಹೇಳುತ್ತಿದ್ದರೂ ನಾಗಮಂಗಲ ಪೊಲೀಸರು ಆತನನ್ನು ಇನ್ನೂ ಅರೆಸ್ಟ್ ಮಾಡದಿರುವುದು ಸಂಶಯ ಮೂಡಿಸಿದೆ.

ಕೀಚಕ ವೆಂಕಟೇಶನ ಅಸಲಿಕಥೆ

ರಾಜ್ಯಮಟ್ಟದ ಪತ್ರಿಕೆಯೊಂದರ ವರದಿಗಾರನಾಗಿದ್ದ ವೆಂಕಟೇಶ ತನ್ನ ವರದಿಗಾರಿಕೆಗಿಂತ ವಂಚನೆ, ವಸೂಲಿಯಿಂದಲೇ ತಾಲ್ಲೂಕಿನ ಅಧಿಕಾರಿಗಳು ಹಾಗೂ


ಎಫ್‌ಐಆರ್ ಪ್ರತಿ

ಜನರ ಮಧ್ಯೆ ಕೆಟ್ಟ ಹೆಸರು ಸಂಪಾದಿಸಿದ್ದ. ಇಲಾಖೆಗಳಲ್ಲಿ ನಡೆಯುವ ಭ್ರಷ್ಟಾಚಾರವನ್ನೇ ಮುಂದಿಟ್ಟುಕೊಂಡು ಇಂತಿಷ್ಟು ಹಣ ಕೊಡು ಇಲ್ಲದಿದ್ದರೆ ಪತ್ರಿಕೆ ಮುಖಪುಟದಲ್ಲಿ ನಿನ್ನ ವಿರುದ್ಧ ಬರೆಯುತ್ತೇನೆ ಎಂದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದ. ಈತ ಬಿಡುತ್ತಿದ್ದ ಪ್ಲಾಸ್ಟಿಕ್ ಹಾವಿಗೆ ಬೆದರಿ ಬೆಂಡಾಗುತ್ತಿದ್ದ ಅಧಿಕಾರಿಗಳು ಅಷ್ಟೋ ಇಷ್ಟೋ ಕೊಟ್ಟು ಕೈ ತೊಳೆದುಕೊಳ್ಳುತ್ತಿದ್ದರು.

ತಾಲ್ಲೂಕಿನಲ್ಲಿ ನಡೆಯುವ ಅಕ್ರಮ ಗಣಿಗಾರಿಕೆ ಹಾಗೂ ಮರಳುಗಾರಿಕೆ ಅಡ್ಡೆಗಳ ಬಳಿ ಹೋಗಿ ಬೆದರಿಸಿ ಹಣ ವಸೂಲಿ ಮಾಡುತ್ತಿದ್ದ ವೆಂಕಟೇಶನ ಮುಖ ಕಂಡೊಡನೆ ದಂಧೆಕೋರರು ಒಂದಷ್ಟು ಕಾಸು ಬಿಸಾಕಿ ಕಳುಹಿಸುತ್ತಿದ್ದರು. ಇಂತ ಧೂರ್ತ ಕ್ರಿಮಿ ಈತ.

ಈಗೊಂದು ವರ್ಷದ ಹಿಂದೆ ಅಕ್ರಮವಾಗಿ ಫಿಲ್ಟರ್ ಮರಳು ದಂಧೆ ದಡಗ ಕೆರೆಗೆ ಹೋದ ವೆಂಕಟೇಶ ದಂಧೆಕೋರರ ಬಳಿ ಮಾಮೂಲಿಗಿಂತ ಹೆಚ್ಚು ಹಣ ಕೊಡುವಂತೆ ಕೇಳಿದ್ದ. ಕೊಡದಿದ್ದರೆ ಪೊಲೀಸರಿಗೆ ಹೇಳಿ ದಂಧೆ ಬಂದ್ ಮಾಡಿಸುತ್ತೇನೆ ಎಂದು ಆವಾಜ್ ಹಾಕಿದ್ದ. ಆಗ ದಂಧೆಕೋರರು ಅಲ್ಲೇ ಬಿದ್ದಿದ್ದ ತೆಂಗಿನ ಗೊದಮೊಟ್ಟೆ ತೆಗೆದುಕೊಂಡು ಭರ್ತಿ ಒದೆ ಕೊಟ್ಟಿದ್ದರು. ಇಷ್ಟಾದ ಮೇಲೂ ವೆಂಕಟೇಶ ಮಾತ್ರ ತನ್ನ ವಸೂಲಿ ಬಾಜಿ ದಂಧೆಯನ್ನು ಬಿಟ್ಟಿರಲಿಲ್ಲ.

ನಾಗಮಂಗಲ ತಾಲ್ಲೂಕಿನಲ್ಲಿ ಹಲವು ಅಕ್ರಮ ಜಲ್ಲಿ ಕ್ರಷರ್‌ಗಳಿವೆ. ಯಾವುದೇ ಅನುಮತಿ ಇಲ್ಲದೆ ನಡೆಯುವ ಈ ದಂಧೆಯಿಂದ ಪ್ರತಿನಿತ್ಯ ಲಕ್ಷಲಕ್ಷ ಹಣವನ್ನು ಅಕ್ರಮ ಗಣಿಕೋರರು ದೋಚುತ್ತಿದ್ದಾರೆ. ಇವರಿಂದಲೂ ಮಾಮೂಲಿ ಫಿಕ್ಸ್ ಮಾಡಿಕೊಂಡಿದ್ದ ವೆಂಕಟೇಶ ಹಣ ಕಮಾಯಿಸುತ್ತಿದ್ದ. ತಾಲ್ಲೂಕಿನ ಯಾವಯಾವ ಕೆರೆಗಳಲ್ಲಿ ಅಕ್ರಮ ಮರಳುಗಾರಿಕೆ ನಡೆಯುತ್ತಿದೆ, ಎಲ್ಲೆಲ್ಲಿ ಫಿಲ್ಟರ್ ಮರಳು ದಂಧೆ ನಡೆಯುತ್ತಿದೆ ಎಂಬ ಮಾಹಿತಿ ವೆಂಕಟೇಶನಿಗೆ ಚೆನ್ನಾಗಿ ಗೊತ್ತಿತ್ತು. ಹಣ ಕೊಡದಿದ್ದರೆ ಪತ್ರಿಕೆಯಲ್ಲಿ ಬರೆದು ನಮ್ಮ ಆದಾಯಕ್ಕೆ ಕಲ್ಲು ಹಾಕ್ತಾನೆ ಎಂದು ಹೆದರಿ ದಂಧೆಕೋರರು ಒಂದಷ್ಟು ಹಣ ಕೊಟ್ಟು ಸಾಗಹಾಕುತ್ತಿದ್ದರು.

ಬೆಳ್ಳೂರು ಟೋಲ್‌ಗೇಟ್ ಬಳಿ ಹೋಗಿ ನಿಲ್ಲುತ್ತಿದ್ದ ವೆಂಕಟೇಶ್ ಆ ಮಾರ್ಗವಾಗಿ ಬೆಂಗಳೂರಿಗೆ ಹೋಗುವ ಅಕ್ರಮ ಮರಳು ಲಾರಿಗಳನ್ನು ಅಡ್ಡಹಾಕಿ ತಾನು ರಾಜ್ಯಮಟ್ಟದ ಪತ್ರಿಕೆಯೊಂದರ ಪತ್ರಕರ್ತ ಹಣ ಕೊಡದಿದ್ದರೆ ಪೊಲೀಸರಿಗೆ ಹೇಳುತ್ತೇನೆ ಎಂದು ಬ್ಲ್ಯಾಕ್‌ಮೇಲ್ ಮಾಡಿ ಒಂದು ಲಾರಿಗೆ ಇಂತಿಷ್ಟು ಎಂದು ಹಣ ಪಡೆಯುತ್ತಿದ್ದ.

ವೆಂಕಟೇಶನ ಈ ಬ್ಲ್ಯಾಕ್‌ಮೇಲ್ ದಂಧೆಯಿಂದ ನಾಗಮಂಗಲದ ಉಳಿದ ಪತ್ರಕರ್ತರೇ ಬೇಸತ್ತಿದ್ದರು. ಈತನಿಂದ ಪತ್ರಕರ್ತರಿಗೆ ಬೆಲೆಯಿಲ್ಲದಂತಾಗಿತ್ತು. ನಾಗಮಂಗಲದ ಯಾವ ಪತ್ರಕರ್ತನೂ ಈತನ ಬಗ್ಗೆ ಒಳ್ಳೆ ಮಾತು ಹೇಳುವುದಿಲ್ಲ. ಇನ್ನು ಅಧಿಕಾರಿಗಳು ಹಾಗೂ ಜನಸಾಮಾನ್ಯರು ಈತನ ಕೆಟ್ಟಚಾಳಿಗೆ ಕೊನೆಯೆಂದೊ ಎಂದು ಗೋಳಾಡುತ್ತಿದ್ದರು. ಈಗ ಬಹುಶಃ ಅವರೆಲ್ಲ ನಿಟ್ಟುಸಿರು ಬಿಡುತ್ತಿರಬಹುದು.

ಇನ್ನು ವೆಂಕಟೇಶನಿಗೆ ಹಣ ಕೊಟ್ಟು ಆತನಿಂದ ಮೋಸ ಹೋದವರ ಕಥೆಗಳಿಗಂತೂ ಲೆಕ್ಕವಿಲ್ಲ. ತನ್ನ ನಯವಂಚನೆಯ ಮಾತುಗಳಿಂದ ಎಂತಹವರನ್ನೂ ಮರಳು ಮಾಡುವ ಕಲೆ


ಜನರಿಂದ ಗೂಸಾ ತಿಂದ ಕೀಚಕ ಅಪ...


ವೆಂಕಟೇಶನಿಗೆ ಕರಗತ. ತನ್ನ ವಂಚಕ ಮಾತುಗ... ಲಕ್ಷಾಂತರ ಹಣವನ್ನು ಪಡೆಯುವ ವೆಂಕಟೇಶ ... ನಂಬಿಸಲು ಚೆಕ್ ಕೊಡುತ್ತಾನೆ. ಆದರೆ ಹೇಳಿದ ... ಬಡ್ಡಿಯೂ ಕೊಡಲ್ಲ, ಅಸಲಂತೂ ಇಲ್ಲವೆ... ಮೊದಮೊದಲು ಹಣ ಕೇಳಿದರೆ ಈಗ ಕೊಡ್ತ... ಕೊಡ್ತೇನೆ ಎನ್ನುವ ವೆಂಕಟೇಶ ನಂತರ 'ಹೋ... ಕೊಡೋಲ್ಲ, ಅದೇನು ಮಾಡ್ಕೋತಿರಾ ಮಾಡ್ಕೊ...' ಎಂದು ಕೈಎತ್ತಿ ಬಿಡುತ್ತಿದ್ದ. ಈತನ ವಂಚನೆಗೆ ... ಹಲವರು ನ್ಯಾಯಾಲಯದ ಮೊರೆ ಹೋಗಿದ್ದರು ... ಮೇಲೆ ಚೆಕ್‌ಬೌನ್ಸ್ ಕೇಸುಗಳು ಇವತ್ತಿಗೂ ನಡೆ...

ಈತ ಅದೆಂತಹ ವಂಚಕನೆಂದರೆ ತಾನು ಪ... ಹಾಕಿಸುವ ಜಾಹೀರಾತುಗಳ ಹಣವನ್ನೇ ... ಕೊಡುತ್ತಿರಲಿಲ್ಲ. ಈ ಹಿಂದೆ ಕೆಲಸ ಮಾಡಿದ್ದ ಪ... ಇದೇರೀತಿ ಲಕ್ಷಾಂತರ ಹಣ ವಂಚಿಸಿದ್ದಾನೆ. ... ಪತ್ರಿಕೆಗಳಲ್ಲೂ ಸಣ್ಣ-ಪುಟ್ಟ ನೋಟಿಸು ಹಾಕಿಸಿ ... ಸಾವಿರಗಟ್ಟಲೆ ಮೋಸ ಮಾಡಿದ ಕೀರ್ತಿ ವೆಂಕಟೇ...

ನಾಗಮಂಗಲದಂತಹ ಸಣ್ಣ ಪಟ್ಟಣದಲ್ಲಿ ಪ... ಸಂಖ್ಯೆ ಕಡಿಮೆ. ದಿನಕ್ಕೊಂದು ಪತ್ರಿಕೆ ಕಣ್ತೆರೆಯು... ಬಂಡವಾಳ ಮಾಡಿಕೊಂಡಿರುವ ಈತ ವರ್ಷ... ಪತ್ರಿಕೆ ಬದಲಾಯಿಸುತ್ತಾನೆ. ಈತನ ವಂಚನೆ ... ಸಹಿಸಲು ಸಾಧ್ಯವಿಲ್ಲವೋ ಆಗ ಆತನಿಗೆ ಆ ಪತ್ರಿ... ಗೇಟ್‌ಪಾಸ್ ಕೊಡಲಾಗುತ್ತದೆ. ಮತ್ತೆ ಕೆಲದಿ... ಇನ್ನೊಂದು ಪತ್ರಿಕೆಯ ವರದಿಗಾರನಾಗಿ ರೋ... ಶುರುವಿಟ್ಟುಕೊಳ್ಳುತ್ತಾನೆ. ಒಟ್ಟಾರೆ ನಾಗ... ಪತ್ರಿಕೋದ್ಯಮಕ್ಕೆ ಈತನೊಂದು ಕಪ್ಪುಚುಕ್ಕೆ. ತನ್ನ ... ಸಂಬಂಧದಿಂದಾಗಿ ಜನರಿಂದ ಬಡಿಸಿಕೊಂಡ ಮೇ... ಬುದ್ಧಿ ಕಲಿಯುತ್ತಾನೆನ್ನುವ ಯಾವ ಗ್ಯಾರಂಟಿಯು... ಪೊಲೀಸರೆ ಅವನನ್ನು ಜೈಲಿಗೆ ಗದುಮಿ... ಬೋಧಿಸಬೇಕಿದೆ.

■ ವರದಿ...

ಕೊಪ್ಪಳ: ಹಿಟ್ನಾಳ್ ಕಂಪನಿಯ ಫ್ಯಾಮಿಲಿ ದರ್ಬಾರ್



ಕಳೆದ 20 ವರ್ಷಗಳಿಂದ ಕುಟಿಲ ರಾಜಕೀಯ ನೀತಿಯ ಮೂಲಕ ಕೊಪ್ಪಳವನ್ನು ತಮ್ಮ ಪಿತ್ರಾರ್ಜಿತ ಜಾಹಗೀರು ಮಾಡಿಕೊಂಡಿರುವ ಹಿಟ್ನಾಳ್ ಕಂಪನಿಯ ಕುಟುಂಬ ರಾಜಕಾರಣ ಹದ್ದುಮೀರಿ ಹೋಗಿದೆ. ಮಾಜಿ ಶಾಸಕ ಬಸವರಾಜ ಹಿಟ್ನಾಳ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷನಾಗಿದ್ದರೆ ಇವರ ಮಗ ಕೆ.ರಾಘವೇಂದ್ರ ಹಿಟ್ನಾಳ ಹಾಲಿ ಕೊಪ್ಪಳದ ಶಾಸಕ. ಈತನ ಸಹೋದರ ರಾಜಶೇಖರ ಕೊಪ್ಪಳ ಜಿಪಂ ಸದಸ್ಯನಾಗಿದ್ದರೆ ಇನ್ನೊಬ್ಬ ಸಹೋದರ ಇದೇ ಹುದ್ದೆಯಲ್ಲಿ ಮಾಜಿಯಾದವನು.


ಅಸಲಿಗೆ ಬಸವರಾಜ ಹಿಟ್ನಾಳನಿಗೆ ಪಕ್ಷನಿಷ್ಠೆ ಎಂದರೇನೆಂಬುದೇ ಗೊತ್ತಿಲ್ಲ. ಆ ಪರಿ ಪಕ್ಷಾಂತರಿ ಜೀವ ಅದು. ಕಾಂಗ್ರೆಸ್‌ನಿಂದ ರಾಜಕಾರಣ ಆರಂಭಿಸಿ 1994ರ ವಿಧಾನಸಭಾ ಚುನಾವಣೆಯಲ್ಲಿ ಇವರು ಕೈ ಟಿಕೆಟಗೆ ಬೇಡಿಕೆ ಇಟ್ಟಿದ್ದರು. ಆದರೆ ಹೈಕಮಾಂಡ ಕ್ಯಾರೆ ಎನ್ನಲಿಲ್ಲ. ಆಗ ಕಾಂಗ್ರೆಸ್‌ನಿಂದ ಬಂಡಾಯವೆದ್ದು ಕೆ.ಸಿ.ಪಿ (ಕರ್ನಾಟಕ ಕಾಂಗ್ರೆಸ್ ಪಾರ್ಟಿ) ಕಟ್ಟಿದ್ದ ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪನ ಹಿಂದೆ ಹೋಗಿ ಚುನಾವಣೆಗೆ ನಿಂತಿದ್ದರು. ಕೆ.ಸಿ.ಪಿ ಅಭ್ಯರ್ಥಿಯಾಗಿದ್ದ ಹಿಟ್ನಾಳ್‌ಗೆ ಲಭಿಸಿದ್ದು ಕೇವಲ 10000 ಮತ ಮಾತ್ರ. ಆ ಎಲೆಕ್ಷನ್‌ನಲ್ಲಿ ಸಂಗಣ್ಣ ಕರಡಿ ಗೆಲುವಿನ ನಗೆ ಬೀರಿದ್ದರು. 1999ರ ವೇಳೆಗಾಗಲೆ ದೇವೇಗೌಡರ ಜೆ.ಡಿ.ಎಸ್ ಪಾರ್ಟಿ ಸೇರಿದ ಬಸವರಾಜ ಹಿಟ್ನಾಳ ಮಗದೊಮ್ಮೆ ಸಂಗಣ್ಣ ಕರಡಿಯ ಎದುರು ನಿಂತು ಸೋತರು. ಆ ಬಾರಿ ಮೊದಲಗಿಂತ ಒಂಬತ್ತು ಸಾವಿರ ಹೆಚ್ಚು ಮತಗಳು ಬಿದ್ದಿದ್ದೇ ಹಿಟ್ನಾಳ್‌ನ ಸಾಧನೆ.

2004ರ ಹೊತ್ತಿಗೆ ಸಂಗಣ್ಣ ಕರಡಿ ಜೆಡಿಯು ಬಿಟ್ಟು ಬಿಜೆಪಿ ಸೇರಿದ್ದರಿಂದ ತನ್ನ ಕುರುಬ ಜಾತಿಯ ಸಿಂಧನೂರಿನ ಮಾಜಿ ಶಾಸಕ ಕೆ.ವಿರುಪಾಕ್ಷಪ್ಪ ಮುಖಂಡತ್ವದಲ್ಲಿ ಹಿಟ್ನಾಳ್ ಮತ್ತೆ ಕಾಂಗ್ರೆಸ್ ಗೃಹಪ್ರವೇಶಿಸಿದ್ದರು. 2004ರ ಎಲೆಕ್ಷನ್‌ನಲ್ಲಿ ಬಿಜೆಪಿಯಿಂದ ಅಖಾಡಕ್ಕಿಳಿದಿದ್ದ ಸಂಗಣ್ಣ ಕರಡಿ ಮಕಾಡೆ ಬಿದ್ದರೆ ಸತತ ಸೋಲುಗಳಿಂದ ಕಂಗೆಟ್ಟಿದ್ದ ಹಿಟ್ನಾಳ ಅನುಕಂಪದ ಅಲೆಯಲ್ಲಿ ಗೆದ್ದು ಬಂದರು. 2008ರ ಹೊತ್ತಿಗೆ ಹಿಟ್ನಾಳ್‌ನ ನಸೀಬು ಮತ್ತೆ ಕೈಕೊಟ್ಟಿತ್ತು. ಆ ಸಲ ನಡೆದ ಚುನಾವಣೆಯಲ್ಲಿ ಜನ ಹಿಟ್ನಾಳ್‌ಗೆ ಮನೆ ಹಾದಿ ತೋರಿಸಿ, ಅಷ್ಟರಲ್ಲಾಗಲೆ ಜೆಡಿಎಸ್‌ಗೆ ಜಿಗಿದು ಸ್ಪರ್ಧಿಸಿದ್ದ ಸಂಗಣ್ಣ ಕರಡಿಯನ್ನು ಗೆಲ್ಲಿಸಿಕೊಂಡಿದ್ದರು. ಆದರೆ ಈ ಪಕ್ಷಾಂತರ ಕರಡಿಯೂ ಆಪರೇಷನ್ ಕಮಲಕ್ಕೆ ಬಲಿಗೊಂಡು 2011ರಲ್ಲಿ ಕೊಪ್ಪಳಕ್ಕೆ ಮರು ಚುನಾವಣೆ ತಂದಿಟ್ಟಿದ್ದ. ಆಗಲೂ ಬಸವರಾಜ ಹಿಟ್ನಾಳ ಕಾಂಗ್ರೆಸ್‌ನಿಂದ ಬಿಜೆಪಿಯ ಸಂಗಣ್ಣನ ವಿರುದ್ಧ ಸ್ಪರ್ಧಿಸಿದನಾದರೂ ಕರಡಿಯನ್ನು ಮಣಿಸಲಾಗಲಿಲ್ಲ.

ಹಿಟ್ನಾಳ್‌ನ ಹಣೆಬರಹ ತಿಳಿದ ಕಾಂಗ್ರೆಸ್ ಹೈಕಮಾಂಡ್ 2013ರಲ್ಲಿ ಈತನ ಬದಲಿಗೆ ಪುತ್ರ, ಅಂದು ಜಿಪಂ ಸದಸ್ಯನಾಗಿದ್ದ ಕೆ.ರಾಘವೇಂದ್ರ ಹಿಟ್ನಾಳನಿಗೆ ಮಣೆಹಾಕಿ ಟಿಕೆಟ್ ನೀಡಿತ್ತು. ಮುರಿದ ಮನೆಯಾಗಿದ್ದ ಬಿ... ದುರಾಡಳಿತದಿಂದ ಬೇಸತ್ತುಹೋಗಿದ್ದ ಜನ ... ಗೇಟ್‌ಪಾಸ್ ಕೊಟ್ಟು ರಾಘವೇಂದ್ರನನ್ನು ಬರ... 27000 ಮತಗಳ ಅಂತರದಿಂದ ಗೆಲ್ಲಿಸಿದ್ದರು. ಅ... ಬಸವರಾಜ್ ಹಿಟ್ನಾಳ್‌ನ ಅಧಿಕಾರ ದಾಹ ಹಿಂ... ಹಾಗಾಗಿ 2014ರ ಲೋಕಸಭಾ ಚುನಾವಣೆ ಎದು... 'ಕುಲಬಾಂಧವ' ಟ್ರಂಪ್‌ಕಾರ್ಡ್ ಹಿಡಿದು ಮುಖ್ಯ... ಸಿದ್ದರಾಮಯ್ಯನವರ ಮೂಲಕ ಕಾಂಗ್ರೆಸ್‌ನ ... ಗಿಟ್ಟಿಸಿಕೊಂಡಿದ್ದ. ಕೈ ಟಿಕೆಟ್‌ನ ಪ್ರಬಲ ಆಕಾಂಕ್ಷಿ... ಲಿಂಗಾಯತ ಸಮಾಜದ ಮಾಜಿ ಸಚಿವ ಅಮ... ಬೈಯಾಪುರನನ್ನು ಓವರ್‌ಟೇಕ್ ಮಾಡಿ ... ದಕ್ಕಿಸಿಕೊಳ್ಳುವಲ್ಲಿ ಹಿಟ್ನಾಳ್ ಯಶಸ್ವಿಯಾದರೂ ಚು... ಫಲಿತಾಂಶದಲ್ಲಿ ಬರ್ಕತ್ತಾಗಲಿಲ್ಲ. ಅತ್ತ ಬಿಜೆಪಿ ... ಕರಡಿಯನ್ನು ಕಣಕ್ಕಿಳಿಸಿತ್ತು. ಹಿಟ್ನಾಳ್ ತನ್ಮೂಲಕ ಕಾ... ಮತ್ತೊಂದು ಸೋಲಿನ ಉಡುಗೊರೆ ನೀಡಿದ್ದ.

ಕೊಪ್ಪಳದಲ್ಲಿ ಈ ಪರಿ ಅಧಿಕಾರದ ... ಹಿಡಿದಿದ್ದರೂ ಕ್ಷೇತ್ರದ ಅಭಿವೃದ್ಧಿಗೆ ಈ ಕುಟುಂ... ನಯಾಪೈಸೆಯ ಲಾಭವಾಗಿಲ್ಲ. ಕೊಪ್ಪಳ ನಗರದ... ಕುಡಿಯುವ ನೀರಿನ ಮುಖ ನೋಡುವುದ... ದಿನಕ್ಕೊಮ್ಮೆ. ನಗರದ ಬಡಾವಣೆಗಳು ಮೂಲಸೌ...

ರಾಯಚೂರು: ಬೀದಿಗೆ ಬಂತು 'ಕೈ'ಯೊಳಗಿನ ಕಾದಾಟ


ವಸಂತ್‌ಕುಮಾರ್


ರಾಯಚೂರು ಜಿಲ್ಲೆಯಲ್ಲಿ ಸದ್ಯಕ್ಕೆ ಪ್ರಭಾವಿ ಪಕ್ಷವೆಂದರೆ ಕಾಂಗ್ರೆಸ್. ಇಲ್ಲಿನ ಏಳು ವಿಧಾನಸಭಾ ಕ್ಷೇತ್ರಗಳ ... ಮೂವರು ಶಾಸಕರನ್ನು ಹೊಂದಿರುವ ಕಾಂಗ್ರೆಸ್ ...ಕಸಭಾ ಸದಸ್ಯ ಸ್ಥಾನವನ್ನೂ ತನ್ನದಾಗಿಸಿಕೊಂಡಿದೆ. ...ಕಿರಲ್ಲಿ ರಾಜ್ಯದಲ್ಲಿ ನಡೆಯಲಿರುವ ವಿಧಾನಸಭಾ ...ವಣೆಯ ಮುನ್ನೆಲೆಯಲ್ಲಿ ಜಿಲ್ಲೆಯನ್ನು ಸರ್ವೇ ...ದರೆ ಕಾಂಗ್ರೆಸ್ ಸ್ಪಷ್ಟ ಮೇಲುಗೈ ಸಾಧಿಸುವ ಲಕ್ಷಣಗಳೇ ...ಚರಿಸುತ್ತಿವೆ. ಆದರೆ ಅದೆಲ್ಲಕ್ಕೂ ಕಾಂಗ್ರೆಸ್ಸೇ ...ಹಾಕಿಕೊಳ್ಳುವಂತೆ ಕಾಣುತ್ತಿದೆ. ಇಷ್ಟುದಿನ ತನ್ನೊಳಗೆ ...ಯುತ್ತಿದ್ದ ಒಳಜಗಳದ ಮುಸುಕಿನ ಗುದ್ದಾಟ ಈಗ ...ಗ್ರೆಸ್ ಜಿಲ್ಲಾಧ್ಯಕ್ಷರ ನೇಮಕಾತಿಯ ವಿವಾದದಲ್ಲಿ ಬೀದಿಗೆ ...ದಿದೆ. ಇದು ಶಮನವಾಗುವ ಯಾವ ಲಕ್ಷಣಗಳೂ ...ತ್ತಿಲ್ಲ. ದಿನೇದಿನೇ ಉಲ್ಬಣಿಸುತ್ತಿರುವ ಅಧಿಕಾರ, ಸ್ವಪ್ರತಿಷ್ಠೆ ...ದಾಟ ಕಾಂಗ್ರೆಸ್‌ಗೆ ಶಾಪವಾಗಿ ಪರಿಣಮಿಸುವುದಂತೂ ...

...ಜಿಲ್ಲೆಯ ಕಾಂಗ್ರೆಸ್‌ನೊಳಗೆ ಎರಡು ಬಣಗಳಿರುವುದು ...ರಿಗೇ ಆದರೂ ಮೇಲ್ನೋಟಕ್ಕೇ ಕಂಡುಬರುತ್ತದೆ. ...ಜಿ ಜಿಲ್ಲಾಧ್ಯಕ್ಷ ಎ.ವಸಂತ್‌ಕುಮಾರ್‌ದು ಒಂದು ...ದಾದರೆ ಕೆಪಿಸಿಸಿ ಕಾರ್ಯದರ್ಶಿ, ಹಾಲಿ ವಿಧಾನ ...ಷತ್ ಸದಸ್ಯ ಎನ್.ಎಸ್.ಬೋಸರಾಜುದು ಮತ್ತೊಂದು ... ವಸಂತ್‌ಕುಮಾರ್ ಜೊತೆ ಸಿಂಧನೂರು ಶಾಸಕ ...ನಗೌಡ ಬಾದರ್ಲಿ ಮತ್ತು ಮಸ್ಕಿ ಶಾಸಕ ಪ್ರತಾಪ್‌ಗೌಡ ...ೀಲ್ ಬಲವಾಗಿ ನಿಂತುಕೊಂಡಿದ್ದರೆ, ಬೋಸರಾಜು ...ಜಿ ಮಾನ್ವಿ ಶಾಸಕ ಹಂಪಯ್ಯ ನಾಯಕ್ ಮತ್ತಿತರ ...ಯ ಸಂಸ್ಥೆಗಳ ಜನಪ್ರತಿನಿಧಿಗಳಿದ್ದಾರೆ. ಇಷ್ಟುದಿನ ಶೀತಲ ...ರಕ್ಕಷ್ಟೆ ಸೀಮಿತವಾಗಿದ್ದ ಈ ಬಣ ರಾಜಕಾರಣ ಈಗ ...ಯಲ್ಲಿ ನಿಂತು ಪರಸ್ಪರ ಆರೋಪ, ಪ್ರತ್ಯಾರೋಪಕ್ಕೆ ...ದುನಿಂತಿದೆ. ಕಳೆದ ನಾಲ್ಕಾರು ವರ್ಷಗಳಿಂದ ...ಂತಕುಮಾರ್ ಮತ್ತು ಬೋಸರಾಜು ನಡುವೆ ...ಸೀಗೆಕಾಯಿ ಸಂಬಂಧವಿದೆ. ಒಂದೇ ಪಾರ್ಟಿಯಲ್ಲಿದ್ದರೂ ...ರ ನಡುವೆ ಭಿನ್ನಾಭಿಪ್ರಾಯ ಯಾವಾಗಲೂ ಇದ್ದಿದ್ದೆ. ಆದರೆ ಮೊನ್ನೆ ಹತ್ತಾರು ವರ್ಷಗಳಿಂದ ಕಾಂಗ್ರೆಸ್ ...ಧ್ಯಕ್ಷನಾಗಿದ್ದ ವಸಂತ್‌ಕುಮಾರ್‌ನನ್ನು ಆತನಿಗೇ ...ಲ್ಲದಂತೆ ಕೆಳಗಿಳಿಸಿ ಆ ಸ್ಥಾನದಲ್ಲಿ ತನ್ನ ಬಣದ ಮಾಜಿ ಜಿ.ಪಂ ಅಧ್ಯಕ್ಷ ರಾಮಣ್ಣ ಇರಬಗೇರಾರನ್ನು ಹಂಗಾಮಿ ಅಧ್ಯಕ್ಷನನ್ನಾಗಿ ನೇಮಿಸಿದ ಬೋಸರಾಜು ಬಹಿರಂಗ ಕದನದ ಪಂಥಾಹ್ವಾನ ನೀಡಿದ್ದರು. ವಸಂತ್‌ಕುಮಾರ್‌ನ ಕಾಡಾ ಅಧ್ಯಕ್ಷ ಸ್ಥಾನದ ಅಧಿಕಾರ ಕಳೆದ ತಿಂಗಳಷ್ಟೆ ಕೊನೆಗೊಂಡಿತ್ತು. ಆ ಸ್ಥಾನಕ್ಕೂ ಬೋಸರಾಜು ಆಪ್ತ ಮಾನ್ವಿ ಶಾಸಕ ಹಂಪಯ್ಯ ನಾಯಕ್ ಬಂದು ಕುಳಿತಾಗಿದೆ. ಇದೀಗ ಬೋಸರಾಜು ಕುತಂತ್ರದಿಂದ ಜಿಲ್ಲಾಧ್ಯಕ್ಷ ಪಟ್ಟವೂ ಕೈತಪ್ಪಿರುವುದರಿಂದ ವಸಂತ್‌ಕುಮಾರ್ ಅಕ್ಷರಶಃ ಸಿಟ್ಟಿಗೆದ್ದಿದ್ದಾರೆ. ರೊಚ್ಚಿಗೆದ್ದ ಆತ ತನ್ನ ಬೆಂಬಲಿಗರನ್ನು ಮುಂದೆ ಬಿಟ್ಟು ನೇರವಾಗಿ ಬೋಸರಾಜು ಪ್ರತಿಕೃತಿಗೆ ಚಪ್ಪಲಿ ಹಾರ ಹಾಕಿಸುವ ಮೂಲಕ ಯುದ್ಧ ಘೋಷಿಸಿದ್ದಾರೆ.

ವಸಂತ್‌ಕುಮಾರ್‌ನ ವಾದವೇನು?

ಜಿಲ್ಲಾ ಕಾಂಗ್ರೆಸ್ ಹಂಗಾಮಿ ಅಧ್ಯಕ್ಷನಾಗಿ ರಾಮಣ್ಣ ಇರಬಗೇರಾ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ನೇಮಕ ಮಾಡಿದ್ದು ಕಾಂಗ್ರೆಸ್ ನಾಯಕನಿಗೆ ಎಸಗಿದ ಅನ್ಯಾಯವಾಗಿದೆ. ಪರಮೇಶ್ವರ ಅವರ ಅವಧಿ ಮುಗಿಯುವವರೆಗೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿ ವಸಂತಕುಮಾರರನ್ನೇ ಮುಂದುವರಿಸಬೇಕೆಂಬುದು ವಸಂತ್‌ಕುಮಾರ್ ಬೆಂಬಲಿಗರ ಒತ್ತಾಯ. ರಾಜ್ಯದಲ್ಲಿ ಪಕ್ಷದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಧ್ಯಕ್ಷರನ್ನು ನೇಮಕ ಮಾಡಿ ಘೋಷಿಸದೆ ಕೇವಲ ಮೂರು ಜಿಲ್ಲೆಗಳಲ್ಲಿ ಮಾತ್ರ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಘೋಷಿಸಿದೆ. ಇದರಲ್ಲಿ ವಿಧಾನ ಪರಿಷತ್ ಸದಸ್ಯ ಬೋಸರಾಜು ಅವರ ಕುತಂತ್ರವಿದೆ. ರಾಜ್ಯದ ಕಾಂಗ್ರೆಸ್ ನಾಯಕರಲ್ಲಿ ಒತ್ತಾಯ ಮಾಡಿ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಬೇರೊಬ್ಬರ ಹೆಸರನ್ನು ಸೂಚಿಸಲಾಗಿದೆ ಎಂಬ ಆರೋಪವನ್ನು ವಸಂತ್‌ಕುಮಾರ್ ಬೆಂಬಲಿಗರು ಮಾಡುತ್ತಿರುವುದರಲ್ಲಿ ಹುರುಳಿದೆ.

ಜಿಲ್ಲಾಧ್ಯಕ್ಷ ಸ್ಥಾನ ಬದಲಾವಣೆ ಕುರಿತಾಗಿ ಮಾಹಿತಿ ನೀಡದೇ ಹಂಗಾಮಿ ಅಧ್ಯಕ್ಷರನ್ನು ನೇಮಿಸಿರುವುದು




ಖಂಡನೀಯ. ಇದರ ಹಿಂದೆ ಬೋಸರಾಜು ರಾಜಕೀಯ ಕುತಂತ್ರ ನಡೆಸಿದ್ದಾರೆ. ರಾಜ್ಯ ನಾಯಕರ ಕಿವಿಯೂದಿರುವ ಬೋಸರಾಜು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ನಾಯಕರಿಗೆ ಬೆಲೆಯಿಲ್ಲದಂತೆ ಮಾಡುತ್ತಿದ್ದಾರೆ, ದಿಢೀರನೆ ಜಿಲ್ಲಾಧ್ಯಕ್ಷ ಸ್ಥಾನ ಬದಲಾಯಿಸುವ ಅಗತ್ಯವಾದರೂ ಏನಿತ್ತು, ರಾಜಕೀಯ ದುರುದ್ದೇಶದಿಂದ ಬೋಸರಾಜು ಮೋಸದಾಟ ನಡೆಸಿದ್ದಾರೆ ಎನ್ನುವ ಆರೋಪಗಳು ಕಾಂಗ್ರೆಸ್ ಪಡಸಾಲೆಯಲ್ಲಿ ಹರಿದಾಡುತ್ತಿವೆ.

ಬೋಸರಾಜುವಿನ ರಾಜಕೀಯ ಪ್ರಭಾವ

ಬೋಸರಾಜುವಿನ ರಾಜಕೀಯ ಲೆಕ್ಕಾಚಾರ ನೋಡಿದರೆ ಎಂತವರಿಗೂ ತಲೆ ತಿರುಗುತ್ತದೆ. ಆಂಧ್ರದಿಂದ ವಲಸೆ ಬಂದ ಈತ ಜಿಲ್ಲೆಯ ಕಾಂಗ್ರೆಸ್‌ನಲ್ಲಿ ನೆಲೆ ಕಂಡುಕೊಂಡಿದ್ದಾರೆ. ದೊಡ್ಡ ಭೂಮಾಲಿಕನಾಗಿರುವ ಇವನಲ್ಲಿ ತನ್ನ ನಿಷ್ಠಾವಂತ ಬೆಂಬಲಿಗರಾದ ಆಂಧ್ರ ರೆಡ್ಡಿಗಳನ್ನು ಸಂತೃಪ್ತಗೊಳಿಸುವ ಹಿತಾಸಕ್ತಿ ಯಾವಾಗಲೂ ಕೆಲಸ ಮಾಡುತ್ತಿರುತ್ತದೆ. ಅದರಲ್ಲೂ ತುಂಗಭದ್ರ ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರ (ಕಾಡಾ) ಅಧಿಕಾರಿಗಳು ಯಾವಾಗಲೂ ಆಂಧ್ರ ರೆಡ್ಡಿಗಳ ಪರವಾಗಿ ಕೆಲಸ ಮಾಡುವಲ್ಲಿ ಬೋಸರಾಜುವಿನ ನೇರ ನಿರ್ದೇಶನವಿರುತ್ತದೆ. ಬೋಸರಾಜ ಹೇಳಿದರೆ ಕಾಡಾದ ಚೀಫ್ ಎಂಜಿನಿಯರ್ ಮಲ್ಲಿಕಾರ್ಜುನ ಗುಂಗೆ ಉಠ್‌ಬೈಟ್ ಮಾಡಲು ಸಿದ್ಧ ಎಂಬ ಮಾತುಗಳು ಜಿಲ್ಲೆಯಲ್ಲಿ ಯಥೇಚ್ಛವಾಗಿ ಕೇಳಿಬರುತ್ತವೆ. ಅಷ್ಟರಮಟ್ಟಿಗೆ ಜಿಲ್ಲೆಯ ಅಧಿಕಾರಿಗಳನ್ನು ಪಳಗಿಸುವಲ್ಲಿ ಈತ ಯಶಸ್ವಿಯಾಗಿದ್ದಾರೆ. ಆದರೆ ಮೊನ್ನೆಮೊನ್ನೆಯವರೆಗೂ ಕಾಡ ಅಧ್ಯಕ್ಷನಾಗಿದ್ದ ವಸಂತ್‌ಕುಮಾರ್, ಬೋಸರಾಜು ಪಾಲಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದ್ದರು. ಬೋಸರಾಜು ಮಾತುಗಳಿಗೆ ವಸಂತ್‌ಕುಮಾರ್ ಕ್ಯಾರೇ ಅನ್ನುತ್ತಿರಲಿಲ್ಲ, ಅಲ್ಲದೇ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಾಗಿದ್ದರಿಂದ ಹಲವು ವಿಷಯಗಳಲ್ಲಿ ಬೋಸರಾಜುವಿನ ರಾಜಕೀಯದಾಟಕ್ಕೆ ವಸಂತ್‌ಕುಮಾರ್ ತಡೆಯಾಗಿದ್ದರು.

ಕೆಪಿಸಿಸಿ ಕಾರ್ಯದರ್ಶಿಯೂ ಆಗಿರುವ ಬೋಸರಾಜು ಸಿಎಂ ಸಿದ್ದರಾಮಯ್ಯ, ಪರಮೇಶ್ವರ್ ಹೋದಲ್ಲೆಲ್ಲಾ ಇರುತ್ತಾರೆ. ಧರ್ಮ ಸಿಂಗ್ ಮುಖ್ಯಮಂತ್ರಿಯಾಗಿದ್ದಾಗ ಅವರ ರಾಜಕೀಯ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿರುವ ಅನುಭವ ಇದೆ. ಹೈದರಾಬಾದ್ ಕರ್ನಾಟಕದ ಯಾವುದೇ ವಿಷಯಗಳು ಬಂದರೂ ಈತನಿಗೆ ಒಂದಿಷ್ಟು ಮಹತ್ವ ಇದ್ದೇ ಇರುತ್ತದೆ. ಒಮ್ಮೆ ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರೂ ಆಗಿದ್ದರು. ಸಾಕಷ್ಟು ದುಡ್ಡು ಮತ್ತು ಆಸ್ತಿ ಮಾಡಿಕೊಂಡಿದ್ದಾರೆ. ಈ ಬಾರಿ ತನಗೆ ಸಚಿವ ಸ್ಥಾನ ಬೇಕು ಅಂತ ಹಠ ಹಿಡಿದಿದ್ದ ಈತ ಕೊನೆಕ್ಷಣದಲ್ಲಿ ಇದೇ ರಾಜಕೀಯ ಲೆಕ್ಕಾಚಾರಕ್ಕಾಗಿ ಹಿಂದೆ ಸರಿದಿದ್ದರು. ಆಂಧ್ರ ಕಾಂಗ್ರೆಸ್‌ನ ದೊಡ್ಡದೊಡ್ಡ ನಾಯಕರೊಂದಿಗೆ ಮತ್ತು ಎಐಸಿಸಿಯ ಆಂಧ್ರದ ಸೀನಿಯರ್ ಲೀಡರ್‌ಗಳೊಂದಿಗೆ ಒಡನಾಟ ಮತ್ತು ಉತ್ತಮ ಸಂಪರ್ಕವಿಟ್ಟುಕೊಂಡಿರುವ ಬೋಸರಾಜು ಪತ್ರಿಕೆ, ಟಿವಿಗಳಲ್ಲಿ ಸಿಎಂ, ಗೃಹ ಸಚಿವರ ಬಳಿಯಿದ್ದು ಫೋಜು ಕೊಡುವುದು ಖಯಾಲಿ. ವಸಂತ್‌ಕುಮಾರ್ ವಿರುದ್ಧ ಜಿಲ್ಲೆಯಲ್ಲಿ ಗುಂಪುಗಾರಿಕೆ ಕಟ್ಟುತ್ತಿರುವ ಬೋಸರಾಜು 'ವಸಂತ್ ಕುಮಾರ್ ಏನೂ ಕೆಲಸ ಮಾಡುತ್ತಿಲ್ಲ, ಹೀಗಾದರೆ ಕಾಂಗ್ರೆಸ್ ಮಕಾಡೆ ಮಲಗಬೇಕಾಗುತ್ತದೆ. ಹಾಗಾಗಿ ಜಿಲ್ಲಾಧ್ಯಕ್ಷರ ಬದಲಾವಣೆ ಆಗಲೇಬೇಕು' ಅಂತ ಗೃಹ ಸಚಿವ, ಕೆ.ಪಿ.ಸಿ.ಸಿ ಅಧ್ಯಕ್ಷ ಪರಮೇಶ್ವರ್ ಬಳಿ ದೂರು ನೀಡಿದ್ದರು.

ತನಗಂತೂ ಸಚಿವ ಸ್ಥಾನ ಕೈತಪ್ಪಿದೆ, ಹಾಗಾಗಿ ಈ ಬೇಡಿಕೆ ಈಡೇರಿಸಲೇಬೇಕೆಂದು ರಾಜಕೀಯ ನಡೆಸಿದ್ದ ಬೋಸರಾಜುಗೆ ಕೊನೆಗೂ ಗೆಲುವು ಸಿಕ್ಕಿದೆ. ತನ್ನ ಬೆಂಬಲಿಗನಾದ ದೇವದುರ್ಗದ ರಾಮಣ್ಣ ಇರಬಗೇರಾನನ್ನು ಜಿಲ್ಲಾ ಹಂಗಾಮಿ ಅಧ್ಯಕ್ಷ ಸ್ಥಾನಕ್ಕೆ ಕೂರಿಸುವಲ್ಲಿ ಸಫಲ ಆಗಿದ್ದಾರೆ. ಮುಂದೆ ಬರಲಿರುವ ವಿಧಾನಸಭಾ ಚುನಾವಣೆಯಲ್ಲಿ ತನಗೆ ಬೇಕಾದವರಿಗೆ ಟಿಕೆಟ್ ಕೊಡಿಸಲು ಇದು ಬೋಸರಾಜುವಿಗೆ ಅತಿ ಅಗತ್ಯವಿತ್ತು, ಒಂದು ವೇಳೆ ವಸಂತ್‌ಕುಮಾರ್ ಅಧ್ಯಕ್ಷರಾಗಿದ್ದಿದ್ದರೆ ಟಿಕೆಟ್ ವಿಷಯದಲ್ಲಿ ಅಂಗಲಾಚಬೇಕಾದ ಪರಿಸ್ಥಿತಿ ಬರುತ್ತದೆ ಎಂಬುದನ್ನು ಮುನಗಂಡೇ ಪ್ಲಾನ್ ಮಾಡಿ ತನ್ನ ಕೈಗೊಂಬೆಯಂತಹ ರಾಮಣ್ಣನನ್ನು ಕೂರಿಸಿಕೊಂಡಿದ್ದಾರೆ. ಬೋಸರಾಜು ಈ ಮುಂಚೆ ಇದೇ ರಾಮಣ್ಣ


ಬೋಸರಾಜು

ಇರಬಗೇರಾನನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷನನ್ನಾಗಿ ಮಾಡಿದ್ದರು.

ಹೆಸರು ಕೆಡಿಸಿಕೊಂಡಿರುವ ಬೋಸರಾಜು

ಈ ಬೆಳವಣಿಗೆ ಜಿಲ್ಲೆಯ ರಾಜಕಾರಣದಲ್ಲಿ ಕಾಂಗ್ರೆಸ್‌ಗೆ ಅಧಿಕ ನಷ್ಟ ತಂದೊಡ್ಡುವ ಮುನ್ಸೂಚನೆಗಳು ಗೋಚರಿಸುತ್ತಿವೆ. ದಲಿತ ಸಮುದಾಯದ ಹೆಚ್ಚು ಮತಗಳಿರುವ ಜಿಲ್ಲೆಗಳಲ್ಲಿ ರಾಯಚೂರು ಸಹ ಒಂದು. ದಲಿತ ಸಮುದಾಯದ ವಸಂತ್‌ಕುಮಾರ್‌ನನ್ನು ಕೆಳಗಿಳಿಸಿರುವುದು ಇಷ್ಟುದಿನ ನಾವು ದಲಿತಪರ ಎಂದು ಕೂಗುತ್ತಿದ್ದ ಕಾಂಗ್ರೆಸ್‌ನ ಹಣೆಪಟ್ಟಿ ಕಳಚಿದಂತಾಗಿದೆ. ಅಲ್ಲದೆ, ಈ ಹಿಂದೆ ಇದೇ ಬೋಸರಾಜು ದಲಿತರನ್ನು ಸುಡುತ್ತೇನೆ ಎಂಬ ಹೇಳಿಕೆ ಕೊಟ್ಟು ವಿವಾದ ಸೃಷ್ಟಿಸಿದ್ದರು. ದಲಿತ ಸಮುದಾಯದಿಂದ ತೀವ್ರ ಪ್ರತಿರೋಧ ಬರುತ್ತಿದ್ದಂತೆ ತಾನು ಹಾಗೆ ಹೇಳಿಯೇ ಇಲ್ಲ ಎಂದು ನುಣುಚಿಕೊಂಡಿದ್ದರು. ಬಾಲಸ್ವಾಮಿ ಕೊಡ್ಲಿ ಎಂಬ ಒಬ್ಬಾತನ ವಿರುದ್ಧ ಮಾತ್ರ ನಾನು ಮಾತನಾಡಿದ್ದು ಎಲ್ಲ ದಲಿತರ ಕುರಿತಾಗಿ ಅಲ್ಲ ಎಂದು ಸ್ಪಷ್ಟನೆ ನೀಡಿದ್ದರು.

ಜೊತೆಗೆ ಕರ್ನಾಟಕ ರಾಜ್ಯ ರೈತ ಸಂಘದ ಬಗ್ಗೆ ಅವಹೇಳನ ಮಾಡಿದ್ದರಿಂದ ರೊಚ್ಚಿಗೆದ್ದ ರೈತ ಸಂಘದ ಮುಖಂಡರು ಹಾಗೂ ನೂರಾರು ರೈತರು 'ಭಾವಚಿತ್ರಕ್ಕೆ ಉಗುಳುವ' ಚಳವಳಿ ಮಾಡುತ್ತೇವೆಂದು ಹೇಳಿಕೆ ಕೊಡುತ್ತಿದ್ದಂತೆ ಎದ್ದುಬಿದ್ದು ಬೋಸರಾಜು ರೈತ ಮುಖಂಡರ ಬಳಿ ಕ್ಷಮೆಯಾಚಿಸಿದ್ದರು. ಇನ್ನು ಜಿಲ್ಲೆಯಲ್ಲಿ ಅಧಿಕಾರಿಗಳ ವರ್ಗಾವಣೆಯೇನಿದ್ದರೂ ಬೋಸರಾಜು ಮೂಗಿನ ನೇರಕ್ಕೆ ನಡೆಯುತ್ತದೆ. ಈತನ ಪುತ್ರ ರವಿ ಬೋಸರಾಜನ ಕಪಿಮುಷ್ಟಿಯಲ್ಲಿ ಹಲವು ಅಧಿಕಾರಿಗಳಿದ್ದಾರೆ. ರವಿ ಬೋಸರಾಜು ಜಿಲ್ಲೆಗೆ ಬರುವ ಎಲ್ಲಾ ಅಧಿಕಾರಿಗಳ ಸ್ನೇಹ ಸಂಪಾದಿಸುವುದರಲ್ಲಿ ಎತ್ತಿದ ಕೈ.

ಅಲ್ಲದೇ ಎಐಸಿಸಿ ಉಪಾಧ್ಯಕ್ಷ ರಾಹುಲ್ ಗಾಂಧಿಯ ಜೊತೆಗೂ ಸಂಪರ್ಕ ಸಾಧಿಸುವಷ್ಟು ರವಿ ಬೋಸರಾಜು ಬೆಳೆದುನಿಂತಿದ್ದಾನೆ.

ಕಾಂಗ್ರೆಸ್ ಜಗಳ ಬಿಜೆಪಿಗೆ ಲಾಭ

ಇನ್ನು ಈ ಎಲ್ಲಾ ಜಗಳವನ್ನು ನೋಡುತ್ತಾ ಒಳಗೊಳಗೆ ಖುಷಿ ಪಡುತ್ತಿರುವವರಲ್ಲಿ ಬಿಜೆಪಿಗರೇ ಮೊದಲಿಗರು. ಅವರು ಜಗಳವಾಡಿದಷ್ಟು ತಮಗೆ ಲಾಭ ಎನ್ನುವ ಲೆಕ್ಕಾಚಾರದಲ್ಲಿ ಜಿಲ್ಲೆಯ ಬಿಜೆಪಿ ನಾಯಕರು ಮುಳುಗಿದ್ದಾರೆ. ಇದೆಲ್ಲದರ ಅಂದಾಜಿನಿಂದಲೇ ಕಳೆದ ತಿಂಗಳು ಇದೇ ಬಿಜೆಪಿಯು ತನ್ನ ಎಸ್ಸಿ ಮೋರ್ಚಾದಿಂದ ಲಿಂಗಸಗೂರಿನಲ್ಲಿ ಎಸ್ಸಿ ಸಮಾವೇಶ ನಡೆಸಿ ದಲಿತರೊಡನೆ ತಾವಿದ್ದೇವೆ ಎನ್ನುವ ನಾಟಕ ಮಾಡಿದ್ದರು. ಜೊತೆಗೆ ಬಿಜೆಪಿ ನಾಯಕ ಕೆ.ವಿರೂಪಾಕ್ಷಪ್ಪ, ಈಶ್ವರಪ್ಪನ ಸಂಗೊಳ್ಳಿ ರಾಯಣ್ಣ ಬ್ರಿಗೇಡ್‌ಅನ್ನು ಸ್ಥಾಪಿಸಲು ತುದಿಗಾಲಲ್ಲಿ ನಿಂತಿದ್ದು ಆ ಮೂಲಕ ಹಿಂದುಳಿದ ವರ್ಗದ ಒಂದಷ್ಟು ಮತಗಳನ್ನು ಬಾಚಿಕೊಳ್ಳುವ ಹುನ್ನಾರ ನಡೆಸಿದ್ದಾನೆ.

ಅದೇರೀತಿ ಜಿಲ್ಲೆಯಲ್ಲಿ ಇಬ್ಬರು ಶಾಸಕರನ್ನು ಹೊಂದಿರುವ ಜೆಡಿಎಸ್ ಕೂಡ ಸುಮ್ಮನೆ ಕುಳಿತಿಲ್ಲ. ಹೇಗಿದ್ದರೂ ಕುಮಾರಸ್ವಾಮಿ ಇನ್ನುಂದೆ ತಿಂಗಳಲ್ಲಿ 10 ದಿನ ಹುಬ್ಬಳ್ಳಿಯಲ್ಲಿರುವುದರಿಂದ ಕಾಂಗ್ರೆಸ್ ಒಳಜಗಳದ ಲಾಭ ಪಡೆಯಲು ಜೆಡಿಎಸ್ ಕೂಡಾ ಹಾತೊರೆಯುತ್ತಿದೆ. ಇಂಥಾ ರಾಜಕೀಯ ತಿರುವುಗಳು ಘಟಿಸುತ್ತಿರುವ ಸಂದರ್ಭದಲ್ಲಿ ಕಾಂಗ್ರೆಸ್ ಎಚ್ಚೆತ್ತುಕೊಳ್ಳದೆ ಆಂತರಿಕ ಕಾದಾಟದಲ್ಲೇ ಖುಷಿ ಕಾಣುವುದಾದರೆ ಮುಂದಿನ ಎಲೆಕ್ಷನ್‌ನಲ್ಲಿ ಭಾರೀ ಬೆಲೆ ತೆರಬೇಕಾಗುತ್ತದೆ.


ಇನ್ನು ಜಿಲ್ಲಾ ಉಸ್ತುವಾರಿ ಮಂತ್ರಿ ತನ್ವೀರ್ ಸೇಠ್‌ರಂತು ಇವಕ್ಕೂ ತನಗೂ ಸಂಬಂಧವಿಲ್ಲವೆನ್ನುವಂತೆ ಸುಮ್ಮನೆ ಕುಳಿತಿದ್ದಾರೆ. ಇವೆಲ್ಲ ಕಾಂಗ್ರೆಸ್ ಪಾಲಿಗೆ ಶುಭ ಸೂಚನೆಗಳಲ್ಲ.

■ ಮುತ್ತುರಾಜು

...ಬದೆ ರೋಗಗ್ರಸ್ತವಾಗಿವೆ. ಕ್ರೈಮ್ ರೇಟು ಮುಗಿಲು ...ಟ್ಟಿದೆ. ನಿಧಿಗಾಗಿ ಮುಗ್ಧ ಬಾಲಕಿಯರನ್ನು ಬಲಿಕೊಡುವ ...ಪ್ರಕರಣಗಳು ಸಾಮಾನ್ಯದಂತಾಗಿವೆ. ಈ ...ಲ್ಲಿರುವ ಹಲವಾರು ಕಾರ್ಖಾನೆಗಳಲ್ಲಿ ಎಲ್ಲಾ ಗುತ್ತಿಗೆ ...ನ್ನು ಹಿಟ್ನಾಳ ಕುಟುಂಬವೇ ಮಾಡುತ್ತದೆ. ಹೀಗಾಗಿ ...ರಾರು ಕೋಟಿ ಸಂಪತ್ತು ...ಗಿಸಿಕೊಂಡಿದೆ. ಇನ್ನು ಹಿಟ್ನಾಳ ...ಬದ ಜಾತಿ ರಾಜಕಾರಣ ಹೇಸಿಗೆ ...ತ್ತದೆ.


...ವರ ಕುಟುಂಬ ರಾಜಕಾರಣ, ... ಆಡಳಿತ ಕಂಡು ...ಹೋಗಿರುವ ಜನ 2018ರ ...ವಣೆಯಲ್ಲಿ ತಕ್ಕ ಪಾಠ ಕಲಿಸಲು ...ಗಿದ್ದಾರೆ. ಈಗಾಗಲೇ ಈ ...ಬದ ಪಾರಂಪರಿಕ ಎದುರಾಳಿ ... ಕರಡಿ ಬಿಜೆಪಿ ಟಿಕೆಟಿಗೆ ...ಯು ಶುರು ಮಾಡಿದ್ದಾನೆ. ...ವನೆಂಬ ಕಾರಣಕ್ಕೆ ಒಂದುವೇಳೆ ... ಟಿಕೆಟ್ ನಿರಾಕರಿಸಿದರೆ ತನ್ನ ಬದಲು ಮಗನಾದ ... ಸದಸ್ಯ ಗವಿಸಿದ್ದಪ್ಪ ಕರಡಿಗೆ ಟಿಕೆಟ್ ಕೊಡಿಸಲು ...ಯತ್ನಿಸುತ್ತಿದ್ದಾನೆ. ಇನ್ನು ಇತ್ತೀಚೆಗೆ ನಡೆದ ...ಎಂ.ಪಿ. ಚುನಾವಣೆಯಲ್ಲಿ ಸೋತ ಬಿಜೆಪಿಯ ...ವರೂ ಕೂಡಾ ಟಿಕೆಟಿನ ನಿರೀಕ್ಷೆಯಲ್ಲಿದ್ದಾರೆ.

ಆರ್ಥಿಕವಾಗಿ ಬಲಾಢ್ಯನೂ ಆದ ಈತ ಕ್ಷೇತ್ರದಲ್ಲಿ 25000ಕ್ಕಿಂತಲೂ ಅಧಿಕವಾಗಿರುವ ಲಿಂಗಾಯತ ರೆಡ್ಡಿ ಪಂಗಡಕ್ಕೆ ಸೇರಿದವ. ಹಾಗಾಗಿ ಬಿಜೆಪಿ ಟಿಕೆಟು ಯಾರಿಗೆ ಒಲಿಯುತ್ತೋ ಕಾದುನೋಡಬೇಕು.



ಅತ್ತ ಜೆಡಿಎಸ್ ಪಕ್ಷದಿಂದ ಕಾಂಗ್ರೆಸ್ ಮುಖಂಡ ಕೆ.ಎಮ್.ಸೈಯ್ಯದ್ ಸ್ಪರ್ಧಿಸುತ್ತಾರೆ ಎಂಬ ವದಂತಿಗಳಿವೆ. ಮೊದಲು ಜೆಡಿಎಸ್ ಸೇರಿ, 2013ರಲ್ಲಿ ಕೆಜೆಪಿಯಿಂದ ಸ್ಪರ್ಧಿಸಿ ಸೋತಿದ್ದ ಈತ 2014ರ ಲೋಕಸಭಾ ಚುನಾವಣೆಯಲ್ಲಷ್ಟೆ ಕಾಂಗ್ರೆಸ್ ಸೇರಿದ್ದ. ಕಾಂಗ್ರೆಸ್‌ನಿಂದ ಯಾವುದೇ ನಿಗಮ-ಮಂಡಳಿ ಅವಕಾಶ ಸಿಗದಿದ್ದರಿಂದ ಬಂಡಾಯವೆದ್ದಿರುವ ಸೈಯದ್ ಮತ್ತೆ ಜೆಡಿಎಸ್ ಸೇರುವ ಸುಳಿವು ನೀಡಿದ್ದಾನೆ. ಕೊಪ್ಪಳದಲ್ಲಿ ಮುಸ್ಲಿಮ್ ಮತಗಳೆ 30,000ಕ್ಕೂ ಹೆಚ್ಚಿರುವುದರಿಂದ ಜೆಡಿಎಸ್ ಸೈಯದ್‌ಗೆ ಮಣೆ ಹಾಕಿದರೆ ಅಚ್ಚರಿಯಿಲ್ಲ. ಒಟ್ಟಿನಲ್ಲಿ ಹಿಟ್ನಾಳ್ ಕುಟುಂಬಕ್ಕೆ ಮುಂದಿನ ಚುನಾವಣೆ ತಕ್ಕ ಪಾಠವಾಗುವುದು ಮಾತ್ರ ಶತಃಸಿದ್ಧ ಅಂತ ಜನ ಮಾತಾಡಿಕೊಳ್ಳುತ್ತಿದ್ದಾರೆ.

■ ಸ. ಶರಣಪ್ಪ ಪಾಟೀಲ ಕರಮುದಿ



ಕುಂದಾಪುರ

ಗಂಜಿ ಕೇಂದ್ರದತ್ತ ಕೂರ್ಗಿ ಹೆಗ್ಡೆ, ಹಾಲಾಡಿ ಶೆಟ್ಟಿ!!



ಕುಂದಾಪುರ ಬಿಜೆಪಿ ರಾಜಕೀಯ ಮಗ್ಗಲು ಬದಲಿಸುತ್ತಿದೆ. ಎಲ್ಲೂ ಸಲ್ಲದೆ ನಿರ್ಗತಿಕರಾಗಿದ್ದ ನಿರ್ಲಜ್ಜ ಪುಢಾರಿಗಳಿಗೆ ಬಿಜೆಪಿ ಗಂಜಿ ಕೇಂದ್ರವಾಗುತ್ತಿರುವ ಕಸಿವಿಸಿಯಿಂದ "ಸಂಘ" ನಿಷ್ಠರು ಚಡಪಡಿಸುತ್ತಿದ್ದಾರೆ. ಯಡ್ಡಿ-ಶೋಭಾ ಜೋಡಿಯ ಅಧಿಕಾರ ಲಾಲಸೆಯ ಲಫಡಾಕ್ಕೆ ಕುಂದಾಪುರ ಬಿಜೆಪಿ ವಲಸಿಗರ ಪಾಲಾಗುತ್ತಿದೆಯೆಂಬ ಆಕ್ರೋಶದ ಧ್ವನಿ ಮೊಳಗುತ್ತಿದೆ. ಸಂಘ ಪರಿವಾರದ ಸಿದ್ಧಾಂತ ಗೊತ್ತಿಲ್ಲದ ಐ.ಎಂ. ಜಯರಾಮಶೆಟ್ಟಿ, ಹಾಲಾಡಿ ಶ್ರೀನಿವಾಸ ಶೆಟ್ಟಿ, ಲಕ್ಷ್ಮೀನಾರಾಯಣ ಮತ್ತು ಮನೋರಮಾ ಮಧ್ವರಾಜ್‌ರಂಥವರ ಬುಟ್ಟಿಗೆ ಹಾಕಿಕೊಂಡು ಪಕ್ಷ ಧನಾಧಾರಿತವಾಗಿ ಕಟ್ಟಿದ್ದ ಜಿಲ್ಲಾ ಬಿಜೆಪಿ ಭೀಷ್ಮ ಎ.ಜಿ. ಕೊಡ್ಗಿ, ಸೋಮಶೇಖರ ಭಟ್ಟ, ಗುಜ್ಜಾಡಿ ಪ್ರಭಾಕರ ನಾಯಕ್‌ರಂಥವರ ಚೆಡ್ಡಿ ಬಳಗವೇ "ನುಸುಳುಕೋರರ" ಧಾಗುಂಡಿಗೆ ಬೆಚ್ಚಿ ಬಿದ್ದಿದೆ!

ಜನತಾದಳ, ಕಾಂಗ್ರೆಸ್ ಎನ್ನುತ್ತ ಒಂದು ದೀರ್ಘ ಪ್ರದಕ್ಷಿಣೆ ಹಾಕಿ ಸುಸ್ತಾಗಿ ನಿಂತಿರುವ ಮಾಜಿ ಮಂತ್ರಿ ಕೂರ್ಗಿ ಜಯಪ್ರಕಾಶ್ ಹೆಗ್ಡೆ ಹಾಗು ನೇರಾನೇರ ಕಲ್ಲಡ್ಕ ಭಟ್ಟನಿಗೇ ಕಲ್ಲು ಹೊಡೆದು ಬಿಜೆಪಿಯಿಂದ ಹೊರನಡೆದಿದ್ದ ಅತಂತ್ರ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಏಕಕಾಲದಲ್ಲಿ ಬಿಜೆಪಿ ಕದ ಜಪ್ಪುತ್ತಿರುವುದು ಅಧಿಕಾರ ರಾಜಕಾರಣಕ್ಕೆ ಅಡಿಕ್ಟ್ ಆಗಿರುವ ಅಸಡ್ಡಾಳ ಪುಢಾರಿಗಳ ನೈತಿಕ ಅಧಃಪತನದ ದುರಂತಕ್ಕೆ ಸಾಕ್ಷಿಯಂತಿದೆ! ಸಮಯಸಾಧಕತನವನ್ನೇ ಸಿದ್ಧಾಂತ ಮಾಡಿಕೊಂಡು ಎರಡು ದಶಕದಿಂದ ಅಧಿಕಾರ ಅನುಭವಿಸುತ್ತ ಬಂದಿರುವ ಹೆಗ್ಡೆ-ಶೆಟ್ಟಿಗಳಿಬ್ಬರಿಗೂ ಕುಂದಾಪುರವೇ "ಕರ್ಮ" ಭೂಮಿ. ಇಬ್ಬರೂ ಮುಸುಕಿನ ಗುದ್ದಾಟದ ರಕ್ತ ಸಂಬಂಧಿಗಳು. ಎತ್ತಿಂದೆತ್ತ ತಾಳೆ ಹಾಕಿ ನೋಡಿದರೂ ಇಬ್ಬರೂ ಸದ್ಯಕ್ಕಂತೂ ಸಮಾನ ದುಃಖಿಗಳು, ಪಾಪ!! ಮಾನ ಇಲ್ಲದಿದ್ದರೂ ಬೇಡ; ಒಂದು ಅಧಿಕಾರದ ಸ್ಥಾನ ಸಿಕ್ಕರೆ ಸಾಕೆಂದು ಬಿಜೆಪಿ ಸೇರಲು ದಿನಕ್ಕೊಂದು ನಮೂನೆಯ ನಾಚ್ ಮಾಡುತ್ತಿರುವ ಹೆಗ್ಡೆ-ಶೆಟ್ಟಿಯ ಗತಿಗೇಡಿ ದರಿದ್ರ ರಾಜಕಾರಣದ ಇತಿಹಾಸ-ಭೂಗೋಳ ಕುತೂಹಲಕರವಾಗಿದೆ.

"ಬಿಜೆಪಿ ಅಂದ್ರೆ ಅದೊಂದು ಕೋಮುವಾದಿಗಳ ಪಕ್ಷ ಮಾರಾಯ್ರೆ... ನಾನು ಅಂಥ ಪಕ್ಷ ಸೇರೋ ಛಾನ್ಸೇ ಇಲ್ಲ...ಹಾಗೆ ಸೇರೋದಿದ್ರೆ ಜೆ.ಎಚ್. ಪಟೇಲರ ಕಾಲದಲ್ಲಿ ಮಂತ್ರಿಯಾಗಿದ್ದ ನಾನು ಸಂಯುಕ್ತ ಜನತಾದಳದಲ್ಲೇ ಇರ್ರಿಲ್ಯಾಗಿತ್ತಾ ಮಾರಾಯ್ರೆ...." ಎನ್ನುತ್ತ ಧೀರೋಧಾತ್ತ ಸೆಕ್ಯುಲರ್‌ನಂಥ ಪೋಸು ಕೊಡುತ್ತ ಬಂದಿದ್ದ ಕೂರ್ಗಿ ಹೆಗ್ಡೆ ಈಗ ಅರ್ಜೆಂಟಾಗಿ ಎಮ್ಮೆಲ್ಲೆ ಆಗುವ ಗಡಿಬಿಡಿಗೆ ಬಿದ್ದಿದ್ದಾರೆ. ಜನತಾ ದಳದಲ್ಲಿದ್ದಾಗ ಅಮರನಾಥ ಶೆಟ್ಟಿಯಂಥ ಸಜ್ಜನ ನಾಯಕನನ್ನೇ ನುಂಗಿ ಬೆಳೆದ ಕೂರ್ಗಿ ಹೆಗ್ಡೆ ಅಂಥವೇ ಆಕ್ರಮಣಕಾರಿ ಆಟ ಕಾಂಗ್ರೆಸ್ಸಿನಲ್ಲೂ ಆಡಲು ಹವಣಿಸಿ ಒದೆಸಿಕೊಂಡು ಹೊರಬೀಳಬೇಕಾಗಿ ಬಂತು. ದಳ ಮತ್ತು ಕಾಂಗ್ರೆಸ್‌ನಲ್ಲಿದ್ದಾಗ ಕೂರ್ಗಿ ಹೆಗ್ಡೆಗೆ ಗಾಡ್‌ಫಾದರ್ ಆಗಿದ್ದವರು ಜಯಪಾಲ್ ರೆಡ್ಡಿ. ಈ ರೆಡ್ಡಿಗೆ ಕೂರ್ಗಿ ಹೆಗ್ಡೆ ವೈದ್ಯ ಸಹೋದರ ಅದ್ಯಾವುದೋ ಆಪರೇಷನ್ ಮಾಡಿದ್ದರಂತೆ. ವಿದೇಶದಲ್ಲಿರುವ ಹೆಗ್ಡೆ ಸಹೋದರ ರೆಡ್ಡಿ ಮೇಲೆ ಪ್ರಭಾವ ಬೀರಿ ಅಣ್ಣ ಮಂತ್ರಿ- ಸಂಸದ-ಶಾಸಕನಾಗಲು ನೆರವಾದರೆಂಬುದು ಹಳೇ ಕತೆ. ಕುಂದಾಪುರದ ಕೂರ್ಗಿಯಿಂದ ದಿಲ್ಲಿಯತನಕ ಹಲವು ಆಶ್ರಯಧಾತರನ್ನು ಹುಡುಕಿಕೊಂಡರು. ಚಾಲಾಕಿ ಹೆಗ್ಡೆ ಕಾಂಗ್ರೆಸ್‌ನಲ್ಲಿದ್ದಾಗ ಇದೇ ಬಲದಿಂದ ಕರಾವಳಿ ಕಾಂಗ್ರೆಸ್ ಅಧಿನಾಯಕ ಆಸ್ಕರ್ ಫರ್ನಾಂಡಿಸ್ ಮೇಲೆಯೇ ಸವಾರಿಗೆ ಹವಣಿಸಿದ್ದೇ ಆತನಿಗೆ ಮುಳುವಾಯ್ತು!

ದಳದಲ್ಲಿ ಆಡಿದಷ್ಟು ಸಲೀಸಾಗಿ ಮೇಲಾಟ ಕಾಂಗ್ರೆಸ್‌ನಲ್ಲಿ ಆಡಲು ಕೂರ್ಗಿ ಹೆಗ್ಡೆಗೆ ಸಾಧ್ಯವಾಗಲಿಲ್ಲ. ಆಸ್ಕರ್ ಈತನ ಮೇಲೊಂದು ಕಣ್ಣು ಸದಾ ಇಟ್ಟಿದ್ದರು. ಒಂದು ಬಾರಿ ಎಮ್ಮೆಲ್ಲೆ ಟಿಕೆಟ್, ಮೂರು ಸಲ ಎಂಪಿಗಿರಿ ಅಭ್ಯರ್ಥಿತನ ಕಾಂಗ್ರೆಸಲ್ಲಿ ಹೆಗ್ಡೆಗೆ ಕೊಡಲಾಗಿತ್ತು. ಒಂದು ಬಾರಿ ಮಾತ್ರ (ಉಪ ಚುನಾವಣೆ) ಎಂಪಿಯಾಗಲು ಆತನಿಂದ ಸಾಧ್ಯವಾಯ್ತಷ್ಟೇ. ಕಳೆದ ಲೋಕಸಭಾ ಚುನಾವಣೆಯಲ್ಲಿ ಸೋತ ಬಳಿಕ ಹೆಗ್ಡೆಗೆ ಕಾಂಗ್ರೆಸ್‌ನಲ್ಲಿ ಒಂಥರಾ ಉಸಿರುಗಟ್ಟಿದಂತಾಗಹತ್ತಿತ್ತು. ಅಧಿಕಾರಕ್ಕಾಗೇ ರಾಜಕಾರಣ ಮಾಡುವ ಹೆಗ್ಡೆಗೆ ಒಂದು ಪುಟಗೋಸಿ ಕಾರ್ಪೊರೇಷನ್ ಛೇರ್ಮನ್‌ಗಿರಿಯೂ ದಕ್ಕದಂತೆ ಆಸ್ಕರ್ ನೋಡಿಕೊಂಡರು. ಉಡುಪಿ ಜಿಲ್ಲಾ ಕಾಂಗ್ರೆಸ್‌ಗೆ ಮೊದಲ ಶತ್ರುವೇ ಈ ಆಸ್ಕರ್. ಆತ ಪಾರ್ಟಿಯಲ್ಲಿ ತನಗಿಂತ ಮೇಲೆ ಯಾರೂ ಹೋಗದಂತೆ ತಂತ್ರಗಾರಿಕೆ ಮಾಡುತ್ತಲೇ ಇರುವಾತ. ಆಸ್ಕರ್‌ನ ಇಂಥ ಹೊಟ್ಟೆಕಿಚ್ಚಿನ ಕಿತಾಪತಿಯಿಂದಾಗಿಯೇ ಇವತ್ತು ಉಡುಪಿ ಜಿಲ್ಲೆಯಾದ್ಯಂತ ಕಾಂಗ್ರೆಸ್ ನೆಲಕಚ್ಚಿ ಕುಂತಿದೆ.

ಕೂರ್ಗಿ ಹೆಗ್ಡೆಯ ಅಧಿಕಾರ ಮೋಹದ ಮಸಲತ್ತುಗಳೇನೇ ಇರಲಿ, ಆತ ಇಡೀ ಜಿಲ್ಲೆಯಲ್ಲಿ ಎದ್ದು ಕಾಣುವ ಸಂಸದೀಯ ಪಟು. ಇಡೀ ಜಿಲ್ಲೆಯ ನಾಡಿಮಿಡಿತ ಬಲ್ಲ ಜನಪರ ರಾಜಕಾರಣಿ ಎಂಬುದರಲ್ಲಿ ಎರಡು ಮಾತಿಲ್ಲ. ಬೇರುಮಟ್ಟದ ಜನಸಂಪರ್ಕ ಸಾಧಿಸುವ ಕಲೆ ಕರಗತಮಾಡಿಕೊಂಡಿರುವ ಹೆಗ್ಡೆ ಜಿಲ್ಲೆಯ ಬೇಕು-ಬೇಡಗಳ ಬಗ್ಗೆ ಚಿಂತನ ಮಂಥನ ನಡೆಸುವ ಸಾಮರ್ಥ್ಯವಿರುವಾತ. ಹಾಗೆ ನೋಡಿದರೆ ಆಸ್ಕರ್‌ಗಿಂತ ಹೆಗ್ಡೆಯೇ ಜನಸಾಮಾನ್ಯರಿಗೆ ಹತ್ತಿರ. ಇದು ಆಸ್ಕರ್‌ರನ್ನು ಆತಂಕಕ್ಕೀಡುಮಾಡಿತ್ತು. ಈತ ಪಾರ್ಟಿಯಲ್ಲಿ ಬೆಳೆದು ಒಂದಲ್ಲ ಒಂದು ದಿನ ತನ್ನನ್ನು ನುಂಗಿ ನೊಣೆಯುತ್ತಾನೆಂಬ ಕಾರಣಕ್ಕೇ ಆತ ಹೆಗ್ಡೆಯ ಕಾಲೆಳೆಯುತ್ತಲೇ ಸಾಗಿದ್ದರು. ಸಮಯ ಸಿಕ್ಕಾಗ ಸರಿಯಾಗಿ ಹಣಿಯುವ ಸ್ಕೆಚ್ ಹಾಕಿಕೊಂಡಿದ್ದರು.

ಇದು ತಂತ್ರಗಾರಿಕಾ ಪ್ರವೀಣ ಹೆಗ್ಡೆಗೆ ಅರ್ಥವಾಗಲು ಬಹಳ ಸಮಯವೇನೂ ಬೇಕಾಗಲಿಲ್ಲ. ಆತನೂ ಆಸ್ಕರ್‌ಗೆ ಪಾಠ ಕಲಿಸಲು ಶಸ್ತ್ರಸನ್ನದ್ಧನಾಗೇ ಇದ್ದರು. ಸ್ಥಳೀಯ ಸಂಸ್ಥೆಗಳಿಂದ ನಡೆದ ವಿಧಾನಪರಿಷತ್ ಚುನಾವಣೆಗೆ ಹೆಗ್ಡೆ ಟಿಕೆಟ್ ಕ್ಲೇಮು ಮಾಡಿದರು. ಆದರೆ ಅದಕ್ಕೂ ಆಸ್ಕರ್ ಸಿದ್ಧರಿರಲಿಲ್ಲ. ಆತನ ಆಯ್ಕೆ ಪುರಾತನ ಮಿತ್ರ ಮಿಯ್ಯಾರು ಪಟೇಲರ ಪುತ್ರ ಕುಂದಾಪುರದ ಪ್ರತಾಪ್‌ಚಂದ್ರ ಶೆಟ್ಟಿಯಾಗಿತ್ತು. ಈ ಶೆಟ್ಟಿಯ ತಂದೆ ಆಸ್ಕರ್‌ರ ಎಂಪಿಗಿರಿಯ ಆರಂಭದ ಎರಡೆರಡು ಎಲೆಕ್ಷನ್‌ನಲ್ಲಿ ದಂಡಿಯಾಗಿ ದುಡ್ಡು-ಬೋಟಾ ಓಟು ಕೊಡಿಸಿದ್ದ ಧಣಿ. ಈ ಋಣಭಾರದಿಂದಾಗಿಯೇ ಇವತ್ತಿಗೂ ಆತ ಪ್ರತಾಪ್ ಎಂಬ ಮುಖೇಡಿ ಮುಖಂಡನ ಪೊರೆಯುತ್ತಲೇ ಬಂದಿದ್ದಾರೆ.


ಪ್ರತಾಪ್-ಕೂರ್ಗಿ ಹೆಗ್ಡೆ ರಕ್ತ ಬಂಧುಗಳು; ಪ್ರಚ್ಛನ್ನ ಶತ್ರುಗಳು. ಎಮ್ಮೆಲ್ಸಿ ಟಿಕೆಟ್ ನಿದ್ರಾಜೀವಿ ಪ್ರತಾಪ್ ಬದಲಿಗೆ ತನಗೇ ಕೊಡಿ; ಆತ ಎಂಪಿಗಿರಿಗೆ ತಾನು ಸ್ಪರ್ಧಿಸಿದ್ದಾಗ ಬೆಂಬಲಿಸಿರಲಿಲ್ಲ ಎಂಬುದು ಹೆಗ್ಡೆ ವಾದವಾಗಿತ್ತು. ಇದನ್ನು ಹೆಗ್ಡೆ ಹಣಿಯಲು ಆಸ್ಕರ್ ತುಂಬ ಯೋಜನಾಬದ್ಧವಾಗಿ ಬಳಸಿಕೊಂಡರು. ಪ್ರತಾಪ್‌ರನ್ನು ಮುಂದಿಟ್ಟುಕೊಂಡು ಗೆರಿಲ್ಲಾ ಯುದ್ಧ ನಡೆಸಿ ಹೆಗ್ಡೆ ತಾನಾಗೇ ಕಾಂಗ್ರೆಸ್ ಬಿಟ್ಟುಹೋಗುವಂತೆ ಮಾಡಿದರು. ಎಮ್ಮೆಲ್ಸಿ ಟಿಕೆಟ್ ಸಿಗದ ಸಿಟ್ಟಿನಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿದ್ದ ಹೆಗ್ಡೆಗೆ ಆಸ್ಕರ್ ಕರೆದು ಗೇಟ್‌ಪಾಸ್ ಕೈಗಿಟ್ಟು ಕಳಿಸಿದರು. ದೊಡ್ಡ ಅಂತರದಲ್ಲಿ ಸೋತ ಹೆಗ್ಡೆ ಜಿಪಂ-ತಾಪಂ ಎಲೆಕ್ಷನ್‌ನಲ್ಲಿ ಕುಂದಾಪುರದ ಉಡುಪಿ ಭಾಗದ ತನ್ನ ಪ್ರಭಾವ ವಲಯದಲ್ಲಿ ಕಾಂಗ್ರೆಸ್ ಮಣ್ಣುಪಾಲು ಮಾಡಿ ಸೇಡು ತೀರಿಸಿಕೊಂಡರು.


ಕೂರ್ಗಿ ಹೆಗ್ಡೆಯಲ್ಲಿ ಕಾಂಗ್ರೆಸ್ ಬಿಟ್ಟನಂತರ ಒಂದು ಲೆಕ್ಕಾಚಾರವಿತ್ತು. ಈಗಲ್ಲದಿದ್ದರೂ ಇನ್ನಾರು ತಿಂಗಳಲ್ಲಾದರೂ ಆಸ್ಕರ್ ಬಳಗ ತನ್ನನ್ನು ಕಾಂಗ್ರೆಸ್‌ಗೆ ಬರ ಮಾಡಿಕೊಳ್ಳುತ್ತದೆಂದು ಆತ ಭಾವಿಸಿದ್ದರು. ಹೆಗ್ಡೆಗೆ ಬಿಜೆಪಿ ಸೇರುವ ಮನಸ್ಸು ಇರಲಿಲ್ಲ. ತನ್ನನ್ನು ಬೆಂಬಲಿಸುತ್ತ ಬಂದಿರುವ ಸಾಬರ ಕಾರಣಕ್ಕೆ ಆತನಿಗೆ ಬಿಜೆಪಿ ಸಹ್ಯವಾಗಿರಲಿಲ್ಲ. ಜೆಡಿಎಸ್ ಕರಾವಳಿಯಲ್ಲಿ ಚಿಗುರಿಸುತ್ತೇನೆಂಬ ಧೈರ್ಯ ಈ ಇಳಿವಯಸ್ಸಿನಲ್ಲಿ ಹೆಗ್ಡೆಗೆ ಇಲ್ಲದಾಗಿತ್ತು. ಹಿಂದೆರಡು ಬಾರಿ ಬ್ರಹ್ಮಾವರ ಕ್ಷೇತ್ರದಲ್ಲಿ ಪಕ್ಷೇತರನಾಗಿ ಗೆದ್ದಂತೆ ಉಡುಪಿ ಅಥವಾ ಬೈಂದೂರಲ್ಲಿ ಈಗ ಗೆಲ್ಲುವ ತಾಕತ್ತೂ ಆತನಲ್ಲಿರಲಿಲ್ಲ. ಹೀಗಾಗಿ ಕಾಂಗ್ರೆಸ್‌ನತ್ತ ಆತ ಆಸೆ ಕಣ್ಣು ತೇಲಿಸುತ್ತಲೇ ಇದ್ದರು. ಆದರೆ ಆಸ್ಕರ್ ಅಡ್ಡಗಾಲು ಹಾಕಿ ಕುಂತಿದ್ದರು. ಮಾಜಿ ಕೇಂದ್ರ ಮಂತ್ರಿ ಜಯರಾಮ್ ರಮೇಶ್‌ರಂಥವರು ಎಐಸಿಸಿಯಲ್ಲಿ ಅದೆಷ್ಟೇ ಕೂರ್ಗಿ ಹೆಗಡೆ ಪರ ವಾದ ಮಂಡಿಸಿದರೂ ಆಸ್ಕರ್ ಮನಸ್ಸು ಬದಲಿಸಲೇ ಇಲ್ಲ.

ಅಸೆಂಬ್ಲಿ ಎಲೆಕ್ಷನ್ ಶರವೇಗದಲ್ಲಿ ಬರುತ್ತಿರುವುದು ಕೂರ್ಗಿ ಹೆಗ್ಡೆಯನ್ನು ಚಿಂತೆಗೀಡು ಮಾಡಿತ್ತು. ಕಾಂಗ್ರೆಸ್ ಕರೆಯುವ ಸೂಚನೆ ಕಾಣದಾಗಿತ್ತು. ಆಗ ಹೆಗ್ಡೆಗೆ ಬಿಜೆಪಿಯೊಂದೇ ಆಶಾಕಿರಣವಾಗಿ ಸೆಳೆದಿದೆ! ನಾಯಿ ಹಸಿದಿತ್ತು; ಅನ್ನ ಹಳಸಿತ್ತು ಅಂತಾರಲ್ಲ, ಹಂಗಾಯ್ತು ಬಿಜೆಪಿ ಮತ್ತು ಹೆಗ್ಡೆ ಪಾಡು. ಬಿಜೆಪಿ ಸೇರುವ ನಿರ್ಧಾರಕ್ಕೀಗ ಹೆಗ್ಡೆ ಬಂದಿದ್ದಾರೆ. ನನ್ನ ಬೆಂಬಲಿಗರು-ಕ್ಷೇತ್ರದ ಜನ ಬಿಜೆಪಿಗೆ ಸೇರಲು ಒತ್ತಾಯಿಸುತ್ತಿದ್ದಾರೆಂದು ಆತ ಭೋಂಗು ಬಿಡುತ್ತಿದ್ದಾರೆ. ಬಿಜೆಪಿ ಸೇರುವ ಆಸೆ ಹೆಗ್ಡೆಯದೇ ಹೊರತು ಬೆಂಬಲಿಗರದಲ್ಲ. ಬೆಂಬಲಿಗರನ್ನು ಬಿಜೆಪಿಗೆ ಹೋಗೋಣವೆಂದು ಮನ ಒಲಿಸಿದ್ದೇ ಹೆಗ್ಡೆ. ಗೌರವಯುತವಾಗಿ ನಡೆಸಿಕೊಂಡರೆ ಬಿಜೆಪಿಗೆ ಸೇರ ರೆಡಿ ಎಂದು ಹೆಗ್ಡೆ ಹೇಳುತ್ತಿದ್ದಾರೆ. 'ಗೌರವ' ಎಂದ ಏನು ಗೊತ್ತಾ? ಬೈಂದೂರು ಕ್ಷೇತ್ರದ ಬಿಜೆಪಿ ಟಿ ಮತ್ತು ಚುನಾವಣಾ ಖರ್ಚು-ವೆಚ್ಚ!

ಈ ಚೌಕಾಸಿ ಮಾತುಕತೆ ಈಗ ಹೆಗ್ಡೆ ಬಿಜೆಪಿ ಭೂಪರ ಜತೆ ನಡೆಸಿದ್ದಾರೆ. ಅಸೆಂಬ್ಲಿ-ಪಾರ್ಲಿಮೆಂಟ ಡಿಬೆಟ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಮರ್ಥವಾದ ಮಂಡಿಸುತ್ತಿದ್ದ ಹೆಗ್ಡೆಗೆ ಬಿಜೆಪಿಯಲ್ಲೂ ಆಪ್ತರಿದ್ದಾರೆ. ಕಳೆದ ಬಾರಿ ಉಡುಪಿ-ಚಿಕ್ಕಮಗಳೂ ಕ್ಷೇತ್ರದಲ್ಲಿ ಹೆಗ್ಡೆಯನ್ನು ಮಣಿಸಿದ್ದ ಯಡ್ಡಿ 'ಆತ್ಮ' ಶೋಭಕ್ಕನೇ ಆತನ ಬಿಜೆಪಿಗೆ ತರಲು ಕಟಿಪಿಟಿ ನಡೆಸಿದ್ದಾರೆಂದರೆ ಹೆಗ್ಡೆ ತೂಕ ಅರ್ಥವಾಗುತ್ತದೆ. ರವಿ, ಆರ್. ಅಶೋಕ್, ಚೆಡ್ಡಿ ಸರದಾರ ಕಲ್ಲಡ್ಕ, ಉಡುಪಿಯ ಸಂಘಿಗಳ ಸರದಾರರೂ ಹೆಗ್ಡೆಗೆ ಅನುಕೂಲಕರವಾಗೇ ಮಾತುಕತೆ ನಡೆಸಿದ್ದಾರೆ. ಮುಖ್ಯಮಂತ್ರಿ ಕನಸು ಕಾಣುತ್ತಿರುವ ಯಡ್ಡಿಗೆ ಕೂ ಹೆಗ್ಡೆಯಂಥ ಗೆಲ್ಲುವ ಕುದುರೆಗಳು ಬೇಕಾಗಿವೆ. ಕ ಹೆಗ್ಡೆ ಟಿಕೆಟ್ ಮಾತ್ರ ಕೊಟ್ಟರೆ ಸಾಲದು, ಖರ್ಚಿಗ ಕಾಸೂ ಬೇಕೆಂದು ವರಾತ ಹಚ್ಚಿದ್ದಾರೆ. ಇದೇ ಯ ಶೋಭಕ್ಕನಿಗೆ ತಲೆಬಿಸಿ ಮಾಡಿದೆ. ಹೆಗ್ಡೆ ಹೇಳಿದಷ್ಟು










ಕಾಸು ಕೊಡಲು ಅವರ್‍ಯಾಕೋ ಒಪ್ಪುತ್ತಿಲ್ಲ. ಇದು ಹೆಚ್ಚು-ಕಮ್ಮಿ ಚೌಕಾಸಿಯಲ್ಲಿ ಮುಗಿದು ಹೆಗ್ಡೆ ಬಿಜ ಪಾಲಾಗೋದಂತೂ ಖಾತ್ರಿ!

ಶಾಸಕತ್ವ ಅಥವಾ ಸಂಸದಗಿರಿ ಇಲ್ಲದೇ ಬದುಕುವುದೇ ಸಾಧ್ಯವಿಲ್ಲ ಎಂಬ ನಂಬಿಕೆ-ತತ್ವಾದ ಕೂರ್ಗಿ ಹೆಗ್ಡೆ ಇಷ್ಟು ವರ್ಷ ಜತನದಿಂದ ಕಟ್ಟಿಕೊಂಡಿದ್ದ ಧನಾತ್ಮಕ ಇಮೇಜ್ ಬಿಜೆಪಿ ಸೇರ ಮೂಲಕ ಅರಬ್ಬೀಸಮುದ್ರದ ಪಾಲಾಗುತ್ತಿದೆಂಬುದ ಗೊತ್ತಿಲ್ಲದ ಸಂಗತಿಯಲ್ಲ. ಆದರೂ ಆತ ಚೆಡ್ಡಿ ಹೊಲಿಸಲು ಆರ್‌ಎಸ್‌ಎಸ್ ದರ್ಜಿಗಳಿಗೆ ಅಳತೆ ಕೊಟ್ಟಾಗಿದೆ. ಈಗವರಿಗೆ ಹೊಸ ತಲೆ ನೋವೊಂ ಶುರುವಾಗಿದೆ. ಉಡುಪಿಯ ಐದು ಅಸೆಂಬ್ಲಿ ಕ್ಷೇತ್ರ ಪೈಕಿ ಮೂರರಲ್ಲಿ ಬಂಟ ಸಮುದಾಯದವರು ಟಿಕೆಟ್‌ಗೆ ಲಾಬಿ ಮಾಡುತ್ತಿದ್ದಾರೆ. ಬೈಂದೂರು ಹೆ ಕೇಳುತ್ತಿದ್ದರೆ, ಕಾಪು ಸೀಟನ್ನು ಹಣವಂತ ವಿದೇಶಿ ಉದ್ಯಮಿ ಗುರ್ಮೆ ಸುರೇಶ್ ಶೆಟ್ಟಿ ಕಳೆದೊಂದು ದಶಕದಿಂದ ಕೇಳುತ್ತಿದ್ದಾರೆ. ಕುಂದಾಪುರ ಅಭ್ಯರ್ಥಿ ಹಾಲಾಡಿ ಶ್ರೀನಿವಾಸ ಶೆಟ್ಟಿ ಜೊಲ್ಲು ಸುರಿಸುತ್ತಿದ್ದಾ ಎಷ್ಟು ಮಂದಿ ಬಂಟರಿಗೆ ಬಿಜೆಪಿ ಅವಕಾಶ ಕೊಡುತ್ತದೆ? ಈ ಗಡಿಬಿಡಿಯಲ್ಲಿ ತನಗೆ ಬಿಜೆಪಿ ಕೈಕೊಟ್ಟರೆ ಗತಿಯೇನೆಂಬ ಚಿಂತೆ ಕೂರ್ಗಿ ಹೆಗ್ಡೆಯ ನಿದ್ದೆಯನ್ನು ಕೆಡಿಸುತ್ತಿರುವುದು ಮೋಜಾಗಿದೆ.

ಇದು ಕೂರ್ಗಿ ಹೆಗ್ಡೆ ಹಾಲತ್ ಆದರೆ, ಕುಂದಾಪುರದ 'ಪರಿಹಾರ ನಿಧಿ' ಪರಾಕ್ರಮಿ ಹಾ ಶ್ರೀನಿವಾಸ ಶೆಟ್ಟಿಯ ಗೋಳು ಮತ್ತೂ







ಾರಿಯಾಗಿದೆ. ಹಾಲಾಡಿ ಶೆಟ್ಟಿ ಆರ್‌ಎಸ್‌ಎಸ್ ಕಲ್ಲಡ್ಕ ಭಟ್ಟ ತನಗೆ ಜಗದೀಶ್ ಶೆಟ್ಟರ್ ಸಚಿವ ಸೇರದಂತೆ ಹಿಕಮತ್ತು ಮಾಡಿದರೆಂಬ ನಿಂದ ಬಿಜೆಪಿಗೆ ಬೈ ಹೇಳಿಹೋಗಿದ್ದರು. ನಾಗಿ ಸ್ಪರ್ಧಿಸಿ ಬಿಜೆಪಿ ಸೋಲಿಸಿ ಕಲ್ಲಡ್ಕ ಭಟ್ 'ಬಲ' ತೋರಿಸಿದ್ದರು. ಆದರೆ ಈಗ ಆ ಹಾಲಾಡಿಗೆ ಇಲ್ಲ. ಮತ್ತೆ ಎಲೆಕ್ಷನ್‌ಗೆ ರೆನೆಂದು ಬಡಬಡಿಸುತ್ತಿದ್ದ ಹಾಲಾಡಿ ಶೆಟ್ಟಿಗೆ ರ ಬಿಡುವ ಮನಸ್ಸೇ ಇಲ್ಲ. ಹಾಗಂತ ಮುಂಬ ಚುನಾವಣೆಯಲ್ಲಿ ಪಕ್ಷೇತರನಾಗಿ ಸ್ಪರ್ಧಿಸಿದರೆ ಯೊಳಗಿನ ತನ್ನ ಬೆಂಬಲಿಗರೇ ತಿರುಗಿಬಿದ್ದು ಸುತ್ತಾರೆಂಬ ಭಯಕ್ಕೆ ಆತ ಬಿದ್ದಿದ್ದಾರೆ.

ಸರಿಗಷ್ಟೇ ಹಾಲಾಡಿ ಪಕ್ಷೇತರ ಶಾಸಕ. ಆದರೆ ಬೇರು-ಬಿಳಲುಗಳೆಲ್ಲಾ ಇರುವುದು ಯಲ್ಲೇ. ಹೊರಗಿದ್ದೇ ಬಿಜೆಪಿಯ ಒಳವ್ಯವಹಾರ ತ್ರಿಸುತ್ತ ಬಂದ ಹಾಲಾಡಿ ಜಿಪಂ-ತಾಪಂ ನಲ್ಲಿ ಸಂಘಿಗಳು- ಅಸಲಿ ಬಿಜೆಪಿಗರು ದ ಅಭ್ಯರ್ಥಿಪಟ್ಟಿಗೆ ಬದಲಾಗಿ ತನ್ನದೇ ಲಕರನ್ನು ಕಣಕ್ಕೆ ಇಳಿಸಿದ್ದರು. ಮಜಾ ಎಂದರೆ ಯೆಂಬ ರಾಷ್ಟ್ರೀಯ ಪಕ್ಷ ಕುಂದಾಪುರದಲ್ಲಿ ಡಿ ಅಡಿಯಾಳಾಗಿತ್ತು. ಹಾಲಾಡಿ ಡೇಟುಗಳಿಗೇ ಬಿಜೆಪಿಯ ಬಿ-ಫಾರ್ಮ್ ಾಗಿತ್ತು. ಕಮಲದ ಚಿಹ್ನೆಯಲ್ಲಿ ಗೆದ್ದವರೆಲ್ಲರೂ ಡಿ ಹಿಂಬಾಲಕರು!! ಇಷ್ಟೇ ಆಗಿದ್ದರೆ ಮೂಲ ಗರು ಸುಮ್ಮನಿರುತ್ತಿದ್ದರೋ ಏನೋ? ಆದರೆ ಡಿ ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಪಕ್ಷದ ತ ಅಭ್ಯರ್ಥಿಯಾಗಿದ್ದ ಕಿಶೋರ್ ಕುಮಾರ್, ವಸಂತ್, ಮೇರ್ಡಿ ಸತೀಶ್ ಹೆಗ್ಡೆ, ಹಾಲಾಡಿ ೇತ್ತಮ ಹೆಗಡೆ, ಕಾಗೇರಿ, ರಾಜೇಶ್, ಾದವರ ಹಣಿಯಲು ಒಳಗೊಳಗೇ ಕರಾಮತ್ತು ಮಾಡತೊಡಗಿದರು. ಪಕ್ಷದ ಹಿರಿಯರು ತನಗೇ ಅಂಗಲಾಚುವ 'ಸ್ಥಿತಿ' ನಿರ್ಮಾಣ ಮಾಡಿಕೊಂಡಿದ್ದರು. ಯಡ್ಡಿಯ ಅಧಿನಾಯಕಿ ಉಡುಪಿ ಸಂಸದೆ ಶೋಭಕ್ಕನನ್ನು ಒಲಿಸಿಕೊಂಡು ಕುಂದಾಪುರದ ಬಿಜೆಪಿಯ ಮೇಲೆ ಹಿಡಿತ ಸಾಧಿಸಿಕೊಂಡರು.

ಇದು ಕುಂದಾಪುರ ಬಿಜೆಪಿಯಲ್ಲಿ ಬಂಡಾಯ ಎಬ್ಬಿಸಿಬಿಟ್ಟಿತು. ಬಿಜೆಪಿಯನ್ನು ದುರ್ಬಲಗೊಳಿಸಿ, ಹೊರಗಿನಿಂದ ಆಳ್ವಿಕೆ ನಡೆಸುವ ಹಾಲಾಡಿಯ ಕುತಂತ್ರಗಳ ವಿರುದ್ಧ ಕುಂದಾಪುರ ನಗರ-ಕರಾವಳಿ ಭಾಗದಲ್ಲಿ ಆಕ್ರೋಶ ಮಡುಗಟ್ಟಿತು. ಕುಂದಾಪುರ ತಾಲ್ಲೂಕಿನ ಹಿಂದಿನ ಅಧ್ಯಕ್ಷ ಕಿಶೋರ್ ಕುಮಾರ್ ತನ್ನ ವಿರುದ್ಧ ಬಿಜೆಪಿ ಅಭ್ಯರ್ಥಿ ಆಗಿದ್ದಾನೆಂಬ ಒಂದೇ ಕಾರಣಕ್ಕೆ ಆತನಿಗೆ ಪಾರ್ಟಿಯಲ್ಲಿ ಯಾವ ಸ್ಥಾನವೂ ಸಿಗದಂತೆ ಮಾಡಿದ ಹಾಲಾಡಿ ಶೆಟ್ಟಿ ತನ್ನ ಚೇಲಾ ಕಡೂರು ಸುರೇಶ್ ಶೆಟ್ಟಿಯನ್ನು ಕ್ಷೇತ್ರಾಧ್ಯಕ್ಷನಾಗಿಸಿಕೊಂಡುಬಿಟ್ಟ! ಇದು ಬಿಜೆಪಿಯಲ್ಲಿ ಅಲ್ಲೋಲಕಲ್ಲೋಲವನ್ನೇ ಮಾಡಿತು. ಪಕ್ಷ ನಶಿಸುವಂತೆ ಮಾಡುವ, ಯಾವ ಕಾರ್ಯಕರ್ತರೂ ಬೆಳೆಯದಂತೆ ಮಾಡುವ ಹಾಲಾಡಿ ಶೆಟ್ಟಿಯ ಶಾಸಕತ್ವದ ಅಧಿಕಾರದ ವಿರುದ್ಧ ಇಡೀ ತಾಲ್ಲೂಕು ಬಿಜೆಪಿ ಮುರುಕೊಂಡು ಬಿದ್ದಿತು. ಮೂಡಣ ಭಾಗದಲ್ಲಿ ಹಾಲಾಡಿ ವಿರುದ್ಧ ಬಿಜೆಪಿ ಕಾರ್ಯಕರ್ತರು ತಿರುಗಿಬಿದ್ದರು. ಒಂದು ಕಾಲದಲ್ಲಿ ಹಾಲಾಡಿಯ ಕಟ್ಟಾ ಬೆಂಬಲಿಗರಾಗಿದ್ದವರೆ ಈ ಹಾಲಾಡಿ ಹಠಾವ್ರೋ ಅಭಿಯಾನದ ಮುಂದಿದ್ದಾರೆ.

ಮೂರು ಬಾರಿ ಶಾಸಕನಾಗಿದ್ದ ಕಾಂಗ್ರೆಸ್‌ನ ಪ್ರತಾಪ ಚಂದ್ರಶೆಟ್ಟಿ ಅವಸಾನದ ದಿನಗಳಲ್ಲಿ ತಲುಪಿದ್ದ ಸ್ಥಿತಿಗತಿಗೆ ಈಗ ಹಾಲಾಡಿ ಮುಟ್ಟಿದ್ದಾರೆ. ಪಾರ್ಟಿ ಮೇಲೆ ಪಕ್ಷೇತರ ಶಾಸಕ ಸವಾರಿ ಮಾಡುವುದರ ವಿರುದ್ಧ ನಿಷ್ಠಾವಂತರು 'ಸಂಘಟನೆಗಾಗಿ ಸಮಾಲೋಚನೆ' ಎಂಬ ಅಭಿಯಾನ ನಡೆಸುತ್ತಿದ್ದಾರೆ. ಇದು ಪಕ್ಕಾ ಹಾಲಾಡಿ ವಿರುದ್ಧದ ಹೋರಾಟ. ಈ ವಿರೋಧಿ ಸಂಘಟನೆ ದಿನೇದಿನೇ ಬಲಗೊಳ್ಳುತ್ತಿದೆ. ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಒಂಚೂರೂ ಚಿಂತಿಸದೆ ಸಮಸ್ಯೆ ಹೊತ್ತು ತರುವವರ ಕೈಗೆ ಒಂದಿಷ್ಟು ಕಾಸು ಕೊಟ್ಟು ಪೂಸಿ ಹೊಡೆದು ಕಳಿಸುವ ಗುಣಧರ್ಮದ ಹಾಲಾಡಿ ಅಸೆಂಬ್ಲಿ ಅಧಿವೇಶನಕ್ಕೂ ಚಕ್ಕರ್ ಹೊಡೆಯುತ್ತಾ ತನ್ನ ರಿಯಲ್ ಎಸ್ಟೇಟ್ ದಂಧೆಯಲ್ಲಿ ನಿರತನಾಗಿರುತ್ತಾನೆಂಬುದು ಕ್ಷೇತ್ರದ ಜನರಿಗೆ ಪಕ್ಕಾ ಆಗಿಹೋಗಿದೆ.

ಕ್ಷೇತ್ರದ ಕಾಮಗಾರಿಗಳೆಲ್ಲ ಕಳಪೆಯಾಗಿದೆ. ಇದಕ್ಕೆ ಶಾಸಕ ಹಾಲಾಡಿಯೇ ಕಾರಣ. ಹಾಗಂತ ಈ ಶಾಸಕ ಸಾಹೇಬ ಕಳ್ಳ ಕಂಟ್ರಾಕ್ಟರ್‌ಗಳ ಬಿಲ್ ಬಟಾವಡೆಗೆ ಶುದ್ಧಿಯಿಂದ ಶ್ರಮಿಸುತ್ತ ಬಂದಿದ್ದಾರೆ. ಹಾಲಾಡಿ ಸರ್ಕಾರಿ ಕಾಮಗಾರಿಯ ಕಳಪೆ ಕಂಟ್ರಾಕ್ಟರ್‌ಗಳಿಂದ ಲಕ್ಷಗಟ್ಟಲೆ ಸಾಲ-ಪರ್ಸೆಂಟೇಜ್ ಎರಡೂ ಪಡೆಯುತ್ತ ಅವರನ್ನು ಹಿಡಿತದಲ್ಲಿಟ್ಟುಕೊಂಡಿದ್ದಾನೆ.

ತನ್ನ ವಿರೋಧಿಗಳಿಗೆ ಫೋನಾಯಿಸಿ ಬೆದರಿಸುವ ಹಾಲಾಡಿ ಸಾಹೇಬರು "ನಂಗೆ ಹೆಂಡ್ತಿ ಮಕ್ಳು ಯಾರೂ ಇಲ್ಲ ಗೊತ್ತೈತ್ತಲ್ಲ...?!" ಎಂದು ಹೇಳುವುದು ಭೀಭತ್ಸವಾಗಿದೆ. ಲಕ್ಷಾಂತರ ರೂ.ಗಳ ಚಿಟ್ ಫಂಡ್ 'ದಂಧೆ'ಯ ಕಿಂಗ್‌ಪಿನ್ ಈ ಹಾಲಾಡಿ ಸಾಹೇಬ. ಭರ್ಜರಿ ಚಿಟ್‌ಫಂಡ್‌ಗಳಲ್ಲಿ ತಾನೂ ಸೇರಿಕೊಳ್ಳುವ ಹಾಲಾಡಿ ತನ್ನ 'ಕಂತು' ಬೇಗನೇ ಸಿಗುವಂತೆ ನೋಡಿಕೊಳ್ಳುತ್ತಾರೆ. ಆ ನಂತರ ಚಿಟ್ ಫಂಡ್ ಓನರ್ ಹಾಲಾಡಿ ಕಾಲಡಿ ಆಗುತ್ತವೆ. ಈತ ಮಾಡುವ 'ದಾನ'ವೂ ಈಗ ವಿಚಿತ್ರ ವ್ಯಾಖ್ಯಾನಕ್ಕೆ ಒಳಪಡುತ್ತಿದೆ.

ಇಂಥ ಅವಾಂತರ-ಅನಾಚಾರಗಳಿಂದ ಕುಂದಾಪುರದಲ್ಲೀಗ ಹಾಲಾಡಿ ಬಣ್ಣಗೆಟ್ಟುಹೋಗಿದ್ದಾರೆ. ಬಿಜೆಪಿಯ ಹೊರಗಿದ್ದು ನಿಷ್ಠಾವಂತರ ಕಾಡುವ ಆತನ ಕಿತಾಪತಿಗೆ ಬೇಸತ್ತವರು ಆತನಿಗೆ ಪಾಠ ಕಲಿಸಲು ಸಮಯ ಕಾಯುತ್ತಿದ್ದಾರೆ. ಇಷ್ಟು ದಿನ ಬಿಜೆಪಿಗೆ ತಾನು ಅನಿವಾರ್ಯ ಎಂದುಕೊಂಡಿದ್ದ ಹಾಲಾಡಿಗೆ ಈಗ ಬಿಜೆಪಿ ಸೇರದೇ ಬೇರೆ ಗತಿಯಿಲ್ಲದಂತಾಗಿದೆ. ತಾರಾನಾಥ ಶೆಟ್ಟಿ, ಸರ್ವೋತ್ತಮ ಶೆಟ್ಟಿ, ವಸಂತ ಶೆಟ್ಟಿಯಂಥ ಕಟ್ಟಾ ಬೆಂಬಲಿಗರೇ ತಿರುಗಿಬಿದ್ದಿರುವುದು ಹಾಲಾಡಿಯನ್ನು ಕಂಗೆಡಿಸಿಬಿಟ್ಟಿದೆ. ಹಾಗಾಗಿ ಆತ ಅಸ್ತಿತ್ವಕ್ಕಾಗಿ ಅನಿವಾರ್ಯವಾಗಿ ಬಿಜೆಪಿ ಸೇರಬೇಕಾಗಿ ಬಂದಿದೆ. ಶೋಭಕ್ಕನ ಹಿಡಿದುಕೊಂಡು ಬಿಜೆಪಿಗೆ ಸೇರಲು ಆತ ತಿಪ್ಪರಲಾಗ ಹಾಕುತ್ತಿದ್ದಾರೆ.

ತನ್ನ ಹೊರತು ಕುಂದಾಪುರದಲ್ಲಿ ಬಿಜೆಪಿಯೇ ಇಲ್ಲ ಎಂಬ ಹಾಲಾಡಿ ಗರ್ವ ಭಂಗದ ದಿನ ಹತ್ತಿರಾಗಿದೆ! ಶೋಭಕ್ಕ-ಯಡ್ಡಿ ಬೆಂಬಲ ಅದೆಷ್ಟೇ ಇರಲಿ; ಹಾಲಾಡಿ ಬಿಜೆಪಿ ಸೇರಿದಾಕ್ಷಣ ದುರ್ಬಲವಾಗೋದು ಖಂಡಿತ. ಮೊದಲಿನಂತೆ ಪಾರ್ಟಿಯಲ್ಲಿ ಏಕಪಾತ್ರಾಭಿನಯಕ್ಕೆ ಅಸಲಿ ಚೆಡ್ಡಿಗಳು, ನಿಷ್ಠಾವಂತ ಕಾರ್ಯಕರ್ತರು ಅವಕಾಶ ಖಂಡಿತ ಕೊಡಲಾರರು. ಅಧಿಕಾರದ ಹಿಂದೆ ಬಿದ್ದಿರುವ ಹಾಲಾಡಿ ಮೂರು ಬಿಟ್ಟಿದ್ದಾರೆಂದೇ ಕುಂದಾಪುರದ ಜನರೀಗ ಆಡಿಕೊಳ್ಳುತ್ತಿದ್ದಾರೆ. ತಾನು ಮುಂದಿನ ಬಾರಿ ಅಸೆಂಬ್ಲಿಗೆ ಸ್ಪರ್ಧಿಸಲಾರೆನೆಂದಿದ್ದ ಹಾಲಾಡಿ ತನಗೆ ರಾಜಕೀಯ ದೀಕ್ಷೆ ನೀಡಿದ 'ಗುರು' ಎ.ಜಿ. ಕೊಡ್ಗಿ ಕುಲೋದ್ಧಾರಕ ಕಿರಣ ಕೊಡ್ಗಿಯೇ ಮುಂದಿನ ಬಿಜೆಪಿ ಕ್ಯಾಂಡಿಡೇಟ್ ಎನ್ನುತ್ತ ಬಂದಿದ್ದರು. ಆದರೆ ಕಿರಣ್ ಈಗ ಹಾಲಾಡಿ ನಡೆ ಕಂಡು ಕಂಗಾಲಾಗಿದ್ದಾನೆ. ಹಾಲಾಡಿಯನ್ನು ನಂಬುವವರೇ ಈಗ ಬಿಜೆಪಿಯಲ್ಲಿಲ್ಲ; ಆತನ ಹಿಂಬಾಲಕರಲ್ಲೂ ಸಂಶಯಗಳು ಮೂಡಿದೆ. ಬಿಜೆಪಿ ಸೇರಿದರೂ ಹಾಲಾಡಿ ಮುಂದಿನ ಚುನಾವಣೆಯಲ್ಲಿ ಅಷ್ಟು ಸುಲಭಕ್ಕೆ ಬಚಾವಾಗೋದು ಅನುಮಾನ. ಹಾಗಂತ ಚರ್ಚೆ ಕುಂದಾಪುರದಲ್ಲಿ ಜೋರಾಗೇ ನಡೆದಿದೆ.

■ ನಹುಷ

ಲೇಡಿ ಡಾನ್



ಸಿಕ್ಕಿಬಿದ್ದ ಹಂತಕರು

◀◀

ದ ಗೋವಿಂದಪ್ಪನ ಹಣೆಬರಹವನ್ನೇ ಾಯಿಸಿತು. ಆತನಕ ಸ್ಕ್ರ್ಯಾಪು, ಹಳೇ ಪಾತ್ರೆ, ಹಳೇ ದ ವಹಿವಾಟಿನಲ್ಲಿ ಕನ್ನಡಿಗರೇ ಇರುತ್ತಿರಲಿಲ್ಲ. ುು ಮುಸ್ಲಿಮರಿಗಷ್ಟೇ ಮೀಸಲಂತಿದ್ದ ಸ್ಕ್ರ್ಯಾಪು ಗೆ ಗೋವಿಂದಪ್ಪನ ಪ್ರವೇಶವಾಗಿತ್ತು. ಮುಂದೆ ಪತ್ನಿ ಾಲಕ್ಷ್ಮಿಯ ಪ್ರಯತ್ನದ ಫಲವಾಗೇ ಮಾಕಳಿಯ ೀಕಾನ್ ಎಂಬ ಮತ್ತೊಂದು ಫಾರ್ಮಾಸ್ಯೂಟಿಕಲ್ಸ್ ರಿಯ ಗಾರ್ಬೇಜ್ ಅಂಡ್ ವೇಸ್ಟ್ ತ್ಯಾಜ್ಯ ಹಣೆಯ ಕಾಂಟ್ರಾಕ್ಟೂ ಗೋವಿಂದಪ್ಪನ ಪಾಲಾಯಿತು. ಡ ಸ್ಕ್ರ್ಯಾಪು ಮತ್ತೊಂದೆಡೆ ತ್ಯಾಜ್ಯ ವಿಲೇವಾರಿ ಗುತ್ತಿಗೆ. ನ್ನೂ ನಿಭಾಯಿಸಲೆಂದೇ ಪೀಣ್ಯ ಒಂಬತ್ತನೇ ಡಿಪೋ ಾಲಿನಿ ಎಂಟರ್‌ಪ್ರೈಸಸ್ ಎಂಬ ತ್ಯಾಜ್ಯ ವಿಲೇವಾರಿ ಘಟಕವನ್ನೂ ಗೋವಿಂದಪ್ಪ ಶುರುವಿಟ್ಟ. ಸೇರುತ್ತಿದ್ದ ರೊಕ್ಕ ಮತ್ತು ಸಂಪತ್ತಿಗೆ ತಕ್ಕಂತೆ ತನ್ನ ಹೆಸರನ್ನು ಗೋವಿಂದೇಗೌಡ ಎಂದು ಬದಲಾಯಿಸಿಕೊಂಡ.

ಮರ್ಡರ್ ಆಫರ್...!

ಫ್ಯಾಕ್ಟರಿಗಳ ತ್ಯಾಜ್ಯಯುಕ್ತ ಫರ್ನೆಸ್ ಆಯಿಲ್‌ನ ವಿಲೇವಾರಿಯಲ್ಲೇ ಕೋಟ್ಯಾಂತರ ರೂಪಾಯಿಗಳ ಉತ್ಪತ್ತಿ ಶುರುವಾಯಿತು. ಇಂಥ ವಿಷಯುಕ್ತ ತ್ಯಾಜ್ಯವನ್ನು ಕೋಲಾರದ ತ್ಯಾಜ್ಯ ಸಂಸ್ಕರಣ ಘಟಕವೊಂದರಲ್ಲಿ ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ಬದಲು ಅದನ್ನು ಮೈಸೂರು ರಸ್ತೆಯ ಕೆಂಗೇರಿ ಮೋರಿಗೆ ಸುರಿಯುತ್ತಿದ್ದ. ಕೆಲವೇ ವರ್ಷಗಳಲ್ಲಿ ನೂರಾರು ಕೋಟಿಯ ಧನಿಕನಾದ ಗೋವಿಂದೇಗೌಡ 2010ರ ಪಾಲಿಕೆ ಚುನಾವಣೆಯಲ್ಲಿ ಪಕ್ಷೇತರನಾಗೇ ಗೆದ್ದುಬಿಟ್ಟ. ಅದೂ ಬಿಜೆಪಿಯ ಬಲಾಢ್ಯ ಕೃಷ್ಣಯ್ಯನ ವಿರುದ್ಧ. ಗೆಲುವಿಗೆ ಕಾರಣನಾದವನು ಇದೇ ಹೆಗ್ಗನಹಳ್ಳಿಯ ಚಿಕ್ಕತಿಮ್ಮಯ್ಯ ಅಲಿಯಾಸ್ ಚಿಕ್ಕತಿಮ್ಮೇಗೌಡ. ಐದು ವರ್ಷದ ಗೋವಿಂದೇಗೌಡನ ಕೌನ್ಸಿಲರ್‌ಗಿರಿ ಯುದ್ದಕ್ಕೂ ಅನಭಿಷಕ್ತ ದೊರೆಸಾನಿಯಂತೆ ಮೆರೆದವಳು ವರಮಹಾಲಕ್ಷ್ಮಿ.



ಕಳೆದ ಪಾಲಿಕೆ ಚುನಾವಣೆಯಲ್ಲಿ ಜಿಮ್ ಶ್ರೀನಿವಾಸನ ಸಮೇತ ಆತನ ಇಡೀ ದೈತ್ಯ ಪಡೆಯ ಕಣ್ಣಿಗೆ ಖಾರದ ಪುಡಿ ಎರಚಿ ನಡುರಸ್ತೆಯಲ್ಲಿ ಯಾವ ರೌಡಿಗೂ ಕಮ್ಮಿಯಿಲ್ಲದಂತೆ ಬಡಿದಾಡಿದ್ದ ವರಮಹಾಲಕ್ಷ್ಮಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ನನ್ನ ದತ್ತು ಪುತ್ರ ಸೂರಿ ಮತ್ತು ಈಗ ಕೊಲೆಯಾದ ಚಿಕ್ಕತಿಮ್ಮಯ್ಯರನ್ನು ಕಟ್ಟಿಕೊಂಡು ಹಾಲೀ ಪಾಲಿಕೆಯ ಕೌನ್ಸಿಲರ್ ಪತಿ ಮತ್ತು ಬಿಜೆಪಿ ನಾಯಕ ಕೃಷ್ಣಯ್ಯನನ್ನು ನಡುರಸ್ತೆಯಲ್ಲಿ ಅಟ್ಟಾಡಿಸಿ ಹೊಡೆದಿದ್ದಳು. ಆದರೆ ಮಾಡಿದ ಪಾಪಕ್ಕೆ ದಂಡ ಕಟ್ಟಲೇಬೇಕಲ್ಲವೆ?

ತಡಬಿ ದುಡ್ಡು ರಾತ್ರೋರಾತ್ರಿ ಪ್ರಾಪ್ತಿಯಾದ ಅಧಿಕಾರ ಮತ್ತು ಸಂಪತ್ತು ಗೋವಿಂದೇಗೌಡನ ಪಾಲಿಗೆ ಶಾಪವಾಯಿತು: ಶೋಕಿಗೆ ಬಿದ್ದ ದತ್ತು ಮಗ ಸೂರಿ ಕುಡಿತ ಶೋಕಿಗೆ ಬಿದ್ದರೆ ಆತನಕ ನಂಬಿಕಸ್ಥನಂತಿದ್ದ ಚೇಲಾ ಚಿಕ್ಕತಿಮ್ಮಯ್ಯ ಜೊತೆಗಿದ್ದೇ ಎಂಥ ಮನೆಗೆ ಕನ್ನ ಹಾಕಲಾರಂಭಿಸಿದ್ದ. ದತ್ತು ಮಗ ಒಂದು ಕೋಟಿ ಕದ್ದರೆ ಬಲಗೈ ಬಂಟ ಚಿಕ್ಕತಿಮ್ಮಯ್ಯ ಧಣಿ ಮನೆಗೆ ಹಾಕಿದ ಕನ್ನದ ರೊಕ್ಕದಲ್ಲೇ ಭರ್ಜರಿ ಬಂಗಲೆಯೆಬ್ಬಿಸಿಬಿಟ್ಟ. ಇದು ಗೊತ್ತಾಗಿದ್ದೇ ದತ್ತು ಮಗನನ್ನು ಹೊರದಬ್ಬಿದರು, ಬಂಟ ಚಿಕ್ಕತಿಮ್ಮಯ್ಯನನ್ನು ದೂರವಿಟ್ಟರು. ಉಂಡ ಮನೆಗೆ ಬಗೆದ ದ್ರೋಹಕ್ಕೆ ಚಿಕ್ಕತಿಮ್ಮಯ್ಯ ತನ್ನ ಪಾಡಿಗೆ ತಾನಿದ್ದರೂ ಬದುಕಿರುತ್ತಿದ್ದನೇನೊ.

ಯಾರ ಪಾಪ ಯಾರ ತಲೆದಂಡ ಬಯಸಿತ್ತೋ. ಚಿಕ್ಕತಿಮ್ಮಯ್ಯ ಗೋವಿಂದೇಗೌಡನ ಕಡುವೈರಿ ಬಿಜೆಪಿಯ ಕೃಷ್ಣಯ್ಯನ ಜೊತೆ ಕೈಜೋಡಿಸಿದ. ದತ್ತು ಮಗ ಸೂರಿಯನ್ನು ಜೊತೆ ಹಾಕಿಕೊಂಡ. ಪಾಲಿಕೆ ಚುನಾವಣೆ ಯಲ್ಲಿ ಬಿಜೆಪಿಯ ಭಾಗ್ಯಮ್ಮ ಕೃಷ್ಣಯ್ಯನ ಪರ ಪ್ರಚಾರ ಮಾಡಿದ್ದಷ್ಟೇ ಅಲ್ಲ, ಗೋವಿಂದೇಗೌಡ ಓರ್ವ ಕಳ್ಳ, ಸುಳ್ಳ, ಮನೆಹಾಳ, ದಂಧೆಕೋರ ಎಂದೆಲ್ಲಾ ಕತೆ ಹಬ್ಬಿಸಿದ.

ಜೊತೆಗಿದ್ದು ಉಂಡುತಿಂದವನೇ ಎದುರಾಳಿ ಜೊತೆ ಕೈಜೋಡಿಸಿದನೆಂದರೆ ಸಾಕಿ ಬೆಳೆಸಿದ ದತ್ತು ಮಗನನ್ನೇ ಎತ್ತಿ ಕಟ್ಟಿದನೆಂದರೆ ಬಿಡುವುದುಂಟಾ? ಅದರಲ್ಲೂ ವರಮಹಾಲಕ್ಷ್ಮಿಯ ಸೇಡೆಂದರೆ ಸಣ್ಣ ಮಾತಾ? ತೀರಾ ಬತ್ತು ಚಿಕ್ಕತಿಮ್ಮಯ್ಯನದು. ಲೇಡಿ ಡಾನ್ ವರಮಹಾಲಕ್ಷ್ಮಿಯ ಪಿತ್ಥ ನೆತ್ತಿಗೇರಿತೆಂದರೆ ಮುಗಿದೇಹೋಯಿತು!

■ ರಾ. ಸೋಮನಾಥ್

ರಾಜಕುಮಾರಿ ರಾಣಿಯಾದದ್ದು

ದೊಡ್ಡವರಿಗಾಗಿ ಮಕ್ಕಳ ಕಥೆ



ಒಂದಾನೊಂದು ಕಾಲದಲ್ಲಿ ವಿಷ್ಣುಶರ್ಮನೆಂಬ ಗುರುವಿದ್ದ. ಅವನ ಕೆಲಸ ತನ್ನ ಶಿಷ್ಯರನ್ನು ನೀತಿಕತೆಗಳ ಮೂಲಕ ಬುದ್ಧಿವಂತರನ್ನಾಗಿ ಮಾಡುವುದು. ಹಾಗಂತ ಅವನು ಎಲ್ಲಾ ಮಕ್ಕಳಿಗೆ ಪಾಠ ಹೇಳುತ್ತಿರಲಿಲ್ಲ, ಕೇವಲ ರಾಜಕುಮಾರರು ಮಾತ್ರ ಅವನ ಶಿಷ್ಯರಾಗಬಹುದಾಗಿತ್ತು. ಅವನ ವಿಶೇಷವೇನೆಂದರೆ ಅವನು ಅತ್ಯಂತ ದಡ್ಡ ರಾಜಕುಮಾರರನ್ನು ತನ್ನ ಪಾಠದಿಂದ ಅತಿ ಬುದ್ಧಿವಂತರನ್ನಾಗಿ ಮಾಡುತ್ತಿದ್ದುದು. ಹಾಗಾಗಿ ಅನೇಕ ರಾಜ್ಯಗಳಿಂದ ರಾಜರು ತಮ್ಮ ಮಕ್ಕಳನ್ನು ಇವನ ಬಳಿ ವಿದ್ಯೆ ಕಲಿಯಲು ಕಳುಹಿಸುತ್ತಿದ್ದರು. ರಾಜರಿಂದ ಬಳುವಳಿಯಾಗಿ ಪಡೆದುಕೊಂಡ ಭೂಮಿ ಮತ್ತು ಸಂಪತ್ತು ವಿಷ್ಣುಶರ್ಮನಲ್ಲಿ ಅಪಾರವಾಗಿತ್ತು. ಹೀಗಿರಬೇಕಾದರೆ ಒಮ್ಮೆ ಒಂದು ರಾಜ್ಯದ ರಾಜ ತನ್ನ ಮಕ್ಕಳನ್ನು ಕರೆದುಕೊಂಡು ವಿಷ್ಣುಶರ್ಮನ ಆಶ್ರಮಕ್ಕೆ ಬಂದ. ತನ್ನ ಮಕ್ಕಳನ್ನು ಎಲ್ಲಾ ರಾಜಕುಮಾರರಂತೆ ಬುದ್ಧಿವಂತರನ್ನಾಗಿ ಮಾಡಬೇಕೆಂದು ವಿಷ್ಣುಶರ್ಮನನ್ನು ಕೇಳಿಕೊಂಡ. ವಿಷ್ಣುಶರ್ಮ ಒಮ್ಮೆ ರಾಜನ ಮಕ್ಕಳ ಕಡೆಗೆ ಕಣ್ಣು ಹಾಯಿಸಿದ. ನಾಲ್ಕು ಮಕ್ಕಳಲ್ಲಿ ಒಬ್ಬಳು ಹೆಣ್ಣು ಮಗಳಿದ್ದಳು. ಅವಳನ್ನು ನೋಡುತ್ತಲೆ ವಿಷ್ಣುಶರ್ಮ ಅಸಮಾಧಾನದಿಂದ, "ಏನಿದು, ರಾಜಕುಮಾರಿಯನ್ನು ಕರೆತಂದಿದ್ದೀಯ? ಅವಳಿಗೂ ವಿದ್ಯಾಭ್ಯಾಸ ಮಾಡಿಸಬೇಕೆ?"

ರಾಜ, "ಹೌದು, ಋಷಿವರ್ಯರೆ. ಆಕೆ ನನ್ನ ನಾಲ್ಕನೆ ಮಗು. ಅವಳಿಗೂ ನಿಮ್ಮಲ್ಲಿ ವಿದ್ಯಾಭ್ಯಾಸ ಮಾಡುವ ಆಸೆ ಇದೆ" ಎಂದ. ವಿಷ್ಣುಶರ್ಮ ಕೋಪದಿಂದ, "ರಾಜ, ಹೆಣ್ಣು ಮಕ್ಕಳಿಗೆ ಈ ಆಶ್ರಮ ನಿಷಿದ್ಧ, ನೀನು ತಪ್ಪು ಮಾಡಿದೆ. ಹೆಣ್ಣು ಮಕ್ಕಳಿಗೇಕೆ ವಿದ್ಯೆ, ಬುದ್ಧಿ? ಅವರೇನು ರಾಜ್ಯ ಆಳುವರೆ? ಮದುವೆಯಾಗಿ ಗಂಡನ ಮನೆಗೆ ಸೇರುವ ಹೆಣ್ಣುಮಕ್ಕಳಿಗೆ ವಿದ್ಯೆ ಯಾಕೆ? ನಮ್ಮ ಶಾಸ್ತ್ರ ಪುರಾಣಗಳಲ್ಲಿ ಹೆಣ್ಣು ಮಕ್ಕಳಿಗೆ ವಿದ್ಯೆ ಕಲಿಸುವ ಅವಕಾಶವಿಲ್ಲ, ಹೆಣ್ಣು ಒಂದು ಮಾಯೆ. ಆಶ್ರಮದ ಗಂಡುಮಕ್ಕಳ ಚಿತ್ತಕಲಕುವ ಕಾಮ ರೂಪಿಣಿ. ಆಕೆಯನ್ನು ನೀನು ವಾಪಾಸು ಕರೆದುಕೊಂಡು ಹೋಗು" ಎಂದು ಗುಡುಗಿದ. ರಾಜ ವಿಧಿಯಿಲ್ಲದೆ ತನ್ನ ಮಗಳನ್ನು ಆಶ್ರಮದಿಂದ ವಾಪಾಸು ಕರೆದುಕೊಂಡು ಹೋದ.

ಅವರು ಹೋದ ಮರುದಿನವೇ ರಾಜನ ಮೂರು ರಾಜಕುಮಾರರಿಗೆ ವಿಷ್ಣುಶರ್ಮ ವಿದ್ಯಾಭ್ಯಾಸ ಶುರು ಮಾಡಿದ. ರಾಜಕುಮಾರರು ಭಾಗವತ, ಗೀತ, ಪುರಾಣ, ಸ್ಮೃತಿ, ವೇದ, ಉಪನಿಷತ್, ರಾಜನೀತಿ, ರಾಜತಂತ್ರ ಸೂತ್ರಗಳಿಂದ ಅನೇಕ ಕಥೆಗಳನ್ನು ಕೇಳಿ, ಅನೇಕ ವಿಷಯಗಳನ್ನು ತಿಳಿದುಕೊಂಡರು. ಇನ್ನು ಉಳಿದಿದ್ದು ಧನುರ್ವಿದ್ಯೆ ಮತ್ತು ಸಮರೋಭ್ಯಾಸ. ಅದನ್ನು ಕಲಿಸಲು ಒಬ್ಬ ಮಹರ್ಷಿಯ ಬಳಿ ಆ ಮೂವರನ್ನು ಕಳುಹಿಸಲು ವಿಷ್ಣುಶರ್ಮ ನಿರ್ಧರಿಸಿದ. ಇದೇ ಸಂದರ್ಭದಲ್ಲಿ ರಾಜನ ಜೊತೆಗೆ ವಾಪಾಸು ಹೋದ ರಾಜಕುಮಾರಿ ಯಾರಿಗೂ ತಿಳಿಯದ ಹಾಗೆ ಕದ್ದುಮುಚ್ಚಿ ಆಶ್ರಮದ ಮರೆಯಿಂದ ವಿಷ್ಣುಶರ್ಮ ಕಲಿಸುತ್ತಿದ್ದ ಎಲ್ಲಾ ಕಥೆಗಳನ್ನು ಕಲಿತಳು. ಮೂವರು ರಾಜಕುಮಾರರ ವಿದ್ಯಾಭ್ಯಾಸ ಇನ್ನೇನು ಮುಗಿಯಲು ಸ್ವಲ್ಪವೇ ದಿನಗಳು ಇರಬೇಕಾದರೆ, ರಾಜಕುಮಾರಿ ಕದ್ದುಮುಚ್ಚಿ ವಿದ್ಯೆಯನ್ನು ಕಲಿಯುತ್ತಿದ್ದುದು ಗೊತ್ತಾಗಿ ಹೋಯಿತು. ವಿಷ್ಣುಶರ್ಮನಿಗೆ ಎಲ್ಲಿಲ್ಲದ ಕೋಪ ಬಂದು ರಾಜನನ್ನು ಕರೆದು ರಾಜಕುಮಾರಿಯನ್ನು ರಾಜ್ಯದಿಂದ ಗಡಿಪಾರು ಮಾಡೆಂದು ಆದೇಶಿಸಿದ. ರಾಜ ಈ ಮಾತನ್ನು ನಡೆಸಿಕೊಡದಿದ್ದರೆ ಮೂರು ರಾಜಕುಮಾರರ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸದೆ ವಾಪಾಸು ಕಳುಹಿಸುವೆನೆಂದು ವಿಷ್ಣುಶರ್ಮ ಬೆದರಿಕೆ ಹಾಕಿದ. ರಾಜಕುಮಾರರ ವಿದ್ಯಾಭ್ಯಾಸ ಅರ್ಧಕ್ಕೆ ನಿಲ್ಲಬಾರದೆಂದು ಹೆದರಿದ ರಾಜ ತನ್ನ ಮಗಳನ್ನು ರಾಜ್ಯದಿಂದ ಗಡಿಪಾರು ಮಾಡಿದ.

ರಾಜಕುಮಾರಿ ಸುಮ್ಮನಿರಲಿಲ್ಲ. ತನ್ನ ಅಣ್ಣಂದಿರು ಧನುರ್ವಿದ್ಯೆ ಮತ್ತು ಸಮರೋಭ್ಯಾಸ ಕಲಿಯಲು ಎಲ್ಲಿ ಹೋಗುತ್ತಿದ್ದಾರೆಂದು ಗುಟ್ಟಾಗಿ ತಿಳಿದುಕೊಂಡು, ಅಲ್ಲಿಗೂ ಹೋದಳು. ಆದರೆ ಅವಳಿಗೆ ಇಲ್ಲಿಯೂ ಒಂದು ಸಮಸ್ಯೆ ಎದುರಾಯಿತು. ಕೇವಲ ಗಂಡಸರಿಗೆ ಮಾತ್ರ ಧನುರ್ವಿದ್ಯೆ ಮತ್ತು ಸಮರೋಭ್ಯಾಸ ಕಲಿಯಬಹುದಾಗಿತ್ತು, ಈ ವಿಷಯದಲ್ಲಿ ಆ ಆಶ್ರಮದ ಮಹರ್ಷಿ ವಿಷ್ಣುಶರ್ಮನಿಗಿಂತ ಕಟ್ಟುನಿಟ್ಟಾಗಿದ್ದ. ಹೀಗಾಗಿ ರಾಜಕುಮಾರಿ ಒಂದು ಉಪಾಯ ಮಾಡಿದಳು. ಗಂಡು ಹುಡುಗನ ಹಾಗೆ ವೇಷ ಹಾಕಿಕೊಂಡು ಮಹರ್ಷಿಯ ಬಳಿ ಹೋಗಿ ತನಗೂ ವಿದ್ಯೆಯನ್ನು ಕಲಿಸಲು ಬೇಡಿಕೊಂಡಳು. ಮಹರ್ಷಿ ಆಕೆಯ ದೈನ್ಯತೆ ಮತ್ತು ಆಸಕ್ತಿಯನ್ನು ನೋಡಿ ಬಿಲ್ವಿದ್ಯೆ ಕಲಿಸಲು ಒಪ್ಪಿಕೊಂಡ. ಒಂದು ವರ್ಷಗಳ ಕಾಲ ಮೂರು ಜನ ರಾಜಕುಮಾರರು ಮತ್ತು ವೇಷಧಾರಿ ರಾಜಕುಮಾರಿ ಧನುರ್ವಿದ್ಯೆ ಮತ್ತು ಸಮರೋಭ್ಯಾಸದ ಎಲ್ಲಾ ಕಲೆಗಳನ್ನು ಕಲಿತರು. ಬಿಲ್ವಿದ್ಯೆ ಪರೀಕ್ಷೆಯ ಕೊನೆಯ ಹಂತಕ್ಕೆ ಎಲ್ಲರೂ ಬಂದಾಗ, ರಾಜಕುಮಾರಿಯು ಗಂಡಸಿನ ವೇಷದಲ್ಲಿರುವುದು ಮಹರ್ಷಿಗೆ ಹೇಗೋ ಗೊತ್ತಾಯಿತು. ರಾಜಕುಮಾರಿಯ ಮೇಲೆ ಕೆಂಡಮಂಡಲವಾದ. ಆಕೆ ತನಗೆ ಮತ್ತು ಆಶ್ರಮದ ಸಂಪ್ರದಾಯಕ್ಕೆ ಅವಮಾನ ಮಾಡಿದ್ದಾಳೆಂದು ರಾಜನಿಗೆ ಹೇಳಿ ಅವಳನ್ನು ಗೊಂಡಾರಣ್ಯಕ್ಕೆ ತಳ್ಳಿಬಿಟ್ಟ.

ಪಾಪ, ರಾಜಕುಮಾರಿ ಗೊಂಡಾರಣ್ಯದಲ್ಲಿ ಎಲ್ಲಿಗೆ ಹೋಗಬೇಕೆಂದು ತಿಳಿಯದೆ, ಕಂಗಾಲಾಗಿ, ಸುಸ್ತಾಗಿ ಕಾಡಿನ ಮಧ್ಯೆ ಮೂರ್ಛೆ ಹೋದಳು. ಮತ್ತೆ ಕಣ್ಣು ತೆರೆದಾಗ, ಆಕೆಯ ಮುಂದೆ ಹಳ್ಳಿಯ ಅನೇಕ ಜನ ನಿಂತಿರುವುದನ್ನು ನೋಡಿದಳು. ಅಲ್ಲಿದ್ದ ಒಬ್ಬ ಹಿರಿಯಜ್ಜ ಅವಳನ್ನು ಕೇಳಿದ. "ನೀನು ಯಾರು ತಾಯಿ. ಎಲ್ಲಿಂದ ಬಂದಿದ್ದೀಯ? ಅಂತಹ ಗೊಂಡಾರಣ್ಯದಲ್ಲಿ ಒಬ್ಬಳೆ ಏನು ಮಾಡುತ್ತಿದ್ದೆ? ನಿನ್ನನ್ನು ನೋಡಿದರೆ ದೊಡ್ಡ ಮನೆತನದ ಹೆಣ್ಣು ಮಗಳ ಹಾಗೆ ಕಾಣುತ್ತಿದ್ದೀಯ! ಹೀಗೇಕೆ ನಿನ್ನ ಪರಿಸ್ಥಿತಿ ಆಯಿತು?"

ರಾಜಕುಮಾರಿ ಇದುವರೆಗೂ ನಡೆದಿದ್ದನ್ನೆಲ್ಲಾ ಸವಿವರವಾಗಿ ಹೇಳಿದಳು. ಹಿರಿಯಜ್ಜ ಅವಳ ಮಾತು ಕೇಳಿದ ಮೇಲೆ ನಸುನಕ್ಕು, "ಅಯ್ಯೊ, ಹುಚ್ಚಿ ನೀನು ಇದುವರೆಗೂ ಕಲಿತಿದ್ದು ಪುಸ್ತಕದ ಕಥೆಗಳು. ಅದರಿಂದ ನೀನೇನು ಮಾಡಲು ಸಾಧ್ಯ? ಅದಕ್ಕಿಂತ ಭಿನ್ನವಾದದ್ದು ನಮ್ಮ ಜನರ ಕಥೆ. ಅದು ನಿನಗೆ ಗೊತ್ತೆ?" ಎಂದು ಕೇಳಿದ. ರಾಜಕುಮಾರಿ ತಲೆಯಾಡಿಸಿ ಗೊತ್ತಿಲ್ಲ ಎಂದಳು. "ಹೇಳುತ್ತೇನೆ ಕೇಳು" ಎಂದು ಹಿರಿಯಜ್ಜ ತಮ್ಮ ಹಳ್ಳಿಯ ಆ ಹಳ್ಳಿಯ ಜಾನಪದ ಕಥೆಗಳಾದ ಜಾತಿ ಕಥೆ, ಬಡವರ ಕಥೆ, ಶೋಷಣೆಯ ಕಥೆ, ಸ್ತ್ರೀಯರ ಗೋಳಿನ ಕಥೆ, ಹುತಾತ್ಮ ಬಡ ಸೈನಿಕರ ಕಥೆ, ಭಿಕ್ಷುಕರ ಕಥೆಗಳನ್ನು ಹೇಳಿದ. ರಾಜಕುಮಾರಿಗೆ ಆಶ್ಚರ್ಯವಾಯಿತು. ವಿಷ್ಣುಶರ್ಮನ ಆಶ್ರಮದಲ್ಲಿ ಕಲಿತದ್ದಕ್ಕಿಂತ, ಇಲ್ಲಿನ ಕಥೆಗಳು ಬೇರೆಬೇರೆಯಾಗಿವೆಯಲ್ಲ ಎಂದು ಸೋಜಿಗಪಟ್ಟಳು. ಆ ಹಳ್ಳಿಯಲ್ಲೆ ಇದ್ದು ಇನ್ನಷ್ಟು ವಿದ್ಯೆಯನ್ನು ಕಲಿಯುವುದು ಉಚಿತವೆಂದು ರಾಜಕುಮಾರಿ ನಿರ್ಧಾರ ಮಾಡಿದಳು. ಅಲ್ಲಿರುವಷ್ಟು ದಿನ ರಾಜಕುಮಾರಿ ಹಳ್ಳಿಯವರ ಅನೇಕ ಕಸುಬುಗಳನ್ನು ಕಲಿತಳು ಮತ್ತು ಅವರಲ್ಲಿರುವ ಇನ್ನು ಅನೇಕ ಜಾನಪದ ಕಥೆಗಳನ್ನು ಕೇಳಿ ತನ್ನ ಜ್ಞಾನವನ್ನು ಹೆಚ್ಚಿಸಿಕೊಂಡಳು.

ಒಂದೆರಡು ವರ್ಷಗಳ ನಂತರ ತನ್ನ ಅಣ್ಣಂದಿರು ಆಶ್ರಮದಲ್ಲಿ ಕಲಿತ ವಿದ್ಯೆಯನ್ನು ರಾಜ್ಯ ವಿಸ್ತಾರಕ್ಕಾಗಿ ಬಳಸಿಕೊಳ್ಳುವುದಕ್ಕೆ ದಂಡಯಾತ್ರೆ ಮಾಡುತ್ತಿದ್ದಾರೆಂದು ಅದರಲ್ಲಿ ತಾನು ಇರುವ ಹಳ್ಳಿಯನ್ನು ಸಹ ಗೆಲ್ಲುತ್ತಾರೆಂದು ತಿಳಿದುಕೊಂಡಳು. ಈ ಮೂವರ ಮೇಲೆ ವಿಷ್ಣುಶರ್ಮ ಮತ್ತು ಮಹರ್ಷಿಗಳ ಆಶೀರ್ವಾದವಿರುವುದು ತಿಳಿಯಿತು. ಅವರ ರಾಜ್ಯ ವಿಸ್ತಾರದ ದುರಾಸೆಯನ್ನು ಈ ಹಳ್ಳಿಯಲ್ಲೆ ಕೊನೆಗಾಣಿಸಬೇಕು ಎಂದು ರಾಜಕುಮಾರಿ ನಿರ್ಧರಿಸಿದಳು. ಹಳ್ಳಿಯ ಯುವಕ, ಯುವತಿಯರನ್ನು ಒಟ್ಟು ಕೂಡಿಸಿ, ಅವರೆಲ್ಲರಿಗೂ ಧನುರ್ವಿದ್ಯೆ ಮತ್ತು ಸಮರೋಭ್ಯಾಸದ ಕಲೆಯನ್ನು ಕಲಿಸಿಕೊಟ್ಟಳು. ತನ್ನ ಅಣ್ಣಂದಿರು ಆ ಹಳ್ಳಿಗೆ ದಂಡೆತ್ತಿ ಬಂದಾಗ ಅವರನ್ನು ಎದುರುಗೊಂಡು, ಹಳ್ಳಿಯವರ ಸಹಾಯದಿಂದ ಆ ಮೂವರನ್ನು ಯುದ್ಧದಲ್ಲಿ ಸೋಲಿಸಿದಳು. ಇವಳ ಶೂರತನ ಮತ್ತು ಯುದ್ಧದ ಕೌಶಲ್ಯವನ್ನು ನೋಡಿ ಆಕೆಯ ಅಪ್ಪ ಅವಳನ್ನು ರಾಜ್ಯದ ರಾಣಿಯನ್ನಾಗಿ ಮಾಡಿ ನಿವೃತ್ತನಾದ.

******

ಇದಾದ ಕೆಲವು ತಿಂಗಳುಗಳ ನಂತರ ವಿಷ್ಣುಶರ್ಮ ಮತ್ತು ಮಹರ್ಷಿಗಳು ಕಾಯಿಲೆಯಿಂದ ಹಾಸಿಗೆ ಹಿಡಿದರು. ಯಾವ ವೈದ್ಯಶಾಸ್ತ್ರದಿಂದಲೂ ಅವರ ಕಾಯಿಲೆ ಗುಣವಾಗಲಿಲ್ಲ. ಒಂದು ರಾತ್ರಿ ಅವರಿಬ್ಬರ ಕನಸಿನಲ್ಲಿ ಒಂದು ಹೆಣ್ಣು ಕಾಣಿಸಿಕೊಂಡು "ನಿಮ್ಮ ಕಾಯಿಲೆ ವಾಸಿಯಾಗಬೇಕೆಂದರೆ ನಿಮ್ಮಿಂದ ಅವಮಾನಕ್ಕೊಳಗಾದ ರಾಜಕುಮಾರಿಯ ಮಾಂತ್ರಿಕ ಕೈಸ್ಪರ್ಶದಿಂದ ಮಾತ್ರ ಸಾಧ್ಯ" ಎಂದು ಹೇಳಿ ಮಾಯವಾದಳು. ಇದನ್ನು ತಿಳಿದುಕೊಂಡ ಆಶ್ರಮದ ಶಿಷ್ಯರು ತಮ್ಮ ಗುರುಗಳನ್ನು ಹೇಗಾದರು ಉಳಿಸಿಕೊಳ್ಳಬೇಕೆಂದು ರಾಣಿಯ ಬಳಿ ಹೋಗಿ ನಡೆದುದನ್ನು ಹೇಳಿದರು. ರಾಣಿ ಅವರ ಕೋರಿಕೆಯನ್ನು ಕೇಳಿ ಹೀಗೆ ಹೇಳಿದಳು: "ನೀವು ಹೇಳುವುದು ನಿಜವಾದರೆ ನಿಮ್ಮ ಆಶ್ರಮಕ್ಕೆ ಬಂದು ನಿಮ್ಮ ಗುರುಗಳ ಕಾಯಿಲೆ ವಾಸಿಪಡಿಸುತ್ತೇನೆ. ಆದರೆ ನನ್ನ ಷರತ್ತಿಗೆ ಒಪ್ಪಿಕೆ ಮಾತ್ರ". ಬಂದಂತಹ ಶಿಷ್ಯರು, "ಏನು ಆ ಮಹಾರಾಣಿಯವರೆ?" ಎಂದು ಕೇಳಿದರು.

ಆದಕ್ಕೆ ರಾಣಿ "ನಿಮ್ಮ ಆಶ್ರಮದಲ್ಲಿ ರಾಜ್ಯದ ಸ… ವಿದ್ಯಾಭ್ಯಾಸ ನೀಡಲು ನಿಮ್ಮ ಗುರುಗಳು ಒಪ್ಪಿಕೆ… ಮಾತ್ರ ನಾನು ಅವರ ಕಾಯಿಲೆಯನ್ನು ಗುಣಪಡಿಸು… ಎಂದು ತನ್ನ ಷರತ್ತನ್ನು ಒಡ್ಡಿದಳು. ಶಿಷ್ಯರಿಗೆ ಈ ನಿರೀಕ್ಷಿತವಾಗಿರಲಿಲ್ಲ, ಆದರೆ ವಿಧಿಯಿಲ್ಲದೆ ರಾಣಿಯ ಕೂಡಲೆ ಒಪ್ಪಿಕೊಂಡರು. ರಾಣಿ ಹೇಳಿದಂತೆ ವಿಷ್ಣು… ಮತ್ತು ಮಹರ್ಷಿಯ ಕಾಯಿಲೆಯನ್ನು ತನ್ನ ಕೈ ಸ್ಪರ್ಶ… ಗುಣಪಡಿಸಿದಳು. ಆಶ್ರಮದಲ್ಲಿ ರಾಜ್ಯದ ಎಲ್ಲ… ವಿದ್ಯಾಭ್ಯಾಸವನ್ನು ನೀಡಲಾಯಿತು. ಆಶ್ರಮದ ರಾಜಕು… ಜೊತೆಗೆ ರಾಜ್ಯದ ಎಲ್ಲಾ ಜನರು ಭೇದ-ಭಾವವಿ… ಭಾಗವತ, ಗೀತ, ಪುರಾಣ, ಸ್ಮೃತಿ, ವೇದ, ಉಪನಿಷತ್… ತಿಳಿದುಕೊಂಡರು. ಧನುರ್ವಿದ್ಯೆ ಮತ್ತು ಸಮರೋ… ಕಲೆಗಳನ್ನು ಸಹ ಕಲಿತರು.

****

ಕೆಲವು ವರ್ಷಗಳ ನಂತರ ಆಶ್ರಮದಲ್ಲಿ… ರಾಜಕುಮಾರರು ಮತ್ತು ರಾಜ್ಯದ ಜನರು ರಾ… ವಿರುದ್ಧ ಯುದ್ಧ ಘೋಷಿಸಿದರು. ರಾಣಿ ಮತ್ತೆ… ಯುದ್ಧಕ್ಕೆ ಸಿದ್ಧಳಾಗತೊಡಗಿದಳು. ಜೊತೆಗೆ ತಾನು … ಎಡವಿದೆ ಎಂಬ ಚಿಂತೆ ಅವಳನ್ನು ಕಾಡತೊಡಗಿ…

■ ಡಾ.ವಿಜಯಕುಮಾರ್ ಎಂ ಬೋ…

ಚಕ್ರಿಯ ದೇಶಭಕ್ತಿ

ಮೊನ್ನೆ ಮೋದಿ ನೋಟ್ ಬ್ಯಾನ್ ಮಾಡಿ 125 ಕೋಟಿ ಭಾರತೀಯರನ್ನು ಬ್ಯಾಂಕ್ ಮತ್ತು ಎಟಿಎಮ್ ಎದುರು ಸಾಲಿನಲ್ಲಿ ನಿಲ್ಲಿಸಿದಾಗ ನಮ್ಮ ಮಹಾನ್ ಪಿಗ್ಮಿ ವಾಗ್ಮಿ ಮತ್ತು ಕನಕ ನಡೆ ಕುಖ್ಯಾತಿಯ ಚಕ್ರಿ ಮೈಥುನ್ ಬೆಂಗಳೂರಿನ ಕೋರಮಂಗಲದಲ್ಲಿ ಬ್ಯಾಂಕಿನೆದುರು ಅಸಹನೆಯಿಂದ ನಿಂತಿದ್ದವರಿಗೆ ಉದಾತ್ತ ಸಂದೇಶ ಕೊಡಲು ನಮ್ಮ ಯೋಧರ ಉಪಮೆಯನ್ನು ಬಳಸಿ "ನಮ್ಮ ವೀರ ಯೋಧರು ದೇಶಕ್ಕಾಗಿ ತಿಂಗಳುಗಟ್ಟಲೆ ನಿಂತುಕೊಂಡು ಗಡಿ ಕಾಯುತ್ತಾರೆ, ಆದರೆ ದೇಶದ ಒಳ್ಳೆಯದಕ್ಕಾಗಿ ನಿಮಗೆ ಒಂದು ದಿನ ಸರತಿಯಲ್ಲಿ ನಿಲ್ಲಲು ಆಗದಿರುವುದು ನಾಚಿಕೆಗೇಡು. ದೇಶದ್ರೋಹ" ಎಂದು ಕಿಚಾಯಿಸಿದ ಮೇಲೆ ಕರ್ನಾಟಕದ ಜನರಿಗೆಲ್ಲಾ ಒಮ್ಮೆಲೇ ಬುದ್ಧಿ ಬಂದು ಈಗ ಎಲ್ಲಾ ಕ್ಷೇತ್ರದವರೂ ಯೋಧರನ್ನು ಅನುಕರಿಸಲು ಪ್ರಯತ್ನಿಸುತ್ತಿದ್ದಾರೆ.

ಇದರ ಸಿಹಿ ಅನುಭವ ಸ್ವತಃ ನಕಲಿ ದೇಶಪ್ರೇಮದ ಜನಕ ಚಕ್ರಿಗೂ ಆಯಿತಂತೆ. ಚಕ್ರಿಯ ಮನೆಯಲ್ಲಿ ಎರಡು ಮೂರು ಗಂಟೆ ಕರೆಂಟ್ ಹೋದಾಗ ಬೆಸ್ಕಾಮ್‌ಗೆ ಫೋನ್ ಮಾಡಿ ತರಾಟೆಗೆ ತೆಗೆದುಕೊಂಡಾಗ ಅವರು ಚಕ್ರಿಗೆ ಕೊಟ್ಟ ಉತ್ತರವೆಂದರೆ "ಅಲ್ಲಿ ಗಡಿಯಲ್ಲಿ ಕೊರೆಯುವ ಚಳಿಯಲ್ಲಿ ಗಾಢ ಕತ್ತಲಲ್ಲಿ ನಮ್ಮ ಯೋಧರು ದೇಶ ಕಾಯುತ್ತಾರೆ. ಸೈನಿಕರು ಕರೆಂಟ್ ಇಲ್ಲ ಎಂದು ಯಾವಾಗಲಾದರೂ ನಿಮ್ಮಂತೆ ಜಗಳಾಡಿದ್ದಾರೆಯೇ? ನಿಮ್ಮಲ್ಲಿ ಕರೆಂಟ್ ಇಲ್ಲವಾಗಲು ದೇಶದ ಗಡಿಯಲ್ಲಿರುವ ಸೈನಿಕರ ಬಗ್ಗೆ ಯೋಚಿಸಿ. ಆಗ ನಿಮಗೆ ನಿಮ್ಮ ಸಮಸ್ಯೆ ಕ್ಷುಲ್ಲಕ ಅನಿಸಿ ದೇಶಭಕ್ತಿಯಿಂದ ಕತ್ತಲೆಗೆ ಅಡ್ಜಸ್ಟ್ ಆಗುತ್ತಿರಾ." ಚಕ್ರಿಗೆ ಈ ಮಾತು ಸರಿಯೆನಿಸಿ ಸುಮ್ಮನಾದ.

ನಂತರ ತನ್ನ ಲ್ಯಾಂಡ್ ಲೈನ್ ಫೋನ್ ಮತ್ತು ಇಂಟರ್ನೆಟ್ ಕಟ್ಟಾಗಿದೆ ಎಂದು ತಿಳಿದಾಗ ಮೊಬೈಲ್‌ನಿಂದ ಬಿಎಸ್ಸೆನ್ನೆಲ್‌ಗೆ ದೂರು ಕೊಟ್ಟು ಈಗಿನ ವೇಗದ ಜೀವನದಲ್ಲಿ ಹಾಗೂ ದೇಶದ ಸೇವೆಯಲ್ಲಿ ಇಂಟರ್ನೆಟ್ಟಿನ ಮಹತ್ವ ಅವರಿಗೆ ವಿವರಿಸಿ ಬೇಗ ಲೈನ್ ಸರಿಮಾಡಲು ಚಕ್ರಿ ಲ್ಯಾಂಡ್ ಫೋನಿನವರಿಗೆ ಜೋರು ಮಾಡಿದ. ಆಗ ಬಿಎಸ್‌ಎನ್‌ಎಲ್‌ನವರು ಕೊಟ್ಟ ಉತ್ತರ: "ಲೋ ಚಕ್ರಿ, ಅಲ್ಲಿ ನಮ್ಮ ಗಡಿ ಕಾಯುವ ಸೈನಿಕರ ಹತ್ತಿರ ಯಾವ ಲ್ಯಾಂಡ್ ಲೈನೂ ಇಲ್ಲ, ಮೊಬೈಲೂ ಇಲ್ಲ, ಇಂಟರ್ನೆಟ್ಟಂತೂ ಇಲ್ಲವೇ ಇಲ್ಲ, ಆ ವೀರ ಯೋಧರು ಈ ಬಗ್ಗೆ ಎಂದಾದರೂ ಕಂಪ್ಲೇಂಟ್ ಕೊಟ್ಟಿದ್ದಾರೆಯೇ? ನಿನಗೆ ಒಂದೆರಡು ಗಂಟೆ ಲ್ಯಾಂಡ್ ಲೈನ್ ಫೋನು ಮತ್ತು ಇಂಟರ್ನೆಟ್ ಇಲ್ಲದಿದ್ದರೆ ನಿನ್ನ ಜೀವ ಹೋಗುತ್ತದೆಯೇ?" ಹೀಗೆ ಚಕ್ರಿಗೆ ಬಿಎಸ್ಸೆನ್ನೆಲ್ ನವರು ಉಲ್ಟಾ ದಬಾಯಿಸಿದರು.

ಚಕ್ರಿಯ ಮನೆಯ ನಲ್ಲಿಯಲ್ಲಿ ನೀರು ಬರುವುದು ಬಂದ್ ಆದಾಗ ಚಕ್ರಿ ಸಂಬಂಧಪಟ್ಟ ಇಲಾಖೆಗೆ ದೂರು ಕೊಟ್ಟಾಗ ಅವರು ಹೇಳಿದ್ದು "ದೇಶದ ಗಡಿಯಲ್ಲಿ ಯೋಧರು ನೀರಿಲ್ಲದೆ ಹಲವಾರು ದಿನ ಸ್ನಾನವನ್ನೇ ಮಾಡುವುದಿಲ್ಲ, ಅವರು ಕಕ್ಕಸಿಗೆ ಟಿಶ್ಯೂ ಪೇಪರ್ ಬಳಸುತ್ತಾರೆ, ನೀನು ಒಂದು ದಿನ ಸ್ನಾನ ಮಾಡದಿದ್ದರೆ, ಟಿಶ್ಯೂ ಪೇಪರ್ ಬಳಸಿದರೆ ಸಾಯುತ್ತೀಯಾ ಚಕ್ರಿ?"

ಚಕ್ರಿಯ ಮನೆಯ ಎದುರಿನ ರಸ್ತೆಯಲ್ಲಿ ಡ್ರೈನೇಜ್ ಓವರ್-ಫ್ಲೋ ಆಗಿ ಭೀಕರ ನಾತ ಬರುತ್ತಿತ್ತು, ಆಗ ಅವನು ನಗರದ ಪೌರ ಕಾರ್ಮಿಕ ವಿಭಾಗಕ್ಕೆ ಫೋನ್ ಮಾಡಿದಾಗ ಅವರು ಹೇಳಿದರು: "ಗಡಿಯಲ್ಲಿ ಯೋಧರು ತಮ್ಮ ಕಾಲಿನಲ್ಲೆ ತಮ್ಮ ಕಕ್ಕಸು ಬಚ್ಚಲು ಗಟಾರು ತಾವೇ ಸ್ವಚ್ಛ ಮಾಡಿಕೊಳ್ಳುತ್ತಾರೆ. ನೀನೂ ಡ್ರೈನೇಜ್ ಮುಚ್ಚಳ ತೆರೆದು ಮ್ಯಾನ್-ಹೋಲ್‌ನಲ್ಲಿ ಒಳಗೆ ಇಳಿದು ಸ್ವಲ್ಪ ವಿಷಗಾಳಿಯು ಸೇವಿಸಿ ಕೊಳಚೆಯಲ್ಲಿ ಉರುಳಾಡಿ ಡ್ರೈನೇಜ್ ಬ್ಲಾಕ್ ಆಗಿರುವುದನ್ನು ಸರಿಪಡಿಸಿದರೆ ಅದು ನಿನ್ನ ದೇಶಸೇವೆ ಮತ್ತು ಇಡೀ ವಠಾರದವರಿಗೆ ಮಾಡುವ ಸಮಾಜ ಸೇವೆ ಆಗುತ್ತದೆ. ಜತೆಗೆ ನಮ್ಮ ಡ್ರೈನೇಜ್ ಸ್ವಚ್ಛ ಮಾಡುವ ಪೌರ ಕಾರ್ಮಿಕರು ಗಡಿ ಕಾಯುವ ಯೋಧರಿಗಿಂತಲೂ ಮಿಗಿಲು ಹಾಗೂ ಯೋಧರಿಗಿಂತಲೂ ಹೆಚ್ಚಿನ ದೇಶಭಕ್ತರು ಎಂದು ನಿನಗೆ ಮನದಟ್ಟಾಗುತ್ತದೆ."

ಚಕ್ರಿಗೆ ಈಗ ಸ್ವಲ್ಪ ಸ್ವಲ್ಪ ಜ್ಞಾನೋದಯವಾಯಿತು. ಡ್ರೈನೇಜಿನಲ್ಲಿ ಇಳಿದು ವಿಷ ಗಾಳಿ ಸೇವಿಸಿ ತಮ್ಮ ಆರೋಗ್ಯ ಹಾಳು ಮಾಡಿಕೊಂಡು ಊರಿನ ಸ್ವಚ್ಛತೆ ಕಾಪಾಡುವ ಪೌರ ಕಾರ್ಮಿಕರೇ ದೇಶದ ನಿಜವಾದ ಯೋಧರು ಎಂಬುದು ಆತನಿಗೆ ಅರ್ಥವಾಯಿತು.


ಕೊನೆಗೆ ಚಕ್ರಿ ಮನೆಗೆ ಬಂದಾಗ ಹೆಂಡತಿ ತರಕಾರಿ ಇಲ್ಲದ ಬರೀ ತೊಗರಿ ಬೇಳೆ-ತೊವ್ವೆ ಊಟ ಬಡಿಸಿದಾಗ "ಇದೇನೇ ಈ ತಣ್ಣಗಾಗಿರುವ ಸಪ್ಪೆ ಊಟ?" ಎಂದು ಚಕ್ರಿ ಸಿಡಿಮಿಡಿಗೊಂಡಾಗ ಅವನ ಹೆಂಡತಿ ಹೇಳಿದಳು "ಅಲ್ಲಿ ಕಾರ್ಗಿಲ್ಲಿನಲ್ಲಿ ನಮ್ಮ ಯೋಧರು ಇಂತಹದ್ದೇ ತಣ್ಣಗಾಗಿರುವ ಸಪ್ಪೆ ಊಟವನ್ನೇ ತಿಂಗಳುಗಟ್ಟಲೇ ಮಾಡುವುದು. ನಿಮಗೇಕೆ ಅದು ಒಂದು ಹೊತ್ತಿಗೂ ಸಾಧ್ಯವಾಗುತ್ತಿಲ್ಲ? ಸುಮ್ಮನೆ ಈಗ ಕೊಟ್ಟಷ್ಟು ಊಟ ಮಾಡಿ ಸಾಕು."

ಆಗ ಚಕ್ರಿಯ ಬೆಳೆದ ಮಗ ಬಂದು ಹೇಳಿದ "ಅಪ್ಪಾ ನಾನು ಮತ್ತು ನನ್ನ ಗೆಳೆಯರು ಮಿಲಿಟರಿ ಸೇರಲು ನಾಳೆ ಬೆಳಗಾವಿಗೆ ಹೋಗುತ್ತಿದ್ದೇವೆ." ಇದನ್ನು ಕೇಳಿ ಚಕ್ರಿಗೆ ಒಮ್ಮೆಲೇ ಶಾಕ್ ಆಯಿತು. "ಅಲ್ಲ ಮಗಾ, ನಾವು ವೈಶ್ಯ ಜಾತಿಯವರು. ನಮ್ಮ ಕುಲವೃತ್ತಿ ವ್ಯಾಪಾರ. ಭಾ… 13 ಲಕ್ಷ ಯೋಧರಲ್ಲಿ ಒಬ್ಬನೇ ಒಬ್ಬ ವೈಶ್ಯ ಅ… ಜೈನ ಯೋಧನಿಲ್ಲ. ನಮ್ಮ ಹಿಂದೂ ಸವರ್ಣೀಯ… ಎಷ್ಟೋ ಪಾಲು ಹೆಚ್ಚು ಮುಸ್ಲಿಂ ಯೋಧರು … ಮಿಲಿಟರಿಯಲ್ಲಿ ಇದ್ದಾರೆ. ಮಿಲಿಟರಿ ಸೇವೆ ಕೇವ… ಜಾತಿಯ ಬಡವರಿಗಾಗಿಯೇ ಇರುವಂತಹದ್ದು … ಬೋಳು ತಲೆ ದಿನೇಶ್ ಮಟ್ಟು ಹೇಳಿಲ್ಲವೇ! … ನೋಡು. ನಾನು ನಿನ್ನ ವಯಸ್ಸಿನವನಾಗಿದ್ದಾಗ ನ… ಮಿಲಿಟರಿ ಸೇರುವ ಅವಕಾಶ ಇತ್ತು. ನನ್ನ ಸ್ನೇಹಿ… ಅನೇಕರು ಮಿಲಿಟರಿ ಸೇರಿದರು.

ಆದರೆ ನಾನು ಮಾತ್ರ ನನ್ನ ಹರಿತ ಕೊಳಕು … ಹಾಗೂ ಪೆನ್ನನ್ನೇ ಆಯುಧ ಮಾಡಿ ಸಮಾಜದಲ್ಲಿ … ಹರಡಿ ದೇಶ ಭಕ್ತಿಯ ಹೆಸರಲ್ಲಿ ಜೀವನ ನಡೆಸುತ್ತಿ… ಪ್ರಗತಿಪರರನ್ನು ಹಾಗೂ ಜಾತ್ಯತೀತರನ್ನು ಸತತ… ಟ್ರೋಲಿಂಗ್ ಮಾಡಿ ಸೋಷಿಯಲ್ ಮೀಡಿಯಾ… ನಾನು ಹೊಲಗೆಡಿಸಿಲ್ಲವೇ. ಹಾಗೆಯೇ ನೀನೂ ಮ… ನಿನಗೆ ಮಾಂಸ-ಮೀನು ತಿನ್ನಬೇಕು ಎಂದು ಆಸೆಯ… ಹೋಗಿ ಮಿಲಿಟರಿ ಹೋಟೆಲಿನಲ್ಲಿ ತಿನ್ನು ಪರವಾ… ಅದಕ್ಕಾಗಿ ಮಿಲಿಟರಿ ಸೇರುವ ಅಗತ್ಯವಿಲ್ಲ" ಎಂದ … ಮಗನಿಗೆ ಬುದ್ಧಿವಾದ ಹೇಳಿ ತನ್ನ ಕೈಯಲ್ಲಿ ಕಟ್ಟಿಕೊ… ಹತ್ತಾರು ಮಂತ್ರಿಸಿದ ದಾರಗಳಲ್ಲಿ ಕೆಲವನ್ನು ಬಿಚ್ಚಿ … ಕೈಗೆ ಕಟ್ಟಿ, ಹೆಂಡತಿಯನ್ನು ಕರೆದು "ಲೇ ಯಾರೋ … ಮಗನಿಗೆ ಮಾಟ ಮಾಡಿ ಸೇನೆ ಸೇರುವಂತೆ ತಲೆ ಕೆಡಿ… ಅದಕ್ಕಾಗಿ ನೀನು ಹತ್ತಾರು ಹಿಂದೂ ದೇವರಿಗೆ … ಹೊತ್ತು ಮಗನ ತಲೆ ಸರಿಯಾಗುವಂತೆ ಹಾಗೂ ಮಿ… ಸೇರುವ ಹಠ ಬಿಡುವಂತೆ ದೇವರಲ್ಲಿ ಬೇಡಿಕೊ" … ಹೇಳಿದನು. ಹೀಗಿದೆ ಚಕ್ರಿ ಚಿಂತನ ಮೈಥುನ … ದೇಶಭಕ್ತ ಚರಿತ್ರೆ.

■ ಜಿ.ರವಿಕಿರಣ, ಮೈಸೂ…





ಹಾಯ್ಕುಗಳು

ಎದ್ದುನಿಂತ ಭಾರತ

ಅಂದು, ಅಂದರು
ಸ್ವಾಮಿ ವಿವೇಕಾನಂದರು,
'ಏಳಿ, ಎದ್ದೇಳಿ ಭಾರತೀಯರೆ';
ಭಾರತೀಯನ
ಒಂದೇಒಂದು
ಬೇರೂ ಕದಲಾಡಲಿಲ್ಲ;

ಇಂದು, ಬಂದೇಬಂದರು
ನರೇಂದ್ರ'ರೂ.'
ಅದೇ ಭಾರತೀಯರು
ತಡಬಡಿಸಿ ಎದ್ದುನಿಂತರು
....ಬ್ಯಾಂಕು, ಪೋಸ್ಟಾಫೀಸು
ಎಟಿಯೆಮ್ಮುಗಳ ಮುಂದೆ!
******

ಚೇಂಜ್

2014
ಹತ್ತು ವರ್ಷಗಳ
ಆಡಳಿತ ಸಾಕೆಂದು
ಭಾರತ 'ಚೇಂಜ್'
ಕೇಳಿತು;
2016
ಎರಡೇಎರಡು
ವರ್ಷಗಳಿಗೆ
ಭಾರತ
ಕ್ಯೂ ನಿಂತು ಮೊರೆಯಿತು
'ಚೇಂಜ್.. ಚೇಂಜ್... ಚೇಂಜ್!'
******

ಪ್ರಕಾಶ

ಭಾರತ ಮತ್ತೆ ಪ್ರಕಾಶಿಸುತ್ತಿದೆ;
ಎಟಿಯೆಮ್ಮುಗಳ ಮುಂದೆ
ಸಾಲುಗಟ್ಟಿದ ಮೊಬೈಲ್‌ಗಳ
ಡಿಸ್‌ಪ್ಲೇಗಳಿಂದ!

ಪಿಳ್ಳಂಗೋವಿ ದೊರೆ



ಅಲ್ಲೊಬ್ಬ ದೊರೆ
ರೋಮು
ಹತ್ತಿ ಉರಿಯಲು
ಬಿಟ್ಟು
ಪಿಟೀಲು
ಕುಯ್ದನಂತೆ;
ಇಲ್ಲೊಬ್ಬ ದೊರೆ
'ಹೋಮು'
ನೋಟಿನ ಬೆಂಕಿಯಲಿ
ಧಗಧಗಿಸುತಿರೆ
ಜಪಾನಿನಲಿ
ಪಿಳ್ಳಂಗೋವಿ
ಊದಿದನಂತೆ!

■ ಗಿರೀಶ್ ತಾಳಿಕಟ್ಟೆ


...ೆ ದೇಶಕ್ಕಾಗಿ ಮರುಕ ಪಡು!

ತಾ ನೇಯದ ಬಟ್ಟೆಯನು ತೊಡುತ್ತಿರುವ
ತಾ ಬೆಳೆಯದ ರೊಟ್ಟಿಯನು ತಿನ್ನುತ್ತಿರುವ
ತಾ ಬೆಳೆಸದಾ ದ್ರಾಕ್ಷಿ ತೋಟಗಳಿಂದ
ಹರಿವ ವೈನನು ಸವಿಯುತ್ತಿರುವ
ಆ ದೇಶಕ್ಕಾಗಿ ಮರುಕ ಪಡು!

ಪೀಡಕನನ್ನೇ ನಾಯಕನೆಂದು ತಿಳಿದಿರುವ
ಮಿನುಗು ಮಾತುಗಳನ್ನಾಡಿ ದೋಚುವ
ಲೂಟಿಕೋರನನೆ ದಾನಶೂರನೆಂದು
ತಿಳಿದಿರುವ
ಆ ದೇಶಕ್ಕಾಗಿ ಮರುಕ ಪಡು!

ಕನಸೊಳಗೆ ಭಾವೋದ್ವೇಗವನು ತಿರಸ್ಕರಿಸಿ
ಎಚ್ಚರೊಳದಕೆ ಶರಣಾಗುವ
ಆ ದೇಶಕ್ಕಾಗಿ ಮರುಕ ಪಡು!
ಶವಯಾತ್ರೆಯೊಂದನ್ನುಳಿದು ಮತ್ತೆಲ್ಲೂ
ಸೊಲ್ಲೆತ್ತದ
ಅಳಿದ ಪಳೆಯುಳಿಕೆಗಳನ್ನುಳಿದು
ಬೇರೇನನ್ನೂ ಹೊಗಳದ
ಬಲಿಗಲ್ಲ ಮೇಲೆ ತನ್ನ ಕೊರಳೇ
ಖಡ್ಗವನ್ನೆದುರಿಸುವ ಆ ಸಮಯವನ್ನುಳಿದು
ಮತ್ತೆಲ್ಲೂ ಪ್ರತಿಭಟಿಸದ
ಆ ದೇಶಕ್ಕಾಗಿ ಮರುಕ ಪಡು!

ಅಲ್ಲಿ ನಾಯಕನೊಬ್ಬ ಗುಳ್ಳೆ ನರಿ
ಗಾರುಡಿಗನೇ ತತ್ತ್ವಜ್ಞಾನಿ



ಮೈದಡವಿ ಸಂತೈಸುವ ಕಲೆಗಾರ
ಆ ದೇಶಕ್ಕಾಗಿ ಮರುಕ ಪಡು!

ಡೊಳ್ಳು ವಾದ್ಯಗಳನ್ನೂದಿ
ಹೊಸ ನಾಯಕನ ಸ್ವಾಗತಿಸುವ
ಜರೆವ ಗದ್ದಲ ಲೇವಡಿಯೊಡನೆ
ಆ ನಾಯಕನ ಬೀಳ್ಕೊಡುವ
ಬರಲಿರುವ ಇನ್ನೊಂದು ದೊರೆಗಾಗಿ
ಮತ್ತೆ ಆ ವಾದ್ಯಗಳನ್ನುಳಿಸುವ
ಆ ದೇಶಕ್ಕಾಗಿ ಮರುಕ ಪಡು!

ಹಿರಿಯರಾದರೋ ಮೂಕರಾಗಿಹರಲ್ಲಿ
ವರುಷವರುಷಗಳಿಂದ
ಯುವಕರಿನ್ನೂ ಮಲಗಿಹರು
ತೊಟ್ಟಿಲಲ್ಲಿ
ಆ ದೇಶಕ್ಕಾಗಿ ಮರುಕ ಪಡು!

ಎಲ್ಲಿ ದೇಶದೊಡಲೊಡೆದು ಚೂರಾಗಿ
ತಾವೇ ದೇಶಗಳೆಂದೆಣಿಸುತ್ತಿಹವೋ
ಆ ದೇಶಕ್ಕಾಗಿ ಮರುಕ ಪಡು!!

ಖಲೀಲ್ ಗಿಬ್ರಾನರ *'Pity that Nation'*
■ ಕನ್ನಡಾನುವಾದ: ಪುನೀತ್ ಅಪ್ಪು

...ಪ್ಪು.. ಬೆಪ್ಪು..!

ಬೆಪ್ಪು ತಕ್ಕಡಿಗೆಲ್ಲಿ ಗೊತ್ತಾಗಬೇಕು
ಕಪ್ಪು ಹಣದ ತಪ್ಪು ಹೆಜ್ಜೆ
ಕೆಪ್ಪ ಕುರುಡರ ಕತೆಯಾಯ್ತೆ
ಸೊಪ್ಪು ಹಾಕದ ನಿರ್ಲಜ್ಜೆ

ಸಾವಿರದ ನೋಟಿಗೂ ಸಾವೇ ಗತಿ
ಎರಡು ಸಾವಿರ ತರಲೂ ಸಾಯೋ ಸ್ಥಿತಿ
ಐನೂರು ಹಿಡಿದು ಐನೂರು ಮಂದಿ
ಸರದಿ ಸಾಲಲ್ಲಿ ಬಡಪಾಯಿ ಮಂದಿ

ಹುಚ್ಚಿದ್ದ ಜನರೆಲ್ಲಾ ಹುಚ್ಚರಾಗಿಹರು
ಬಚ್ಚಿಟ್ಟ ಜನರೆಲ್ಲಾ ಹಾಯಾಗಿ ನಗುತಿಹರು

ಕಪ್ಪುಸಾಗರದಾಚೆ ಕಪ್ಪು ಹಣವೆಲ್ಲಿ..?
ತಪ್ಪು ಮಾಡದ ಜನಕೆ ಶಿಕ್ಷೆ ಬ್ಯಾಂಕಲ್ಲಿ

ಮಗುವೊಂದು ಸತ್ತೋಯ್ತು ಚಿಲ್ಲರೆಯ ಕಾಣದೆ
ನಗುವಲ್ಲೆ ಮರೆತೋಯ್ತು ಚಿಲ್ಲರೆಯ ಮಂದಿಗೆ
ಕಚ್ಚೆ ಹರುಕರ ಕಚ್ಚೆ ಇನ್ನಷ್ಟು ಲೂಸು
ಕನಸ ಕಾಣುವ ನಾವು ಅಲ್ಲವೇ ಲೂಸು..?

ನನ್ನಪ್ಪ ಕೂಡಿಟ್ಟ ರಕ್ತ ಬೆವರಿನ ಹಣಕೆ
ಅನುಮಾನ ಬೇಡ ಅವಮಾನ ಬೇಡ
ಗಣಿಕದ್ದ ಕಳ್ಳರ ಹಡಬಿಟ್ಟಿ ಹಣಕೆ
ಹೆಣವಾಗಬೇಡ ಬಲಿಯಾಗಬೇಡ.

■ ವರದ




ಅರೆಭಾಷೆ ಗೌಡರು ಮತ್ತು ಇತಿಹಾ...

ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಜಿ. ರವಿಕಿರಣ್, ಮೈಸೂರು ಬರೆದ 'ಟಿಪ್ಪುವಿನಿಂದ ಲಾಭ ಪಡೆದವರೇ ಇವತ್ತಿನ ಚೆಡ್ಡಿಗಳು' ಲೇಖನದಲ್ಲಿ ಅರೆಭಾಷೆ ಗೌಡರ ಕುರಿತು ಉಲ್ಲೇಖಿಸಿದ ವಿಷಯಗಳ ಕುರಿತಾಗಿ ಒಂದಿಷ್ಟು ಸ್ಪಷ್ಟೀಕರಣ ಅಗತ್ಯವಿದೆ. ಪಿ. ಲಂಕೇಶ್ ಪರಂಪರೆಯ ನಿಮ್ಮ ಪತ್ರಿಕೆಯ ಬರಹಗಳು ಸತ್ಯಕ್ಕೆ ಬದ್ಧವಾಗಿರುತ್ತವೆ, ಊಹಾಪೋಹಗಳ ಮೇಲೆ ನಿಂತಿರುವುದಿಲ್ಲ ಎಂದು ಖಚಿತವಾಗಿ ನಂಬಿರುವ ದೊಡ್ಡದಾದ ವಿಚಾರವಂತ ಓದುಗ ಬಳಗವೊಂದಿದೆ. ಪತ್ರಿಕೆಯ ಲೇಖನಗಳಲ್ಲಿರುವ ದೋಷಗಳು ಈ ವೈಚಾರಿಕ ಸಮುದಾಯಕ್ಕೆ ತಪ್ಪು ಸಂದೇಶವನ್ನು ನೀಡಕೂಡದು. ಇಂದು ನಾವು ಅತ್ಯಂತ ಸಂದಿಗ್ಧತೆಯ ಸಮಯದಲ್ಲಿದ್ದೇವೆ. ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳುಗಳನ್ನು ಹಬ್ಬಿಸುವ ಜಾಲಗಳು ಕ್ರಿಯಾಶೀಲವಾಗಿವೆ. ಇಂತಹ ಅವಿವೇಕಿಗಳನ್ನು ಟೀಕಿಸುವ ಭರದಲ್ಲಿ ಒಂದಷ್ಟು ಪರ್ಯಾಯ ಸುಳ್ಳುಗಳು ಸಹ ಸೃಷ್ಟಿಯಾಗುತ್ತಿವೆ. ಈ ಬಗ್ಗೆ ಎಚ್ಚರವಿರಬೇಕು. ಈ ಹಿನ್ನೆಲೆಯಲ್ಲಿ ನನ್ನ ಈ ಪತ್ರ.

ಟಿಪ್ಪು ಕೊಡವರನ್ನು ಹತ್ಯೆ ಮಾಡಿ ಕೊಡಗಿನಲ್ಲಿ ಜನವಸತಿ ಕಡಿಮೆಯಾದಾಗ ಸುಳ್ಯ ಬೆಳ್ತಂಗಡಿಗಳಿಂದ ಅರೆಭಾಷೆ ಗೌಡರನ್ನು ಕರೆತಂದು ಅವರನ್ನು ಕೊಡವರ ಕೃಷಿಭೂಮಿಗೆ ಹಚ್ಚಿದ ಎಂಬ ಮಾತಿನಲ್ಲಿ ಒಂದಿಷ್ಟೂ ಸತ್ಯವಿಲ್ಲ. ಕೊಡಗಿನಲ್ಲಿ ನಿರಂತರ ದಂಗೆ ನಡೆಸುತ್ತಿದ್ದ ಕೊಡವರ ವಿರುದ್ಧ ಟಿಪ್ಪು ನಿರ್ದಾಕ್ಷಿಣ್ಯದ ಕ್ರಮ ತೆಗೆದುಕೊಳ್ಳುತ್ತಿದ್ದ ಎನ್ನುವುದು ನಿಜವಾದರೂ, ಆತ ಕೊಡವರನ್ನು ಮಾತ್ರ ಹತ್ಯೆ ಮಾಡಿದ ಎನ್ನುವುದಕ್ಕೆ ಐತಿಹಾಸಿಕ ದಾಖಲೆಗಳು ಲಭ್ಯವಿಲ್ಲ. ಟಿಪ್ಪು ಸೈನ್ಯದಲ್ಲಿಯೂ ಹಿಂದೂ ಕೊಡವರು ಇದ್ದರು ಎಂಬ ಹೇಳಿಕೆ ಆಧಾರರಹಿತ. ಟಿಪ್ಪು ಸುಳ್ಯ ಬೆಳ್ತಂಗಡಿಯಿಂದ ಅರೆಭಾಷೆ ಗೌಡರನ್ನು ಕರೆತಂದ ಬಗ್ಗೆ ಯಾವುದೇ ಪುರಾವೆಗಳಿಲ್ಲ. 1792ರಲ್ಲಿ ಹಾಲೇರಿಯ ದೊಡ್ಡವೀರರಾಜ ಒಡೆಯರ್ ಪಟ್ಟವೇರಿದ ನಂತರ ಅಂದಿನ ಕೆಳಕೊಡಗಿನ (ಈಗಿನ ದಕ್ಷಿಣ ಕನ್ನಡ ಜಿಲ್ಲೆಯ) ಸುಳ್ಯ ಮೊದಲಾದ ಕಡೆಯಿಂದ ಕೆಲವು ಕುಟುಂಬಗಳನ್ನು ಕರೆತಂದು ಅಂದಿನ ಮೇಲ್ಕೊಡಗಿನ (ಈಗಿನ ಕೊಡಗು ಜಿಲ್ಲೆಯ) ಭಾಗಮಂಡಲ ಮೊದಲಾದೆಡೆ ನೆಲೆಗೊಳಿಸಿದ. ಆದರೆ ಅದಕ್ಕಿಂತ ಹಿಂದೆಯೂ ಈ ಭಾಗದಲ್ಲಿ ಗೌಡರು ವಾಸಿಸುತ್ತಿದ್ದರು.

ಇತಿಹಾಸಕಾರರ ಪ್ರಕಾರ ಟಿಪ್ಪು ಬಂಡುಕೋರ ಕೊಡವರನ್ನು ಬಂಧಿಸಿ ಶ್ರೀರಂಗಪಟ್ಟಣಕ್ಕೆ ಸಾಗಿಸಿ ಮತಾಂತರ ಮಾಡಿದ. ಈ ಸಂಖ್ಯೆ ಕೆಲವು ವಿದ್ವಾಂಸರ ಪ್ರಕಾರ ಒಂದು ಲಕ್ಷ ಹನ್ನೊಂದು ಸಾವಿರವಾದರೆ, ಇನ್ನು ಕೆಲವರ ಅಧ್ಯಯನಾತ್ಮಕ ವಿಶ್ಲೇಷಣೆಗೆ ಅನುಗುಣವಾಗಿ ಈ ಸಂಖ್ಯೆ ಕೇವಲ ಕೆಲವು ನೂರು ಮಾತ್ರ. ಆದರೆ ಭಾಗಮಂಡಲ ಸಮೀಪ ದೇವಟ ಪರಂಬು ಎಂಬಲ್ಲಿ 65,000ರಿಂದ 70,000 ಕೊಡವರನ್ನು ಹತ್ಯೆ ಮಾಡಲಾಯಿತು, ಅಷ್ಟೇ ಸಂಖ್ಯೆಯ ಹೆಣ್ಣುಮಕ್ಕಳನ್ನು ಮಾನಭಂಗ ಮಾಡಲಾಯಿತು ಮೊದಲಾದ ಚರಿತ್ರೆಯನ್ನು ಕಳೆದ ಎರಡು ವರ್ಷಗಳಿಂದ ಈಚೆಗೆ ಸೃಷ್ಟಿ ಮಾಡಿರುವುದು ಕೊಡಗಿನ ಪ್ರತ್ಯೇಕತಾವಾದಿ ನಂದಿನೆರವಂಡ ನಾಚಪ್ಪ ಕೊಡವ, ಅಪ್ಪಟ ನಾಟಕಕಾರ ಅಡ್ಡಂಡ ಕಾರ್ಯಪ್ಪ, ಭಾಗಶಃ ಕಾಂಗ್ರೆಸ್ಸಿಗ ಹಾಗೂ ಭಾಗಶಃ ವಕೀಲರಾದ ಬ್ರಿಜೇಶ್ ಕಾಳಪ್ಪ ಮತ್ತು ಕೊಡಗು-ಮೈಸೂರು ಲೋಕಸಭಾ ಕ್ಷೇತ್ರದ ಸಂಸದ ಪ್ರತಾಪ ಸಿಂಹ ಎನ್ನುವ ವಿಘಟನಕಾರಿಗಳು. ಈ ಪೊಳ್ಳು ಇತಿಹಾಸದ ಛಾಯೆ ಜಿ. ರವಿಕಿರಣ್ ಲೇಖನದ ಮೇಲೆ ಇರಬಾರದಿತ್ತು.



ಅರೆಭಾಷೆಯ ಗೌಡರು ಯೋಧ ಜನಾಂಗವಾಗಿರಲಿಲ್ಲ, ಅವರು ಪುಕ್ಕಲರಾಗಿದ್ದರು ಎಂಬ ಜಿ. ರವಿಕಿರಣ್ ಹೇಳಿಕೆ ಬಹಳ ತಮಾಷೆಯಾಗಿದೆ. ನಿಮ್ಮ ಪತ್ರಿಕೆಯ 23.11.2016ರ ಸಂಚಿಕೆಯಲ್ಲಿ 'ಟಿಪ್ಪು ಕಂಡ ಕನಸುಗಳೊಂದಿಗೆ ದುರ್ಗದ ಸ್ವಾಮಿ ಅಪರಂಪಾರ' ಎಂಬ ಲೇಖನ ಪ್ರಕಟಗೊಂಡಿದೆ. ಅದರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆಯುವ 20 ವರ್ಷಗಳ ಹಿಂದೆ ಸುಳ್ಯದಲ್ಲಿ ಆಸ್ಫೋಟಗೊಂಡ ರೈತಹೋರಾಟದ ಬಗ್ಗೆ ಸ್ಥೂಲವಾಗಿ ಹೇಳಲಾಗಿದೆ. ಮಂಗಳೂರು ಮತ್ತು ಕಾಸರಗೋಡು ಪ್ರಾಂತ್ಯಗಳನ್ನು ಬ್ರಿಟಿಷರ ಹಿಡಿತದಿಂದ ಬಿಡಿಸಿ ಎರಡು ವಾರಗಳಷ್ಟು ಕಾಲ ಸ್ವತಂತ್ರಗೊಳಿಸಿದ ಸಂಗ್ರಾಮವಿದು. 1870ರಲ್ಲಿ 'ಕೂರ್ಗ್ ಗೆಜೆಟಿಯರ್' ಪ್ರಕಟಿಸಿದ ರೆವರೆಂಡ್ ಜಿ. ರಿಕ್ಟರ್ ಇದನ್ನು 'ಗೌಡರ ಮೇಲ್ಬೀಳುವಿಕೆ' ('rise of Gaudas' : Low Price Publicationsನ 2008ರ ಆವೃತ್ತಿಯ Coorg Gazetteerನ ಪುಟ ಸಂಖ್ಯೆ 360;) ಎಂದು ಕರೆದ. ಹೋರಾಟದ ಪ್ರಮುಖರಾದ ಕೆದಂಬಾಡಿ ರಾಮಯ್ಯ ಗೌಡರು ಮತ್ತವರ ಇಡೀ ಕುಟುಂಬ, ಗುಡ್ಡೆಮನೆ ತಮ್ಮಯ್ಯ, ಕುಕ್ಕನೂರು ಚೆನ್ನಯ್ಯ ಮೊದಲಾದ ದೇಶಪ್ರೇಮಿ ಗೌಡರು ದೇಶಾಂತರ ಶಿಕ್ಷೆಗೆ ಒಳಗಾದರೆ ಗುಡ್ಡೆಮನೆ ಅಪ್ಪಯ್ಯ ಗೌಡ ಗಲ್ಲು ಶಿಕ್ಷೆಗೆ ಈಡಾಗುತ್ತಾರೆ. ಹಲವಾರು ಅರೆಭಾಷೆ ಗೌಡರಿಗೆ ಜೀವಾವಧಿ ಸಹಿತ ವಿವಿಧ ಅವಧಿಯ ಸೆರೆವಾಸದ ಶಿಕ್ಷೆಯನ್ನು ನೀಡಲಾಗುತ್ತದೆ. ಕೊಡಗಿನ ಸ್ವಾತಂತ್ರ್ಯ ಹೋರಾಟಗಳ ಇತಿಹಾಸದಲ್ಲಿ ಮರಣದಂಡನೆಗೆ ಒಳಗಾದವರು ಕೇವಲ ಇಬ್ಬರು; ಒಬ್ಬಾತ ಗುಡ್ಡೆಮನೆ ಅಪ್ಪಯ್ಯ ಗೌಡ, ಇನ್ನೊಬ್ಬ ಜಂಗಮರ ಪುಟ್ಟಬಸಪ್ಪ. ಇವರುಗಳು ಪುಕ್ಕಲರೆ ಅಥವಾ ಬ್ರಿಟಿಷರಿಗೆ ಮಣೆ ಹಾಕಿದವರು ಪುಕ್ಕಲರೆ ಎಂಬುದನ್ನು ಸ್ಪಷ್ಟಪಡಿಸಬೇಕು. 1837ರ ಸಮಯದಲ್ಲಿ ಬ್ರಿಟಿಷರ ಅಧೀನರಾಗಿ ಅವರಿಗೆ ಹೊಂದಿಕೊಂಡು ಬದುಕಿದ ಹಾಗೂ ಅರೆಭಾಷೆ ಗೌಡರ ಅಪ್ರತಿಮ ಹೋರಾಟವನ್ನು ನಿಗ್ರಹಿಸಲು ಬ್ರಿಟಿಷರಿಗೆ ನೆರವಾದ ಜನಸಮುದಾಯ ಈ ವಿದೇಶಿಯರಿಂದ ಮಾರ್ಷಲ್ ಪರಂಪರೆಯ ಜನ ಎಂದು ಹೊಗಳಿಸಿಕೊಂಡಿತು. ಕೊಡವರ ... ಬರೆಯುವುದು ಈ ಪತ್ರದ ಉದ್ದೇಶವಲ್ಲ, ಆದರೂ ಸತ್ಯವನ್ನು ... ನಿರ್ವಚಿಸುವಾಗ ಅವರ ಕುರಿತಾಗಿ ಹೇಳಲೇಬೇಕಾಗಿದೆ. ದಂಗೆ ... ಸಮಯದಲ್ಲಿ ಕೊಡವರ ಸೈನ್ಯ ಎಷ್ಟು ಕ್ರೌರ್ಯದಿಂದ ನಡೆದುಕೊ... ಎಂಬುದರ ಬಗ್ಗೆ ಇದೇ ಜಿ. ರಿಕ್ಟರ್ ವಿಸ್ತೃತವಾಗಿ ಬರೆದಿದ್ದಾನೆ ... ಮನೆಯ ಶ್ರೀಮಂತಿಕೆಗೆ ಕಾರಣವನ್ನು ಸಹ ಹೇಳಿದ್ದಾನೆ. ಶತ್ರು ... ಗ್ರಾಮಗಳಿಗೆ ನುಗ್ಗುತ್ತಿದ್ದ ಇವರು ಅಲ್ಲಿನ ಮಹಿಳೆಯರು ಧರಿಸಿ... ಆಭರಣಗಳನ್ನು ಕಳಚಿ ತೆಗೆದುಕೊಳ್ಳುವ ವ್ಯವಧಾನವೂ ಇಲ್ಲದೆ ... ಕೈ, ಕಿವಿ, ಮೂಗುಗಳನ್ನು ಕತ್ತರಿಸಿ ಒಡವೆಗಳನ್ನು ದೋಚುತ್ತಿದ್ದ ... ಅಮಾನವೀಯ ವರ್ತನೆಯನ್ನು ರಿಕ್ಟರ್ ವಿವರಿಸಿದ್ದಾನೆ; ಇದನ್ನು ... ಎಂದೇ ಕರೆದಿದ್ದಾನೆ (Coorg Gazetteerನ ಪುಟ ಸಂಖ್ಯೆ ... ವ್ಯವಸ್ಥಿತ ಸೈನ್ಯ ಇರದಿದ್ದ ಕೊಡಗಿನ ರಾಜರ ಆಳ್ವಿಕೆಯಲ್ಲಿ ಈ ... ಜಮ್ಮಾರೈತರು ಇತರ ಅನೇಕ ಕೆಲಸಗಳ ಜೊತೆಗೆ ಮಿಲಿಟರಿ ... ಸಹ ಮಾಡುತ್ತಿದ್ದರು. ಕೊಡಗಿನ ರಾಜನ ಸೈನ್ಯ ನೆರೆರಾಜ್ಯದ ಗ್ರಾ... ಮುತ್ತಿಗೆ ಹಾಕಿ ಸಂಪತ್ತನ್ನು ಸೂರೆ ಮಾಡುವಾಗ, ರಾಜ ಮತ್ತು ... ಸೈನಿಕರು ದೋಚುವಿಕೆಯನ್ನು ಸಮನಾಗಿ ಹಂಚಿಕೊಳ್ಳುತ್ತಿದ್ದರು ... Gazetteerನ ಪುಟ ಸಂಖ್ಯೆ 252). ಆ ಸಂಪತ್ತಿನಲ್ಲಿ ಅಲ್ಲಿನ ... ಹೆಂಗಸರು ಮತ್ತು ಮಕ್ಕಳು ಕೂಡ ಇರುತ್ತಿದ್ದರು ಎಂದು ಬೇ... ಹೇಳಬೇಕಿಲ್ಲ. ಕೊಡವರು ರಾಜನಿಷ್ಠೆ ತೋರಿಸುತ್ತಿದ್ದುದಕ್ಕೆ ದೊಡ್ಡವೀರರಾಜ ಹೈದರ್‌ನ ಬಂಧಿಯಾಗಿದ್ದ ಸಮಯ ಕೊಡ... ಅರಾಜಕತೆಯನ್ನು ಅತ್ಯಂತ ಆಪ್ತತೆಯಿಂದ ಅನುಭವಿಸುತ್ತಿದ್ದುದು ... ಟಿಪ್ಪೂ ವಿರುದ್ಧ ದಂಗೆ ಏಳುತ್ತಿದ್ದುದಕ್ಕೆ ಇದೇ ನಿಜವಾದ ಕಾರ... ಹಿರಿಯರ ತಪ್ಪುಗಳಿಗಾಗಿ ಇಂದಿನ ಪೀಳಿಗೆಯ ಕೊಡವರನ್ನು ... ಸ್ಥಾನದಲ್ಲಿ ನಿಲ್ಲಿಸುವುದು ತಪ್ಪೆಂದು ನನಗೆ ಅರಿವಿದೆ, ಆದರೆ ಜಿ. ರವಿಕಿರಣ್ ಲೇಖನ ಅಂದಿನ ಕಾಲಘಟ್ಟದ ವಿವರಗಳನ್ನು ತುಲನಾತ್ಮಕವಾಗಿ ನೋಡುವ ಪ್ರಯತ್ನ ಮಾಡಿದ್ದರಿಂದ ಇದಿಷ್ಟು ... ಹೇಳಬೇಕಾಯಿತು.

ಇಂದು ಅರೆಭಾಷೆ ಗೌಡರು ಸಂಘಪರಿವಾರದ ಕಾಲಾಳುಗ... ಪರಿವರ್ತಿತವಾಗಿರುವುದರ ಹಿಂದಿನ ಕಾರಣಗಳನ್ನು ಹುಡುಕಬೇ... ಅಗತ್ಯವಿದೆ. ಡಿ. ದೇವರಾಜ ಅರಸರು ಹೊಸ ಭೂಸುಧಾರಣೆ ... ಅನುಷ್ಠಾನಕ್ಕೆ ತಂದು ಉಳುವವನೇ ಹೊಲದೊಡೆಯನಾದಾಗ ... ಅನುಕೂಲ ಹೊಂದಿದ ಎರಡು ಮುಖ್ಯ ಸಮುದಾಯಗಳೆಂದ... ಅರೆಭಾಷೆ/ತುಳು ಗೌಡರು ಮತ್ತು ತುಳು ಬಿಲ್ಲವರು.

ಬಹುತೇಕ ಸಣ್ಣಪುಟ್ಟ ಹಿಡುವಳಿದಾರರಾಗಿದ್ದ ಗೌಡರು ಜಮೀನ್ದಾರಶಾಹಿ ಶಕ್ತಿಗಳ ಆಟೋಟೋಪದ ನಡುವೆ ಒಂದಷ್ಟು ... ಚಿಗಿತುಗೊಂಡದ್ದು ಇದೇ ಹೊತ್ತಲ್ಲಿ. ಕೃತಜ್ಞರಾಗಿದ್ದ ಈ ಜನ ... ಕಾಂಗ್ರೆಸ್‌ನ ಮತಬ್ಯಾಂಕ್‌ಗಳಾದರು. ಆದರೇನು ಆ ಪಕ್ಷದಲ್ಲಿ ... ಸೂಕ್ತ ಸ್ಥಾನಮಾನ ಸಿಕ್ಕಲಿಲ್ಲ, ಬಿಲ್ಲವರಿಗೆ ಒಂದಿಷ್ಟು ಸಿಕ್ಕರೂ, ... ತಲೆಮಾರಿಗೆ ನಾಯಕತ್ವ ದಕ್ಕದಿರಲು ಹಳೆತಲೆಗಳೇ ಅಡ್ಡಿಯಾದ... ನಿಧಾನವಾಗಿ ಗೌಡರನ್ನು ಮತ್ತು ಬಿಲ್ಲವರನ್ನು ಪ್ರತಿಗಾಮಿ ಬಲ... ಮತೀಯವಾದಿಗಳು ಸೆಳೆದುಕೊಳ್ಳುವಲ್ಲಿ ಯಶಸ್ಸನ್ನು ಪಡೆದರು ... ಸದಾನಂದ ಗೌಡ, ಡಿ.ಎಸ್. ಮಾದಪ್ಪ, ಕೆ.ಜಿ. ಬೋಪಯ್ಯ, ಶೋ...

ಕನ್ನಡ ಭಾಷೆ ಮತ್ತು ಗ್ರಂಥಾಲಯಗಳು

ಕರ್ನಾಟಕ ರಾಜ್ಯೋತ್ಸವವನ್ನು ಕಳೆದ ಅರವತ್ತು ವರ್ಷಗಳಿಂದಲೂ ಆಚರಿಸುತ್ತಾ ಬರುತ್ತಿದ್ದೇವೆ. ನವೆಂಬರ್ ತಿಂಗಳು ಪೂರ್ತಿ ಕನ್ನಡ ಭಾಷೆಯ ಚರಿತ್ರೆಯ ಕುರಿತು, ಕನ್ನಡ ಸಾಹಿತ್ಯದ ಕುರಿತು ಬೇಕಾದಷ್ಟು ಭಾಷಣಗಳನ್ನು ಕೇಳುತ್ತಾ ಲೇಖನಗಳನ್ನು ಓದುತ್ತಾ ಇರುತ್ತೇವೆ. ಆದರೂ ಕನ್ನಡ ಭಾಷೆ ಸೊರಗುತ್ತಲೇ ಇದೆ. ಪ್ರಾರಂಭದಲ್ಲಿ ಹಿಂದಿ ಭಾಷೆಯಿಂದಾಗಿ ಕನ್ನಡ ಸೊರಗತೊಡಗಿತು. ಆ ಬಳಿಕ ಇಂಗ್ಲಿಷ್ ಭಾಷೆ ಕನ್ನಡದ ಬೆಳವಣಿಗೆಯನ್ನು ತಡೆಯತೊಡಗಿತು. ಈಗಂತೂ ಪ್ರತೀ ಭಾಷೆಗೂ ಒಂದೊಂದು ಅಕಾಡೆಮಿ ಇದ್ದು ಕನ್ನಡ ಭಾಷೆ ಮೂಲೆಸೇರುವಂತಾಗಿದೆ. ಎಲ್ಲ ಭಾಷೆಗಳೂ ಲಿಪಿಗಾಗಿ ಕನ್ನಡವನ್ನೇ ಆಶ್ರಯಿಸಿರುವುದರಿಂದ ಕನ್ನಡ ಉಳಿವಿಗೆ ಈ ಲಿಪಿ ಸಹಕಾರಿಯಾಗಿರಬಹುದು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಮಾರಂಭದಲ್ಲಿ ಎಲ್. ಹನುಮಂತಯ್ಯ ಅವರು ಭಾಷಣ ಮಾಡುತ್ತ 'ಈಗ ಕಾದಂಬರಿ ಬರುವುದು ಕಮ್ಮಿಯಾಗಿದೆ' ಎಂದರು. ಅಕಾಡೆಮಿಯ ಅಧ್ಯಕ್ಷರೂ ಕೂಡಾ, ಈಗ ಮಕ್ಕಳ ಸಾಹಿತ್ಯ, ನಾಟಕಗಳ ಸಂಖ್ಯೆಯೂ ಕಮ್ಮಿಯಾಗುತ್ತಿವೆ ಎಂದರು. ಅಂದರೆ ಸಾಹಿತ್ಯ ಕೃತಿಗಳ ರಚನೆಯೇ ಕಮ್ಮಿಯಾಗಿವೆ. ಈ ಪರಿಸ್ಥಿತಿಗೆ ಕಾರಣವನ್ನು ಹುಡುಕಬೇಕಾದ ಅಗತ್ಯವೇನೂ ಇಲ್ಲ. ಮೊತ್ತಮೊದಲಾಗಿ ವಿದ್ಯಾರ್ಥಿಗಳು ಹಾಗೂ ಯುವಜನರು ಸಾಹಿತ್ಯ ಕೃತಿಗಳ ಓದಿನಿಂದ ದೂರ ಸರಿದಿದ್ದಾರೆ. ಎಂಟನೇ ತರಗತಿಗೆ ಬಂದರೂ ವಿದ್ಯಾರ್ಥಿಗಳಿಗೆ ಹಲವು ಭಾಷೆಗಳ ಒತ್ತಡದಿಂದಾಗಿ ಸಮನಾಗಿ ಕನ್ನಡ ಓದಲು ಬರುವುದಿಲ್ಲ! ಜನರು ಓದಿನಿಂದ ದೂರ ಸರಿದಾಗಿ ಪುಸ್ತಕದಂಗಡಿಗಳೂ ಲೇಖಕರಿಂದ ಪುಸ್ತಕ ತರಿಸಿಕೊಳ್ಳುವುದಿಲ್ಲ, ಪುಸ್ತಕದಂಗಡಿಗಳಲ್ಲಿ ಸಾಹಿತ್ಯ ಕೃತಿಗಳ ಮಾರಾಟವೇ ಸ್ಥಗಿತಗೊಂಡಂತಾಗಿದೆ. ಪುಸ್ತಕ ಕೊಂಡುಕೊಂಡು ಓದುವವರಿಲ್ಲವಾದರೆ ನಾವು ಯಾರಿಗಾಗಿ, ಯಾಕಾಗಿ ಬರೆಯಬೇಕು?

ಕರ್ನಾಟಕದಲ್ಲಿ, ಎಲ್ಲ ರಾಜ್ಯಗಳಲ್ಲಿಯೂ ಇರುವಂತೆ ಒಂದು ಸಾರ್ವಜನಿಕ ಗ್ರಂಥಾಲಯ ಇಲಾಖೆ ಇದೆ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಕರ್ನಾಟಕದಲ್ಲಿ ಒಂದು ವರ್ಷದಲ್ಲಿ ಸುಮಾರು ಆರೇಳು ಸಾವಿರ ಕೃತಿಗಳು ಪ್ರಕಟವಾಗುತ್ತವೆ ಎನ್ನಲಾಗುತ್ತಿತ್ತು. ಲೇಖಕರು ಹಾಗೂ ಪ್ರಕಾಶಕರಿಂದ ಗ್ರಂಥಗಳ ಸಗಟು ಖರೀದಿಗಾಗಿ ಸರ್ಕಾರ ಈ ಇಲಾಖೆಗೆ ಐದು ಕೋಟಿ ರೂಪಾಯಿಗಳ ಅನುದಾನ ನೀಡುತ್ತಿದೆ. ಈ ಅನುದಾನ ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಪ್ರಾರಂಭವಾ... ಪುಸ್ತಕಗಳನ್ನು ಆಯ್ಕೆ ಮಾಡಲು ಸರ್ಕಾರವೇ ಆಯ್ಕೆ ಸಮಿ... ನಿಯಮಿಸುತ್ತಿದೆ. ಆದರೆ 2010 ರಿಂದಲೇ ಈ ಇಲಾಖೆಯ ಗ್ರಂ... ಸಮನಾಗಿ ಖರೀದಿಸುವಲ್ಲಿ ಎಡವತೊಡಗಿತು. ಹಿಂದಿನ ಆಯ್ಕೆ ... ಅವಧಿ ಮುಗಿದು ಹೊಸ ಆಯ್ಕೆ ಸಮಿತಿ ಆಸ್ತಿತ್ವಕ್ಕೆ ಬರುವಾಗ ... ಕೊನೆಯಾಯಿತು. ಆಗ ಬಿಜೆಪಿ ಸರ್ಕಾರ ಆಳುತ್ತಿತ್ತು. ಈ ಸಮಿತಿ ... ಕೃತಿಗಳನ್ನು ಆಯ್ಕೆ ಮಾಡಲಾರಂಭಿಸಿದಾಗ ಇಲಾಖೆ 2010 ... ಖರೀದಿಗೆ ಆರಂಭಿಸಿತು. 2012 ರಲ್ಲಿ ಕೂಡಾ ಬೆಂಗಳೂರು ನ... ಗ್ರಂಥಾಲಯಗಳಲ್ಲಿ 2012 ರ ಕೃತಿಗಳನ್ನು ತರಿಸಿಕೊಳ್ಳುವಿ... ವಿಚಾರಿಸಿದಾಗ 'ನಾವಿನ್ನೂ 2010 ಕೃತಿಗಳನ್ನು ತರಿಸಿಕೊಳ್ಳುತ್ತಿದ್ದೇವೆ ... 2012 ರವರೆಗೆ ಸಮಯವಿದೆ. ನಾವು ಗ್ರಂಥ ಖರೀದಿಯಲ್ಲಿ ಒ... ಹಿಂದಿದ್ದೇವೆ" ಎನ್ನುತ್ತಿದ್ದರು. 2010 ರ ಆಯ್ಕೆ ಸಮಿತಿ ಆ... ವಿಳಂಬವೇ ಈ ಅವ್ಯವಸ್ಥೆಗೆ ಕಾರಣವಾಗಿತ್ತು.

ಈಗಂತೂ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಇಲಾಖೆ ... ಖರೀದಿಯನ್ನೇ ಸ್ಥಗಿತಗೊಳಿಸಿದೆ. "ಸರ್ಕಾರದಿಂದ ಮುಂದಿ... ಬರುವವರೆಗೆ ಯಾವ ಗ್ರಂಥಾಲಯಗಳೂ ಗ್ರಂಥಗಳನ್ನು ಖರೀ... ಎಂದು ಸರ್ಕಾರ ಎಲ್ಲ ಗ್ರಂಥಾಲಯಗಳಿಗೂ ಸುತ್ತೋಲೆ ಕಳುಹಿಸಿದೆ ... ಈ ಆಜ್ಞೆಗೆ ಏನು ಕಾರಣವೆಂದು ಗೊತ್ತಾಗಿಲ್ಲ. 2013 ರ ... ಸಗಟು ಖರೀದಿ ಮಾಡಿದ ಸಾರ್ವಜನಿಕ ಗ್ರಂಥಾಲಯ ಈವ... ಪಾವತಿಸಿಲ್ಲ. ಬೆಂಗಳೂರಿನಲ್ಲಿ ಮಹಾನಗರ ಪಾಲಿಕೆಯ ಐದು ಗ್ರಂಥಾ... 2013 ರ ಗ್ರಂಥಗಳನ್ನು ಖರೀದಿಸುವಿರಾ ಎಂದು ಇವರಲ್ಲಿ ... "ನಾವಿನ್ನೂ 2012 ಗ್ರಂಥಗಳನ್ನೇ ಖರೀದಿಸುತ್ತಿದ್ದೇವೆ. ಈ ವರ್ಷ... ವವರೆಗೆ ಅವುಗಳನ್ನು ಖರೀದಿಸಲು ಸಮಯವಿದೆ. ಈಗಂತೂ ಸ... ಇಂತಹ ಸುತ್ತೋಲೆ ಬಂದಿರುವುದರಿಂದ ಗ್ರಂಥಗಳ ಖರೀದಿಯನ್ನು ... ಲಾಗಿದೆ" ಎಂಬ ಉತ್ತರ ಬಂತು. ಒಂದು ಪ್ರಕಾಶನ ಸಂಸ್ಥೆಗೆ ಅಥ... ಲೇಖಕರಿಗೆ ಒಂದು ಲಕ್ಷ ರೂಪಾಯಿಗಳ ಮಿತಿ ಇದೆ. ಆ... ಪ್ರಕಾಶನ ಸಂಸ್ಥೆಗಳು ಬೇನಾಮಿ ಹೆಸರಿನಲ್ಲಿ ಹತ್ತಿಪ್ಪತ್ತು ಕೃತಿಗಳ...



ರಡದ ಹೊಸ ತಲೆಮಾರಿನ ಗೌಡರಿಗೆ
ನಾಯಕತ್ವ ದೊರಕಿತು. ಕಾಂಗ್ರೆಸ್ ಇದೀ
ವನ್ನೆ ಕಳೆದುಕೊಂಡಿತು. ಜಾತ್ಯತೀತವಾದಿ
ಬಿಗೂ ಈ ಪರಿವರ್ತನೆಯ ಹರಿವನ್ನು
ಕೊಳ್ಳುವಲ್ಲಿ, ಗಂಭೀರವಾಗಿ
ಲ್ಲಿ ವಿಫಲವಾಗಿವೆ. ಇವರುಗಳ
ಬಿ.ಜೆ.ಪಿ. ಸಮರ್ಥವಾಗಿ
ದೆ. ಮಂಗಳೂರು-ಕೊಡಗು ಹಿಂದೂತ್ವದ
ಲೆಯಾಗುವ ಹಂತದಲ್ಲಿ ಅರೆಭಾಷೆ
ರಕೆಯ ಕುರಿಗಳಾಗಿದ್ದಾರೆ. ಕೋಮು
ವಾಯ ವೈದಿಕ ಮುತ್ಸದ್ದಿಗಳ
ಾಗುವುದು, ನ್ಯಾಯಾಲಯಗಳ ಮುಂದೆ
ವುದು ಮತ್ತು ಲಾಕಪ್, ಜೈಲುಗಳಲ್ಲಿ
ವುದು ಹೆಮ್ಮೆಯ ಪ್ರತೀಕವಾಗಿದೆ. ಕಳೆದ
ಚುನಾವಣೆಯಲ್ಲಿ ಭ್ರಷ್ಟಾಚಾರದ
ಲ್ಲಿ ಬಿ.ಜೆ.ಪಿ. ವಿರೋಧಿ ಅಲೆ ಎಲ್ಲೆಡೆ
ದಕ್ಷಿಣ ಕನ್ನಡದಾದ್ಯಂತ ಸೋಲು ಕಂಡರೂ
ಲ್ಪದ ಸುಳ್ಯ, ಮಡಿಕೇರಿ, ವಿರಾಜಪೇಟೆ
ಬಿ.ಜೆ.ಪಿ. ಗೆಲುವು ದಕ್ಕಿಸಿಕೊಂಡರೆ,
ಲ್ಲಿ ಅಲ್ಪ ಮತದಿಂದ ಸೋತಿತಷ್ಟೆ. ಈ
ಸ್ಥಿತಿಯ ಬಗ್ಗೆ ಇನ್ನಷ್ಟು ಗಾಢವಾದ
ಅಗತ್ಯವಿದೆ.

ೊಮ್ಮೆ ನಿಮ್ಮ ಪತ್ರಿಕೆಯ ರಾ.
ಖರವರು ಅರೆಭಾಷೆ ಗೌಡರ ಬಗ್ಗೆ ಅಗ್ಗದ
ಬಳಸಿದ್ದರು. ಆಗ ಪತ್ರಿಕೆಯ ಪಾರದರ್ಶಕ
ಗಮನದಲ್ಲಿಟ್ಟುಕೊಂಡು, ಆ ಹೇಳಿಕೆ
ಹದ ಅನ್ನಿಸಿಕೆ ಆಗಿರಲಾರದು,
ದ ತಪ್ಪು ಆಗಿರಬಹುದು, ಪ್ರತಿಕ್ರಿಯೆ
ಬೇಡ ಎಂದು ಸುಮ್ಮನಿದ್ದೆವು.

ರ ಅಮರಸುಳ್ಯ ಕ್ರಾಂತಿಯ ನಂತರ
ದ ವಿಚಾರಣೆ ಮತ್ತು ಹೋರಾಟಗಾರರಿಗೆ
ತ್ತಿದ್ದ ಶಿಕ್ಷೆಯ ಬಗ್ಗೆ ಇಂಗ್ಲಿಷ್ ಅಧಿಕಾರಿ
ಬ್ರೌನ್ ಹೇಳುವಾಗ ಆತ ಇದೇ ಗೌಡರ
"ಇವರಂತಹ ಶಾಂತಿಪ್ರಿಯ, ಸಹನಶೀಲ,
ಗೆ ಹೊಂದಿ ಬದುಕುವ ಕೃಷಿಕ
ಯ ಇನ್ನೊಂದನ್ನು ನೋಡಿಲ್ಲ" ಎನ್ನುತ್ತಾನೆ.
s to and from the
nment of Madras: Relative to
sturbances -By Francis
c Brown ಪುಟ ಸಂಖ್ಯೆ 120 ? 121).
ಶೌರ್ಯವೆಂದೂ, ಒಳ್ಳೆಯತನವನ್ನು
ನವೆಂದೂ ಕರೆಯುವಾಗ ನಾವು ವ್ಯಕ್ತಿಗತ
ದ ಬದುಕುವ ಆಯ್ಕೆಯನ್ನು ಮಾತ್ರ
ಳುತ್ತೇವೆ; ಅದನ್ನು ಏನೆಂದು ಬೇಕಿದ್ದರೂ

■ ರಾಮಕೃಷ್ಣ ಹೊಸಮನೆ
ಷ್ಣ್ಯಾ, ಸುಳ್ಯ ತಾಲೂಕು, ದಕ್ಷಿಣ ಕನ್ನಡ ಜಿಲ್ಲೆ

ಗಳಿಗೆ ಸರಬರಾಜು ಮಾಡಲಾಗುತ್ತಿದೆ ಎನ್ನಲಾಗು
ರದ ಅನುದಾನದ ದುರ್ಬಳಕೆ ತಡೆಯಲು ಸರ್ಕಾರ
ತ್ತೋಲೆ ಕಳುಹಿಸಿರಬಹುದೆನ್ನಲಾಗುತ್ತಿದೆ.
ಚೆಗೆ ಓರ್ವರು ತಮ್ಮ ಕೃತಿಯ ಬಿಡುಗಡೆ
ದಲ್ಲಿ ಭಾಷಣ ಮಾಡುತ್ತ "ನನ್ನ ಈ ಕೃತಿಯನ್ನು
ಯ ಇಲಾಖೆಯ ಆಯ್ಕೆ ಸಮಿತಿ ಆಯ್ಕೆ ಮಾಡಿದೆ.
ದ ಎಲ್ಲರೂ ಈ ಕೃತಿ ಖರೀದಿಸಬಹುದು"
ಗ್ರಂಥಗಳ ಖರೀದಿಯೇ ಇಲ್ಲದಿರುವಾಗ, 2014
2015 ರ ಕೃತಿಗಳ ಆಯ್ಕೆಯೇ ಆಗದಿರುವಾಗ
ಕೃತಿಯ ಆಯ್ಕೆ ಹೇಗಾಯಿತು? ಇದು ನನಗೆ
ಲ್ಲ ಗ್ರಂಥಾಲಯದ ಈ ಎಲ್ಲ ಅವ್ಯವಸ್ಥೆಗೆ ಸರ್ಕಾರ
ನೀಡದಿರುವುದು ಕಾರಣವೇ? ಅಥವಾ ಇನ್ನು
ಗ್ರಂಥಾಲಯಗಳ ಅಗತ್ಯವಿಲ್ಲ ಎಂದೇನಾದರೂ
ನಿರ್ಧರಿಸಿದೆಯೇ? ಸಾಹಿತ್ಯ ಕೃತಿಗಳ ಓದಿನಿಂದ
ಯುತ್ತಿರುವವರನ್ನು ಸಾಹಿತ್ಯ ಕೃತಿಗಳ ಬಳಿಗೆ
ಬೇಕಾದುದು ಸರ್ಕಾರದ ಕರ್ತವ್ಯವಾಗಬೇಕು.
ಕೃತಿಗಳ ರಚನೆ, ಬರಹ, ಓದು, ಪುಸ್ತಕಗಳ
ತಡೆ ಇಲ್ಲದೆ ನಡೆದರೆ ಮಾತ್ರ ಒಂದು ಭಾಷೆಗೆ
ಉತ್ತದೆ. ಕನ್ನಡ ಭಾಷೆಯ ಭವಿಷ್ಯ ಈಗಾಗಲೇ
ದಂತೆ ಕಾಣುತ್ತಿದೆ. ಕನ್ನಡ ಭಾಷೆಯಲ್ಲೇ ಬೆಳೆದು
ವರು ನಾವು. ಈ ಭಾಷೆಯ ಉಳಿವು ಮತ್ತು
ಗಾಗಿ ನಮ್ಮ ಯುವ ಜನರು ಶ್ರಮಿಸಬೇಕು.
ಕೃತಿಗಳ ಓದಿನಿಂದ ಮಾತ್ರ ನಾವು ಮಾನವೀಯತೆ
ಕೋಮು ಸೌಹಾರ್ದವನ್ನು ಮೈಗೂಡಿಸಿಕೊಂಡು
ಾಗಿ ಬದುಕಲು ಸಾಧ್ಯ ಎಂಬುದನ್ನು ನಮ್ಮ
ತಲೆಮಾರುಗಳಿಗೆ ಮನಗಾಣಿಸಿಕೊಡಬೇಕು.

■ ಸಾರಾ ಅಬೂಬಕ್ಕರ್

ವಾಟರ್ ವಾಟರ್ ಎವ್ವೆರಿವೇರ್

Water water every where but not a drop of water to drink ಅನ್ನುವ ಮಾತನ್ನು ಕೇಳಿರಬಹುದು. ಯಾರೋ ಸಮುದ್ರದ ನಡುವೆ ಸಿಗಾಕಿಕೊಂಡು ಕುಡಿಯಲು ನೀರಿಲ್ಲದೆ, ಬಾಯಾರಿ ಬೆಂಡಾಗಿ ಹಿಂಗೆ ಹಲುಬಿರಬಹುದು. ಹಂಗಾಗಿ ಕುಂತದಂತೆ ಭಾರತೀಯ ನಾಗರಿಕರ ಪರಿಸ್ಥಿತಿ. ಮೋದಿಜೀ ಹಿಂಗ್ಮಾಡ್ತೀನಿ ಅನ್ನೋ ಕುರುಹನ್ನೂ ಕೊಡದೆ ಏಕ್‌ದಂ ಐನೂರು, ಸಾವಿರ ರೂಪಾಯಿ ನೋಟುಗಳ ಚಲಾವಣೆಯನ್ನು ರದ್ದುಗೊಳಿಸಿದರಲ್ಲಾ, ಆ ಹೊತ್ತಿನಿಂದ ಹಿಂಗಾಗಿದೆಯಂತೆ. ಇದು ಸ್ಟಾರ್ವಿಂಗ್ ಪ್ರಾಬ್ಲಮ್ಮು ಅಷ್ಟೇಯ. ಸಮುದ್ರದ ನಡುವೆ ನಿಂತ್ಕಂಡ್ ಕುಡಿಯೋಕೆ ನೀರಿಲ್ವೋ ಅಂತ ಬೊಂಬ್ಡ ಬಜಾಯಿಸಿದ್ರೂ ಸಮುದ್ರದ ನೀರು ಎಂಬುವ ನೀರು ಬಿಸಿಲಿನ ಶಾಖಕ್ಕೆ ಆವಿಯಾಗಿ ಸಿಹಿ ನೀರನ್ನು ಸುರಿಸಿ ಸಮೃದ್ಧಿ ತರುತ್ತಲ್ಲಾ ಹಾಗೇನೇ ಇದೂವೆ ಮಾಡುತ್ತೆ ಅನ್ನುತ್ತಾರೆ ಮೋದಿ ಭಕ್ತರು. ಅವರು ಹೇಳುತ್ತಿರೋದು ನಿಜ. ಮಳೆ ಎಲ್ಲಾ ಕಡೇನೂ ಸಮನಾಗಿ ಬೀಳುವುದಿಲ್ಲ ಅಲ್ವಾ. ಒಂದು ಕಡೆ ಸುರಿದು ಹಾಳು ಮಾಡಿದರೆ ಇನ್ನೊಂದು ಕಡೆ ಸುರೀದೆ ಹಾಳು ಮಾಡುತ್ತೆ, ಕೆಲವು ಕಡೆ ಹದವಾಗಿ ಮಳೆ ಸುರಿದು ಜನರಿಗೆ ನೆಮ್ಮದಿ ತರುತ್ತೆ. ಹಂಗೇ ಮೋದಿ ಪ್ಲಾನೂ ಅದೆ. ಅವರಿಗೆ ಆಪ್ತರಾದವರಿಗೆ ಮೋದಿ ಮೊದಲೇ ವಿಷಯ ತಿಳಿಸಿದ್ದರು. ಅವರೆಲ್ಲ ನೋಟು ರದ್ಧತಿ ದುಷ್ಪರಿಣಾಮದಿಂದ ಹೊರಗೆ ಉಳಿದಿದ್ದಾರೆ ಎಂದು ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ತರಹದವರು ಟಾಂಗ್ ಕೊಡ್ತಿದಾರೆ. ಈ ವರ್ಷದ ಜುಲೈನಿಂದ ಸೆಪ್ಟೆಂಬರ್ ತಿಂಗಳವರೆಗೆ ದಿಢೀರನೆ ಬ್ಯಾಂಕುಗಳಲ್ಲಿ ಏರಿದ ಹಣ ಸಂಗ್ರಹಣೆ ಇದಕ್ಕೆ ಸಾಕ್ಷಿ ಅಂತಾರೆ. ಇದಕ್ಕೆ ಪೂರಕ ಎಂಬಂತೆ ಪಶ್ಚಿಮ ಬಂಗಾಳದ ಕಮ್ಯುನಿಸ್ಟ್ ಪಕ್ಷ ಅಲ್ಲಿನ ಭಾಜಪಕ್ಕೆ ಪ್ರಭಾವನೇ ಇಲ್ಲ, ಆದರೂ ಅದು ಎಂಟನೇ ತಾರೀಖು ಮಧ್ಯಾಹ್ನವೇ ಒಂದು ಕೋಟಿ ರೂಪಾಯಿಯನ್ನು ಬ್ಯಾಂಕಿಗೆ ಜಮಾ ಮಾಡಿದೆ. ಒಂದರಿಂದ ಎಂಟನೇ ತಾರೀಖಿನವರೆಗೆ ಸುಮಾರು ಮೂರು ಕೋಟಿ ರೂಪಾಯಿಗಳನ್ನು ಜಮಾ ಮಾಡಿದೆ. ಇದೇರೀತಿ ಅದು ಈ ಮೊದಲೂ ಮಾಡಿದ್ದರೆ ನೂರಾರು ಕೋಟಿ ರೂಪಾಯಿಗಳು ಜಮಾ ಆಗಿರಬೇಕು. ಈಗ ಮಾತ್ರ ಹೀಗೆ ಮಾಡಲು ನೋಟುಗಳ ಹಿಂತೆಗೆತ ಆಗುತ್ತೆ ಎಂಬುದು ಅವರಿಗೆ ತಿಳಿದಿತ್ತು ಅಂತ ಝಾಡಿಸುತ್ತಿದೆ. ಹಂಗೆಲ್ಲ ಸುದ್ದಿ ಲೀಕಾಗಿಲ್ಲ ಕಣ್ರೀ. ಅಲ್ಲಿ ಚುನಾವಣೆ ಇತ್ತಲ್ಲ ಅದ್ಕೆ ಭಾಜಪಗೆ ಹಣ ಬಂದಿತ್ತು ಅಷ್ಟೇಯ ಅಂತಾರೆ ಭಾಜಪ ಬುದ್ಧಿವಂತರು. ಆಯ್ತು ಸ್ವಾಮಿ ನಿಮ್ಮ ಹಸಾನೆ ಮುಂದೋಗ್ಲಿ, ಕೇಜ್ರಿವಾಲ್ ಮಾತಿಗೇನೇಳ್ತಿರಿ ಅಂತ ಕೇಳಿದ್ರೆ ಅದೂ ಅಷ್ಟೆ ಕಣ್ರಿ. ಓಆರ್‌ಒಪಿ ಜಾರಿ ಮಾಡಿದ್ವಿ, ನೌಕರ ಸಂಬಳ ಜಾಸ್ತಿ ಮಾಡಿದ್ವಿ ಅದ್ರಿಂದ ಹೆಚ್ಚು ಹಣ ಬ್ಯಾಂಕಲಿ ಜಮಾ ಸಹಜವಾಗೇ ಆಗಿತ್ತು ಅಂತಾರೆ ಬುದ್ಧಿವಂತರು. ಅದು ಹಾಳಾಗಿ ಹೋಗಲಿ ಕಣ್ರಿ. ಕಪ್ಪು ಹಣದ ಮೂಲ ಇರುವುದೇ ರಾಜಕೀಯ ಪಕ್ಷದ ದೇಣಿಗೆಯಲ್ಲಿ, ಅದರ ವಿರುದ್ಧ ಭಾಜಪ ಹೋರಾಟ ಪ್ರಾಮಾಣಿಕವಾಗಿದ್ದರೆ, ನಿಮ್ಮ ಪಕ್ಷ ಪಡೆಯುವ ಹಣ ಪಾರದರ್ಶಕವಾಗಿರುವ ಭರವಸೆ ನೀಡುತ್ತಿರಾ ಅಂತ ಕೇಳಿದರೆ ಭಾಜಪ ಬುದ್ಧಿವಂತರು ಚುನಾವಣಾ ನೀತಿಯ ಬದಲಾವಣೆ ಅಂತ ತಿಪ್ಪೆ ಸಾರುಸ್ತಾರೆ ಅಂತಾರೆ ಆಪ್ ವಕ್ತಾರರು.

ಅಷ್ಟಕ್ಕೇ ನಿಲ್ಲಿಸದೆ ಕಪ್ಪು ಹಣ ಚಲಾವಣೆಗೆ ಕಡಿವಾಣ ಹಾಕ್ತೀವಿ, ಭ್ರಷ್ಟಾಚಾರ ತಡೀತೀವಿ, ಉಗ್ರರ ಮಟ್ಟ ಹಾಕ್ತಿವಿ ಅನ್ನೋದೆಲ್ಲ ಬರೀ ಬೊಗಳೆ ಅಂತಾರೆ ವಿರೋಧ ಪಕ್ಷದೋರು. ಯಾವುದು ನಿಜವೊ ಯಾವುದು ಸುಳ್ಳೊ. ನಾವೇನು ಕಂಡು ಕುಂತಿದ್ದೀವಾ. ನಮಗೇನಪ್ಪಾ ಅಂದ್ರೆ ಮೋದಿಯವರು ಚುನಾವಣಾ ಪ್ರಚಾರ ಮಾಡುವಾಗ ವಿದೇಶದಲ್ಲಿರೋ ಕಪ್ಪು ಹಣ ಎಲ್ಲವನ್ನೂ ಹಿಂದಕ್ಕೆ ತರ್ತೀನಿ ಅಂತ ಹೇಳ್ತಿದ್ದರಲ್ಲಾ, ತಂದ್ಮೇಲೆ ಆ ದುಡ್ಡ ಏನ್ಮಾಡ್ತರಂತೆ ಸರ್ಕಾರವೇ ಇಟ್ಟುಕೊಳ್ಳುತ್ತಾ ಅಂದ್ರೆ ಇಲ್ಲ ಅದನ್ನು ಜನರಿಗೆ ಹಂಚ್ತೀನಿ ಅಂದಿದ್ರು. ನ್ಯಾಯವಾದ ಕೆಲಸವೇಯ. ಅದು ಜನರ ದುಡ್ಡು ಅಲ್ವಾ. ಹಂಗೆ ಮಾಡಿದ್ದಿದ್ದರೆ ಪ್ರತಿಯೊಬ್ಬ ಭಾರತೀಯನ ಲೆಕ್ಕಕ್ಕೆ 15 ಲಕ್ಷ ರೂಪಾಯಿ ಬಂದು ಬೀಳುತ್ತೆ ಅಂದಿದ್ರು. ಮೋದಿ ಹೇಳಿದ ಮಾತು ಮೀರೋರಲ್ಲ, ಆ ಕಪ್ಪು ಹಣ ತಂದೇ ತರ್ತಾರೆ ಅನ್ನೊ ನಂಬಿಕೇಲಿ ಪ್ರಧಾನೀನೂ ಮಾಡಿದ್ರೊ. ಆವತ್ತಿನಿಂದ ಇವತ್ತಿನವರೆಗೂ ಆಗ ಬತ್ತದೆ ಈಗ ಬತ್ತದೆ ಅಂತ ಬಾಯಿ ಬಾಯಿ ಬಾಯಿಬಟ್ಕೊಂಡು ಕುಂತೇ ಇದ್ದೀವಿ. ಅದರ ಸುದ್ದೀನೆ ಈಗ ಎತ್ತುವಲ್ರು. ಅದೇನಾಯ್ತೋ ಏನೋ. ಅದು ಬಂದಿದ್ರೆ ಚೆನ್ನಾಗಿತ್ತು, ಅದಾಗ್ಲಿಲ್ಲ ಈ ನೋಟು



ಹಿಂತೆಗೆದು ಏನೋ ಮಾಡಕೆ ಹೊಂಟವ್ರಲ್ಲಾ ಇದನ್ನಾದ್ರೂ ಮಾಡ್ತಾವ್ರಲ್ಲ ಅಂತ ಸಮಾಧಾನ ಪಟ್ಟುಕೊಳ್ಳುವ ಅಂದ್ರೆ ಬಿಎಸ್‌ಪಿಯ ಮಾಯಾವತಿಯವ್ರು ವಿದೇಶದಲ್ಲಿರೋ ಕಪ್ಪು ಹಣ ತರಲಾರದ ಪುಕ್ಕಲುತನಕ್ಕೆ ನೋಟು ಹಿಂತೆಗೆತದ ನಾಟಕ ಕಟ್ತರೆ ಅಂತಾ ಗೇಲಿ ಮಾಡ್ತಾರೆ. ಅವರ ಮಾತೇ ನಿಜ ಆದ್ರೆ ಒಣ ಮರಕ್ಕೆ ಗಿಣಿ ಕಾಯ್ತಾ ಕುಂತಿದ್ದಂಗೆ ಅಚ್ಚೇ ದಿನ್‌ಗಳಿಗೆ ಕಾಯ್ತಾ ಕುಂತಿರೋದೇ ಬಂತಾ!

ರಾಜಕಾರಣಿಗಳ ಮಾತ ಅತ್ಲಾಗಿ ಬಿಸಾಕಿ. ಅವರ ಮೇಲೆ ಇವರು ಇವರ ಮೇಲೆ ಅವರು ಕೆಸರೆರಚೋದ್ನೆ ಕಸುಬು ಮಾಡಿಕೊಂಡವ್ರೆ. ಅಂತೋರು ಯಾರೂ ಬ್ಯಾಂಕುಗಳ ಮುಂದೆ ಸಾಲಲ್ಲಿ ನಿಂತ್ಕಂಡಿದ್ದ ಕಾಣೆ. ನಮ್ಮ ನಿಮ್ಮಂತೋರ ಕತೆ ಹೇಳಿ. ಮಾಡೋ ಕೆಲಸ ಬುಟ್ಟು ಹಾಡು ಬಾರೋದಾನಯ್ಯ ಅಂದಂಗೆ ಮಾಡೋಕೇಮೆ ಬುಟ್ಟು ಬ್ಯಾಂಕು ಕಾಯೋ ಹಂಗೆ ಮಾಡಿ ಕುಂಡ್ಸವ್ನೆ ಮೋದಿ. ಹಿಂಗೆ ನಿಂತಿದ್ದ ಓರ್ವ ಮಹಿಳೆ 'ಇದ್ಯಾವ ಹಣೆಬರ ಅಂತೀನಿ. ಹೊತ್ತಾರೆಯಿಂದ ಹೊಸ ನೋಟು ತಗಾಳಾಕೆ ಕಾಯ್ತಿವ್ನಿ. ನಮ್ಮ ದುಡ್ಡ ನಾವು ಬಳಸೋಕೆ ಎಷ್ಟು ಪರದಾಡಬೇಕಪ್ಪ' ಎಂಬ ಬೇಗುದಿಯ ಮಾತಿನಂತೆ ನಮ್ಮಂತೋರ ಬಾಳೂ ಪರಿಪಾಟಲಾಗಿ ಕುಂತದೆ.

ನೋಟುಗಳ ನಿಷೇಧದಿಂದ ಬಡಜನರಿಗೆ ಅನುಕೂಲ ಆಗುತ್ತೊ ಇಲ್ಲವೋ ಕಾಲವೇ ಹೇಳಬೇಕು. ಪೂರ್ವ ಸಿದ್ಧತೆ ಇಲ್ಲದೆ ಮಾಡಿದ ಈ ನಿರ್ಧಾರದಿಂದ ಹೊಸ ಪೂಜಾರಿ ನಾಯಿತುಳಸಿ ಕುಯ್ದ ಅನ್ನುವಂಗಾಗದೆ ಅನ್ನೋದು ಎದ್ದು ಕಾಣುತ್ತೆ. ಮೋದಿಯೋರು ಇದ ಒಪ್ಪಲು ಸಿದ್ಧ ಇಲ್ಲ. ಹಿಂಗನ್ನುವವರೆಲ್ಲ ಕಾಳು ಸಂತೆಕೋರರು, ಭ್ರಷ್ಟಾಚಾರಿಗಳು, ಕಾಳಧನ ಸಂಗ್ರಹಕಾರರು ಇಲ್ಲವೆ ದೇಶದ್ರೋಹಿಗಳು ಎಂಬ ಲೇಬಲ್ ಹಚ್ತಾರೆ. ಏಕ್‌ದಂ ಇದ ಮಾಡಿಲ್ಲ, ಹತ್ತು ತಿಂಗಳ ಶ್ರಮ ಇದರ ಹಿಂದಿದೇಂತಾನೂ ಹೇಳ್ತಾರೆ. ಅದೇ ಉಸುರಿನಲ್ಲೇ ಇನ್ನು ಐವತ್ತು ದಿವಸ, ಐವತ್ತೇ ದಿವಸ ಸಮಯ ಕೊಡಿ ಎಲ್ಲಾನೂ ಸರಿಮಾಡ್ತೀನಿ ಅಂತಾರೆ. ಅಲ್ಲ ಹತ್ತು ತಿಂಗಳಲ್ಲಿ ಮಾಡಲಾಗದ್ದನ್ನ ಐವತ್ತು ದಿನಗಳಲ್ಲಿ ಹಂಗೆ ಮಾಡ್ತಾರೆ ಅನ್ನೋದು ತಿಳಿವಲ್ದು. ಏನಾದ್ರೂ ಮ್ಯಾಜಿಕ್ ಮಾಡಿದ್ರೂ ಮಾಡಬಹುದು!

ನೋಟು ರದ್ಧತಿ ಕುರಿತಂತೆ ಮೋದಿ ಸರ್ಕಾರ ದಿನಕ್ಕೆ ನಾಲ್ಕೋ ಐದೋ ನಿಯಮಗಳನ್ನು ತರ್ತಾ ಆದೆ. ಇದ ನೋಡಿದಾಗ ಕಳೆದ ಐವತ್ತರ ದಶಕದಲ್ಲಿ ಕೆಂಗಲ್ ಹನುಮಂತಯ್ಯನವರು ಕೊಡುತ್ತಿದ್ದ ಒಂದು ಉಪಮೆ ನೆನಪಿಗೆ ಬರುತ್ತೆ. ಒಂದು ಊರಲ್ಲಿ ಒಂದು ವಿಶಾಲವಾದ ಹಳೆಮನೆ ಇತ್ತಂತೆ. ಆದರ ಗೋಡೆ ಭಾವಣಿ ಎಲ್ಲ ಶಿಥಿಲವಾಗಿತ್ತಂತೆ. ಒಂದು ಕಡೆ ಗೋಡೆ ಕುಸಿಯುತ್ತೆ ಅನ್ನೋದು ತಿಳಿದಾಗ ಅಲ್ಲಿ ಒಂದು ಊರುಗೋಲು ಕೊಡ್ತಿದ್ರಂತೆ. ಭಾವಣಿ ಕುಸೀತಾ ಆದೆ ಕಣೊ ಅಂದ್ರೆ ಅಲ್ಲಿಗೆ ಓಡಿಹೋಗೋದಂತೆ. ಅದು ಕುಸಿಯದಂಗೆ ತಡೆಯಲು ಊರುಗೋಲು ಕೊಡ್ತಿದ್ರಂತೆ. ಇಲ್ಲಿ ನೆಟ್ಟಗೆ ಮಾಡುವ ಹೊತ್ತಿಗೆ ಇನ್ನೊಂದು ಕಡೆ ಐಬಾಗೋದಂತೆ. ಅಲ್ಲಿಗೆ ಓಡಿಹೋಗಿ ಆದೇ ಕೆಲಸ ಮಾಡೋರಂತೆ. ಹಿಂಗಾಗಿ ಮನೆ ತುಂಬ ಊರುಗೋಲು, ಹೊರೆಗೋಲುಗಳೇ ತುಂಬಿದ್ದು ವಾಸಕ್ಕೆ ಜಾಗವೇ ಇಲ್ಲದ ಹಾಗೆ ಆಗಿತ್ತಂತೆ. ಹಂಗಾಗಿ ಕುಂತದೆ ಮೋದಿ ಸರ್ಕಾರದ ಕಾನೂನುಗಳ ಕತೆ. ಸಂಕಷ್ಟಗಳ ಪರಿಹರಿಸುವ ಬದಲು ಉಲ್ಬಣಗೊಳಿಸುತ್ತಿರುವಂತಿದೆ.

ನೋಟು ರದ್ಧತಿಯಿಂದ ಯಾರಿಗೂ ಅನುಕೂಲವೇ ಆಗಿಲ್ಲ ಅಂತ ಅಲ್ಲ. ಕೆಲವರಿಗೆ ಇದು ಶಾಪ ಆಗುವುದರ ಬದಲು ವರ ಆಗಿದೆಯಂತೆ. ಅವರು ಯಾರು ಅಂದರೆ ಕಲ್ಕತ್ತಾ ನಗರದ ಕೆಂಪುದೀಪ ಪ್ರದೇಶದವರಿಗೆ ಹಾಗೂ ತಿರುಪತಿ ತಿಮ್ಮಪ್ಪನಂತಹ ದೇವರುಗಳಿಗಂತೆ. ಕೆಂಪು ದೀಪ ಪ್ರದೇಶದಲ್ಲಿ ಅವರದ್ದೇ ಆದ ಬ್ಯಾಂಕ್ ಇದೆಯಂತೆ. ಅಲ್ಲಿ ರದ್ದಾದ ನೋಟುಗಳನ್ನು ಸ್ವೀಕರಿಸುತ್ತಿದ್ದಾರಂತೆ. ಇದರಿಂದ ಆ ಪ್ರದೇಶದ ವ್ಯಾಪ್ತಿಯಲ್ಲಿ ಅವು ಚಲಾವಣೆಯಲ್ಲಿ ಇವೆಯಂತೆ. ಈ ನೋಟುಗಳಿಗೆ ಹೆಂಗಿದ್ದರೂ ಬೆಲೆ ಇಲ್ಲ ಅವುಗಳೂ ಹಿಂಗಾದರೂ ಸಾರ್ಥಕತೆ ಪಡೆಯಲಿ ಅಂತ ಅಲ್ಲಿಗೆ ಹೋಗುವವರ ಸಂಖ್ಯೆಯಲ್ಲಿ ದಿಢೀರನೆ ಏರಿಕೆ ಕಂಡಿದೆಯಂತೆ. ಇದರಿಂದಾಗಿ ಲೈಂಗಿಕ ಕಾರ್ಯಕರ್ತೆಯರಿಗೂ ತೃಪ್ತಿ ವಿಟ ಪುರುಷರಿಗೆ ಡಬ್ಬಲ್ ತೃಪ್ತಿ ಸಿಗುತ್ತಿದೆಯೆಂತೆ. ಡಬ್ಬಲ್ ತೃಪ್ತಿ ಹೇಗೆ ಎಂದರೆ ಒಂದು ಚಲಾವಣೆಯಲ್ಲಿ ಇಲ್ಲದ ನೋಟನ್ನು ಚಲಾವಣೆ ಮಾಡಿದ್ದಕ್ಕೆ, ಇನ್ನೊಂದು ಲೈಂಗಿಕ ತೃಪ್ತಿ ಪಡೆದಿದ್ದಕ್ಕೆ ಅಂತೆ!

ಕೆಂಪು ದೀಪ ಪ್ರದೇಶದಲ್ಲಿ ಹಳೆಯ ನೋಟು ಜಾರಿಯಲ್ಲಿರುವಂತೆ ಕೆಲವು ದೇವಸ್ಥಾನಗಳಲ್ಲಿಯೂ ಇದೇ ಪದ್ಧತಿ ಇದೆಯಂತೆ. ಮುಂಬಯಿಯಲ್ಲಿ ಒಂದು ವಿಘ್ನೇಶ್ವರ ದೇವಾಲಯ ಇದೆಯಂತೆ. ಆ ದೇವರಿಗೆ ಬಹುಜನ ಭಕ್ತರಿದ್ದಾರಂತೆ. ತಮ್ಮ ಕೆಲಸ ಕಾರ್ಯಗಳು ನಿರ್ವಿಘ್ನವಾಗಿ ನಡೆಯಲಿ ಎಂದು ಕಾಣಿಕೆಗಳನ್ನು ತಂದು ಸುರಿಯುತ್ತಾರಂತೆ. ಹರಿಯೋ ನೀರಿಗೆ ದೋಷ ಇಲ್ಲ ಎನ್ನುವಂತೆ ಅಲ್ಲಿ ನೋಟುಗಳಲ್ಲಿ ಕೆಟ್ಟ ನೋಟು ಒಳ್ಳೆಯ ನೋಟುಗಳಿಲ್ಲ ಅನ್ನುವ ಪಾಲಿಸಿ ಆ ದೇವರದಂತೆ. ಇದರ ಸುಳಿವು ತಿಳಿದ ಭಕ್ತರು ರದ್ದಾದ ನೋಟುಗಳನ್ನು ಹುಂಡಿಯಲ್ಲಿ ಸುರಿಯುತ್ತಲಿದ್ದು ದೇವರ ಆದಾಯ ಏಕ್‌ದಂ ಏರಿದೆಯಂತೆ!


ಹಣದ ವಿಚಾರದಲ್ಲಿ ತಿರುಪತಿ ತಿಮ್ಮಪ್ಪನೇ ಹೆಡ್ಡು. ಮೋದಿ ಏನಾದರೂ ಮಾಡ್ಕಳ್ಳಿ ನೀವು ಎಲ್ಲಾ ನೋಟುಗಳ ಚಲಾವಣೆ ಮಾಡಿ ಅಂತ ಆರ್ಡರ್ ಮಾಡಿದನೋ ಏನು ಕತೆಯೋ. ತಿಮ್ಮಪ್ಪನ ದೇವಸ್ಥಾನದಲ್ಲಿ ಅವು ಚಲಾವಣೆಯಲ್ಲಿವೆಯಂತೆ. ಭಕ್ತರಿಗೆ ಅನುಕೂಲ ಆಗಲಿ ಅಂತ ಹೊಸ ಹುಂಡೀನೆ ಇಟ್ಟವ್ರಂತೆ! ಹಣದ ಸುರಿಮಳೆ ಆಗ್ತಾ ಇದ್ದು ತಿಮ್ಮಪ್ಪ ಗೆಲುವಾಗವ್ನೆ ಅಂತ ಹೇಳಬೇಕಾಗಿಲ್ಲವಷ್ಟೆ.

ಕಾನೂನುಗೀನೂನುಗಳನ್ನೆ ಕಾಲಕಸ ಮಾಡಿಕೊಂಡು ಈ ದೇವರುಗಳು ಸಂತೋಷದಿಂದ ಮೆರೆಯುತ್ತಿದ್ದರಲ್ಲಾ. ಪಾಪ ನಂಜನಗೂಡಿನ ನಂಜುಂಡನ ಕತೆ ನೋಡಿ. ನಾನು ಕಾನೂನು ಪರಿಪಾಲಕ, ರದ್ದತಿ ನೋಟುಗಳನ್ನು ಸ್ವೀಕರಿಸಲಾರೆ ಅಂತ ಯಾರಿಗೆ ಹೇಳಿದನೋ ಗೊತ್ತಿಲ್ಲ. ಅಂತೂ ಇದು ಅಲ್ಲಿ ಭಾರಿಯಾಗಿದೆಯಂತೆ. ಹಿಂಗಾಗಿ ನಂಜುಂಡನ ಹತ್ತಿರ ಬರುವ ಭಕ್ತರ ಸಂಖ್ಯೆಯೂ ಇಳಿಮುಖ ಆಗಿದೆಯಂತೆ, ಮಾಡಿಸುವ ವಿಶೇಷ ಅರ್ಚನೆಗಳಲ್ಲೂ ಕಡಿತ ಆಗಿದೆಯಂತೆ. ಹುಂಡಿಗೆ ಬೀಳುವ ಹಣಕ್ಕೂ ಬರ ಬಂದಿದೆಯಂತೆ!

ಒಟ್ಟಿನಲ್ಲಿ ಕಾನೂನು ಮೀರಿದ ದೇವರಿಗೆ ಸತ್ಕಾರ, ಕಾನೂನು ಪರಿಪಾಲಕ ದೇವರಿಗೆ ತಿರಸ್ಕಾರ. ಇದೇ ಲೋಕಾರೂಢಿ ಆಗಿರುವಂತಿದೆ. ಸಾರ್ವಜನಿಕ ಜೀವನದಲ್ಲೂ ಇದೇ ಸತ್ಯಸತ್ಯ ಅಲ್ಲವಾ....

■ ಎಚ್.ಎಲ್.ಕೇಶವಮೂರ್ತಿ

ತುರ್ತಾಗಿ ಬೇಕಾಗಿದೆ: ಮೋದಿಯ ಕಥನಕ್ಕೊಂದು ಪ್ರತಿಕಕ



ನೋಟು ರದ್ದತಿಗಳು ಈ ಹಿಂದೆಯೂ ನಡೆದಿವೆ. ಅಂದಿನ ಕಾರ್ಯಾಚರಣೆಗಳನ್ನು ಜನಸಾಮಾನ್ಯರಿಗೆ ತೊಂದರೆಯಾಗದ ರೀತಿಯಲ್ಲಿ ಮಾಡಲಾಗಿತ್ತು, ಆದರೆ ಈ ಸಲ ಹಾಗಾಗಿಲ್ಲ. ಇವತ್ತಿನ ಈ ಬವಣೆಯನ್ನು ಕಡಮೆ ಮಾಡಲು ಸಾಧ್ಯವಿತ್ತೇ ಎಂದು ಕೇಳಿದರೆ ಹೌದು ಎನ್ನಬೇಕಾಗುತ್ತದೆ. ಹಾಗಾದರೆ ಯಾಕೆ ಮಾಡಲಾಗಿಲ್ಲ? ಈ ಪ್ರಶ್ನೆಗೆ ಮೋದಿ ಸರ್ಕಾರ ಉತ್ತರಿಸುತ್ತಿಲ್ಲ. ಕೆಲವರು ಇದಕ್ಕೆ ಪೂರ್ವಸಿದ್ಧತೆಯ ಕೊರತೆಯೆ ಕಾರಣ ಎಂದು ಅಭಿಪ್ರಾಯಪಟ್ಟರೆ ಇನ್ನಿತರರು ಗೌಪ್ಯತೆ ಕಾಯ್ದುಕೊಳ್ಳಬೇಕಾದ ಅವಶ್ಯಕತೆಯತ್ತ ಬೆರಳು ತೋರುತ್ತಾರೆ. ಆದರೆ ನಿಜವಾದ ಉತ್ತರ ಆರ್ಥಿಕ ಕ್ಷೇತ್ರದಲ್ಲೊ ಅನುಷ್ಠಾನ ವ್ಯವಸ್ಥೆಯಲ್ಲೊ ಇರುವ ಬದಲು ರಾಜಕೀಯ ಕ್ಷೇತ್ರದಲ್ಲಿ ಇರಬಹುದು. ನೋಟು ರದ್ದತಿ ಕಪ್ಪುಹಣವನ್ನು ತಡೆಗಟ್ಟುವ ಅತ್ಯುತ್ತಮ ತಂತ್ರವಾಗಿದೆ ಎನ್ನುವುದರ ಗುಣಾವಗುಣಗಳನ್ನು ಚರ್ಚೆಗೊಳಪಡಿಸಬಹುದಾಗಿದೆ. ಅದೇರೀತಿ ತ್ವರಿತ ರದ್ದತಿ ವರ್ಸಸ್ ನಿಧಾನ ರದ್ದತಿಗಳ ಒಳಿತು ಕೆಡುಕುಗಳನ್ನೂ ಚರ್ಚೆಗೊಳಪಡಿಸಬಹುದಾಗಿದೆ. ಎಟಿಎಂಗಳನ್ನು ಹೊಸ ನೋಟುಗಳಿಗೆ ಅನುಗುಣವಾಗಿ ಮರುರೂಪಿಸಬೇಕಾಗುವ ವಿಚಾರ ಮೊದಲೆ ಗೊತ್ತಿದ್ದುಕೊಂಡೂ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ವಿಧಾನವನ್ನೂ ಚರ್ಚೆಗೊಳಪಡಿಸಬಹುದಾಗಿದೆ. ಚಲಾವಣೆಯಲ್ಲಿರುವ ಹಣದ ಶೇಕಡ 86ರಷ್ಟಿರುವ ರೂ 500, 1000ದ ನೋಟುಗಳ ದಿಢೀರ್ ರದ್ದತಿಯಿಂದಾಗಿ ಜನಸಾಮಾನ್ಯರ ಬದುಕಿನ ಮೇಲೆ ಆಗಿರುವ ಪರಿಣಾಮಗಳನ್ನೂ ಚರ್ಚೆಗೊಳಪಡಿಸಬಹುದಾಗಿದೆ.

ಆತ್ಮರತಿ

ವಾಸ್ತವವಾಗಿ ಈ ಎಲ್ಲಾ ಅಂಶಗಳ ಬಗ್ಗೆ ವ್ಯಾಪಕ ಚರ್ಚೆಗಳು ನಡೆದಿವೆ. ಜಪಾನ್ ಪ್ರವಾಸದಲ್ಲಿದ್ದ ಮೋದಿ ಭಾರತಕ್ಕೆ ಮರಳಿದಾಕ್ಷಣ ತಕ್ಕ ಕ್ರಮ ಕೈಗೊಳ್ಳಲಿರುವನೆಂದು ಜನ ಭಾರಿ ಕಾತರದಿಂದ ನಿರೀಕ್ಷಿಸುತ್ತಿದ್ದರು. ಕೆಲವರಂತೂ ಅನುಷ್ಠಾನಕ್ಕೆ ಸೂಕ್ತ ವ್ಯವಸ್ಥೆಗಳಾಗುವತನಕ ಕಾರ್ಯಕ್ರಮವನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಮೂಲಕ ಮೋದಿ ತಮ್ಮ ಸಂಕಷ್ಟವನ್ನು ತಗ್ಗಿಸಲಿರುವನೆಂದು ಆಸೆ ಪಟ್ಟುಕೊಂಡಿದ್ದರು.

ಆದರೆ ಜಪಾನ್‌ನಿಂದ ವಾಪಸ್ಸಾದ ನಂತರ ಆತ ಮಾಡಿದ ಭಾವೋದ್ವೇಗಕಾರಿ ಭಾಷಣಗಳನ್ನು ಕೇಳಿ ಎಲ್ಲರೂ ಸ್ತಂಭೀಭೂತರಾದರು. ನವಂಬರ್ 12ರ ಭಾನುವಾರದಂದು ಗೋವಾ, ಬೆಳಗಾವಿ, ಪುಣೆಗಳಲ್ಲಿ ನಡೆದ ಸಾರ್ವಜನಿಕ ಕಾರ್ಯಕ್ರಮಗಳ ವೇಳೆ ಆತ "ಇವತ್ತು ಯಾವ ರೀತಿಯ ಶಕ್ತಿಗಳು ಮತ್ತು ಯಾವ ರೀತಿಯ ಜನ ನನ್ನ ವಿರುದ್ಧ ನಿಂತಿರುವರೆಂದು ನನಗೆ ಗೊತ್ತು.... ಅವರು ನನ್ನನ್ನು ಜೀವಂತವಿರಲು ಬಿಡಲಾರರು. ಅವರು ನನ್ನನ್ನು ನಿರ್ನಾಮ ಮಾಡಲಿದ್ದಾರೆ" ಎಂದು ಹೇಳುವ ಮೂಲಕ ನೋಟು ರದ್ದತಿ ವಿಷಯವನ್ನು ತಾನು, ತನ್ನ ರಾಜಕೀಯ ವೃತ್ತಿ ಮತ್ತು ತನಗೆ ಕಿರುಕುಳ ನೀಡುತ್ತಿರುವ ಬಲಶಾಲಿ ವೈರಿಗಳ ಅನ್ಯಾಯದ ನಡವಳಿಕೆ ಕುರಿತ ಕಥನವಾಗಿ ಪರಿವರ್ತಿಸಲು ಪ್ರಯತ್ನಿಸಿದ. ಇದನ್ನೆ ಬೇರೊಂದು ವಿಧದಲ್ಲಿ ಹೇಳುವುದಾದರೆ ಪ್ರಸಕ್ತ ಸನ್ನಿವೇಶದಲ್ಲಿ ನಿಜಕ್ಕೂ ಅನುಕಂಪಕ್ಕೆ ಪಾತ್ರನಾಗಬೇಕಿರುವುದು ಮೋದಿಯೆ ಹೊರತು ತಮ್ಮ ಮೊದಲೆ ಅಭದ್ರವಾದ ಬದುಕು ಇನ್ನಷ್ಟು ಕಂಗೆಟ್ಟ ಪರಿಸ್ಥಿತಿಯಲ್ಲಿರುವ ದಿನಗೂಲಿ ನೌಕರರು, ಬೀದಿಬದಿ ವ್ಯಾಪಾರಿಗಳು ಮತ್ತು ರೈತರಲ್ಲ.

ಈ ಭಾವೋತ್ತೇಜಕ ಭಾಷಣ ಮೋದಿ ಸರ್ಕಾರದ ಕ್ರಮವನ್ನು ಪ್ರಶ್ನಿಸುವವರನ್ನೆಲ್ಲ ಒಂದೇ ಏಟಿಗೆ ಖೂಳರಾಗಿಸುವುದರೊಂದಿಗೆ ಎಲ್ಲಾ ಟೀಕೆಗಳನ್ನು ನಂಬಲನರ್ಹವಾಗಿಸಿದೆ. ಮೋದಿಯ ಭಾಷಣಗಳಲ್ಲಿ ಹುದುಗಿರುವ ವ್ಯಂಗ್ಯಗಳ ಅರಿವಿರುವವರು ಆತನ "70 ವರ್ಷಗಳ ಕಾಲ ದೇಶವನ್ನು ಲೂಟಿ ಮಾಡಿದವರು" ಎಂಬ ಆವಾಹನೆಯನ್ನು ಗುರುತಿಸಬಲ್ಲರು. ಕಳೆದ ಹಲವಾರು ವರ್ಷಗಳಿಂದ ತನ್ನ ನೂರಾರು ಭಾಷಣಗಳ ಮೂಲಕ ಗಟ್ಟಿಯಾಗಿ ಕಟ್ಟಿರುವ ಈ ಶ್ರೀಸಾಮಾನ್ಯರ ಬೆಂಬಲ ಗಿಟ್ಟಿಸುವಂಥ ಕಥನದಲ್ಲಿ ಕಾಂಗ್ರೆಸ್ ಅಂದರೆ ಭ್ರಷ್ಟರು ಅಂದರೆ ಕಾಳಧನಿಕರು ಅಂದರೆ ಗಣ್ಯರು ಅಂದರೆ ಉದಾರವಾದಿಗಳು ಅಂದರೆ ಮೋದಿಯನ್ನು ಟೀಕಿಸುವವರು ಅಂದರೆ ದೇಶದ್ರೋಹಿಗಳು ಅಂದರೆ ಭಾರತವನ್ನು ನಾಶಪಡಿಸಲಿಚ್ಛಿಸುವ ದುರ್ಜನರು. ಅದೇ ವೇಳೆ ಸಜ್ಜನರು ಅಂದರೆ ನೈಜ ರಾಷ್ಟ್ರೀಯವಾದಿಗಳು ಅಂದರೆ ಮೋದಿ ಅಂದರೆ ಮೋದಿ ಬೆಂಬಲಿಗರು ಅಂದರೆ ಕಾಂಗ್ರೆಸ್ಸನ್ನು ದ್ವೇಷಿಸುವವರು ಅಂದರೆ ಸ್ವಾಭಿಮಾನಿ ಹಿಂದೂಗಳು.

ಈ ಎರಡೂ ಸರಮಾಲೆಗಳ ಉದ್ದ ಸ್ಥಿರವಲ್ಲ. ಕೆಲವು ಹೊಸ ವರ್ಗಗಳನ್ನು ಒಳಗೊಳ್ಳುವ ಸಲುವಾಗಿ ಅವುಗಳನ್ನು ಇನ್ನಷ್ಟು ಉದ್ದವಾಗಿಸಬಹುದು ಅಥವಾ ಕೆಲವನ್ನು ತೆಗೆದುಹಾಕಿ ಆಯ್ದ ಕೆಲವೇ ವರ್ಗಗಳ ಮೇಲೆ ಕೇಂದ್ರೀಕರಿಸಬಹುದು. ಆದರೆ ಕಣ್ಣೀರ್ಗರೆಯುತ್ತಾ ಮೋದಿ ಮಾಡಿಕೊಂಡ ವಿನಂತಿಯಲ್ಲಿ ಮೂರು ಗಮನಾರ್ಹ ವಿಷಯಗಳಿದ್ದವು: ಒಂದು, ರಾಜಕಾರಣದ ನೈತಿಕೀಕರಣ, ಎರಡು, ರಾಜ್ಯನೀತಿ ಕುರಿತ ಚರ್ಚೆಗಳೊಳಗೆ ಭಾವನೆಗಳ ತುರುಕುವಿಕೆ, ಮೂರು, ಎಲ್ಲಾ ಚರ್ಚೆಗಳನ್ನು ಒಂದೇ ವಿಷಯಕ್ಕೆ ಸೀಮಿತಗೊಳಿಸುವಿಕೆ – "ನೀವು ಮೋದಿಯನ್ನು ಬೆಂಬಲಿಸುತ್ತೀರಾ, ಇಲ್ಲವಾ?" ಹೌದೆಂದಾದರೆ ಮೋದಿಯನ್ನು ಬೆಂಬಲಿಸಿ. ಇಲ್ಲವೆಂದಾದರೆ ನೀವು ಆತನ ಕ್ರಮಗಳನ್ನು ಟೀಕಿಸುವುದರಲ್ಲಿ ಸೋಜಿಗವೇನೂ ಇಲ್ಲ.

ರಾಷ್ಟ್ರಕ್ಕಾಗಿ ತ್ಯಾಗ

ಪ್ರೇರಕಶಕ್ತಿ ಕುರಿತ ಮೇಲಿನ ಈ ನಿರೂಪಣೆ ಒರಟಾಗಿರಬಹುದು. ಆದರೆ ಮೋದಿಯ ಮಟ್ಟಿಗೆ ಈ ಪ್ರೇರಕಶಕ್ತಿ ಕೆಲಸ ಮಾಡುತ್ತಿದೆ ಎಂಬುದನ್ನು ನಿರಾಕರಿಸುವಂತಿಲ್ಲ. ಎಟಿಎಂಗಳ ಮುಂದೆ ಸಾಲುಗಟ್ಟಿ ನಿಂತ ಯಾರೇ ಇರಲಿ ಒಂದು ವಿಷಯವನ್ನು ಗಮನಿಸಿರಲೆಬೇಕು. ಅದೇನೆಂದರೆ ಸಮಾಜದ ಎಲ್ಲಾ ಸ್ತರಗಳಿಗೆ, ಅದರಲ್ಲೂ ವಿಶೇಷವಾಗಿ ಕೆಳಮಧ್ಯಮ ವರ್ಗಗಳಿಗೆ ಸೇರಿದ ಜನ ತಾವು ಸಂಕಷ್ಟ ಅನುಭವಿಸುತ್ತಿರುವುದನ್ನು ಒಪ್ಪಿಕೊಳ್ಳುತ್ತಲೇ ಮೋದಿ ದೇಶದ ಒಳಿತಿಗಾಗಿ ದಿಟ್ಟ ಹೆಜ್ಜೆ ಇಟ್ಟಿರುವುದಾಗಿ ಭಾವಿಸುತ್ತಿದ್ದಾರೆ.

ಆತ "ನೀವು ಬಯಸುವ ಭಾರತವನ್ನು ನಿಮಗೆ ನೀಡುವ ಭರವಸೆಯನ್ನು ನಾನು ಕೊಡುತ್ತೇನೆ.... ಈ ದೇಶದ ಜನ ನನ್ನಲ್ಲಿ ಏನು ಮಾಡಬೇಕೆಂದು ಹೇಳಿದರೂ ಅದನ್ನೆ ನಾನು ಮಾಡುತ್ತಿದ್ದೇನೆ" ಎಂದು ಹೇಳುವಾಗ ಅನೇಕ ಮಂದಿ ಅದನ್ನು ನಂಬುತ್ತಾರೆ. ಅಂಥಾ ನಂಬುಗರು ತಮ್ಮನ್ನೊಂದು ಮಹದುದ್ದೇಶಕ್ಕೆ ಜೋಡಿಸುವ ಈ ಕಥನದೊಂದಿಗೆ ತಮ್ಮ ಸಂಕಷ್ಟಗಳನ್ನು ಸುತ್ತಿದಾಗ ಅವರ ಮಾತುಗಳಿಗೊಂದು ಅರ್ಥ ಬರುವುದರೊಂದಿಗೆ ತಮ್ಮ ಬಗೆಗೆ ಅವರೊಳಗೊಂದು ಒಳ್ಳೆಯ ಭಾವನೆಯೊಂದನ್ನು ಹುಟ್ಟುಹಾಕುತ್ತದೆ. 50 ದಿನಗಳ ಯಾತನೆಯ ಬಳಿಕ ಕಪ್ಪುಹಣವೆಲ್ಲಾ ತೊಳೆದುಹೋಗಿ ಭಾರತ ಒಂದು ಮಹಾನ್ ರಾಷ್ಟ್ರ ಆಗಬಲ್ಲುದೆಂದಾದರೆ ಆ ಸಂಕಷ್ಟದ ಕುರಿತು ಗೊಣಗುವವರು ನಿಜಕ್ಕೂ ಸಂಕುಚಿತ ಮನೋಭಾವದವರಾಗಿ ರಬೇಕು, ಅಲ್ಲವೆ? ಆದರೆ ಮೋದಿಯ ಕಥನ ನೋಟು ರದ್ದತಿ ಅಥವಾ ಕಾಳಧನ ವಿರುದ್ಧದ ಹೋರಾಟಕ್ಕೆ ಬೆಂಬಲ ಕೋರುವುದರೊಂದಿಗೆ ಮುಕ್ತಾಯವಾಗುವುದಿಲ್ಲ. ಕಥನವನ್ನು ಮತ್ತಷ್ಟು ಮುಂದುವರಿಸುವ ಆತ ತನ್ನನ್ನು ತನ್ನ ಶತ್ರುಗಳಿಂದ ಕಾಪಾಡುವ ಮೂಲಕ ದೇಶವನ್ನು ಕಾಪಾಡಲು ಕರೆಕೊಡುತ್ತಾನೆ. ಶತ್ರುಗಳು "ನನ್ನ ಕೂದಲು ಹಿಡಿದೆಳೆದರೆ ನಾನು ನನ್ನ ಕೆಲಸವನ್ನು ನಿಲ್ಲಿಸುವೆನೆಂದು ಭಾವಿಸಿದ್ದರು. ನನ್ನನ್ನು ಬಗ್ಗಿಸಲು ನಾನು ಬಿಡಲಾರೆ. ನೀವು ನನ್ನನ್ನು ಜೀವಂತ ಸುಟ್ಟರೂ ಸರಿ, ಈ ಕೆಲಸಗಳನ್ನು ನಾನು ನಿಲ್ಲಿಸುವುದಿಲ್ಲ". ಈ ದೇಶದ ಅತ್ಯಂತ ಶಕ್ತಿಯುತ ಹುದ್ದೆಯನ್ನು ಅಲಂಕರಿಸಿರುವ, ಸಂಸತ್ತಿನಲ್ಲಿ ಅತ್ಯಧಿಕ ಸಂಖ್ಯಾಬಾಹುಳ್ಯವಿರುವ ಪಕ್ಷವೊಂದರ ಮೇಲೆ ಸಂಪೂರ್ಣ ಹಿಡಿತವಿರುವ ನಾಯಕನ ಮಾತುಗಳಿವು.

ನಾಯಕೋಪಾಸನೆಯ ಪಂಥ

ಇಂಥಾ ಮಾತುಗಳಿಗೆ ವಸ್ತುನಿಷ್ಠತೆಯ ಆಧಾರವಿರಲು ಸಾಧ್ಯವೆ? ಗೋರಕ್ಷಕರ ದಾಂಧಲೆ ಅತಿಯಾದ ಸಂದರ್ಭದಲ್ಲಿ ಆತ ಹೇಳಿದ್ದೇನು? "ಬೇಕಿದ್ದರೆ ನನ್ನ ಮೇಲೆ ಗುಂಡು ಹಾರಿಸಿ. ದಲಿತರ ಮೇಲಲ್ಲ". ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬನ ಮೇಲೆ ಯಾತಕ್ಕೋಸ್ಕರ ಗುಂಡು ಹಾರಿಸಬೇಕು? ಮೋದಿಗೆ ಕೇವಲ ದಲಿತರ ಮೇಲಿನ ಹಲ್ಲೆಗಳನ್ನಷ್ಟೆ ನಿಸ್ಸಂದಿಗ್ಧ ಮಾತುಗಳಲ್ಲಿ ಖಂಡಿಸಲು ಸಾಧ್ಯವಿರಲಿಲ್ಲವೆ? ಇತ್ತು, ಆದರೆ ಹಾಗೆ ಮಾಡಿದ್ದರೆ ದಲಿತರ ಮೇಲೆ ದೌರ್ಜನ್ಯಗಳಾಗುತ್ತಿರುವುದು ತನ್ನ ಆಡಳಿತದ ಒಂದು ನೈಜ ಸಮಸ್ಯೆಯೆಂದು ಒಪ್ಪಿದಂತಾಗುತ್ತಿತ್ತು. ಹೀಗಾಗಿ ಆತ "ದಲಿತರ ಮೇಲೆ ಹಲ್ಲೆ ನಡೆಸುವ ಬದಲು ನನ್ನ ಮೇಲೆ ಗುಂಡು ಹಾರಿಸಿ" ಎನ್ನುವ ಮೂಲಕ ಕಥನದ ವಿಷಯವನ್ನು ದಲಿತರ ಮೇಲಿನ ದೌರ್ಜನ್ಯಗಳಿಂದ ನರೇಂದ್ರ ಮೋದಿಗೆ ಬದಲಾಯಿಸಿದ.

ಈ ಹೊತ್ತಿನ ಈ ನೋಟು ರದ್ದತಿ ಸೃಷ್ಟಿಸಿರುವ ಬಿಕ್ಕಟ್ಟಿನ ವಿಷಯದಲ್ಲೂ ಆತನ ಪ್ರತಿಕ್ರಿಯೆ ಇದೇ ಮಾದರಿಯಲ್ಲಿದೆ. ಇಡೀ ದೇಶದ ಮೇಲೆ ತತ್‌ಕ್ಷಣದ ಪರಿಣಾಮ ಬೀರುವ ಈ ಕಾರ್ಯಾಚರಣೆ, ಪ್ರಧಾನಿಯಾದ ನಂತರ ಆತ ತೆಗೆದುಕೊಂಡ ಮೊತ್ತಮೊದಲ ಅತ್ಯಂತ ದಿಟ್ಟ ಹಾಗೂ ಖಚಿತ ಹೆಜ್ಜೆಯಾಗಿದೆ. ಅದನ್ನು ಆತ ಅತ್ಯಂತ ನಾಟಕೀಯ ಶೈಲಿಯಲ್ಲಿ ಮಾಡಿದ. ಅದರ ಪರಿಣಾಮ? ಕಾರ್ಯಕ್ರಮ ಪ್ರಾರಂಭವಾಗಿ ಹಲವಾರು ದಿನಗಳೆ ಕಳೆದಿವೆಯಾದರೂ ಇಂದಿಗೂ ದೇಶಕ್ಕೆ ದೇಶವೆ ತತ್ತರಿಸುತ್ತಿದೆ.

ಆರ್ಥಿಕ ರಹಸ್ಯೌಷಧ ಎಂದಿದ್ದುದು ದೂರದರ್ಶನ ಪರದೆಗಳ ಮೇಲಿನ ರಾಷ್ಟ್ರೀಯ ಮಟ್ಟದ ಪ್ರದರ್ಶನ ಎಂದಾಗಿದೆ. ಎಲ್ಲಕ್ಕೂ ಮಿಗಿಲಾಗಿ ಇದು ನಾಯಕನ ನೆಲೆಯಲ್ಲಿ ಆತ ಹೊಂದಿರುವ ಅಪಾರ ಬಲವನ್ನು, ಆತನೋರ್ವ ಅಸಾಧಾರಣ ವ್ಯಕ್ತಿ ಎನ್ನುವುದನ್ನು, ಆತ ರಾಷ್ಟ್ರೀಯ ರಾಜಕೀಯ ರಂಗದಲ್ಲಿ ಮಿಕ್ಕೆಲ್ಲಾ ದಿಗ್ಗಜರಿಗಿಂತ ಅದೆಷ್ಟೋ ಎತ್ತರದಲ್ಲಿರುವುದನ್ನು ಸ್ಪುಟವಾಗಿ, ಶಕ್ತಿಯುತವಾಗಿ ಒತ್ತಿ ತೋರಿಸಿದೆ.

ಇಲ್ಲೊಂದು ಪ್ರಶ್ನೆ. ಮೋದಿ ತನ್ನ ಯಾವುದೇ ಕ್ರಮದ ಬಗ್ಗೆ ರಾಜಕೀಯ ಅಥವಾ ಮಾಧ್ಯಮ ಕ್ಷೇತ್ರದ ಯಾರೊಂದಿಗೂ ಸಮಾನತೆಯ ಆಧಾರದ ಮೇಲೆ ಸಂಭಾಷಣೆಯಲ್ಲಿ ತೊಡಗದಿರುವುದೇಕೆ? ಏಕೆಂದರೆ ಅದರಲ್ಲಿ ಎರಡು ಅಪಾಯಗಳಿವೆ. ಒಂದು, ಆತನ ಮೇಲ್ಮೆಯ ಮಟ್ಟ ತಗ್ಗುವ ಅಪಾಯ. ಎರಡು, ಆತ ತನ್ನ ಸರಿಸಮಾನರಂತೆ ಯಾರೊಂದಿಗೆ ಸಂಭಾಷಿಸುತ್ತಾನೊ ಅಂಥವರ ಮೇಲ್ಮೆಯ ಮಟ್ಟ ಏರಿ ಸಾಪೇಕ್ಷವಾಗಿ ಆತನ ಮಟ್ಟ ಕುಗ್ಗುವ ಅಪಾಯ. ಈ ಕಾರಣಕ್ಕಾಗಿಯೆ ಆತನಿಗೆ ವಿದೇಶ ಪ್ರವಾಸಗಳು ಮುಖ್ಯವಾಗುತ್ತವೆ. ಇದು ಹೇಗಿದೆಯೆಂದರೆ ಆತನಿಗೆ ತಾನು ಮಾತುಕತೆ ಇತ್ಯಾದಿಗಳನ್ನು ಸಮಾನನೆಲೆಯಲ್ಲಿ ನಡೆಸುತ್ತಿರುವಂತೆ ಕಾಣಿಸಿಕೊಳ್ಳಬೇಕಿರುವುದು ಕೇವಲ ಅನ್ಯದೇಶಗಳ, ಅದರಲ್ಲೂ ಅಂತಾರಾಷ್ಟ್ರೀಯವಾಗಿ ಅಧಿಕ ಪ್ರಭಾವಶಾಲಿ ದೇಶಗಳ, ನಾಯಕರೊಂದಿಗೆ ಎಂಬಂತಿದೆ. ಜಾಗತಿಕ ಮಟ್ಟದ ಪ್ರಭಾವಶಾಲಿ ಗಣ್ಯರೆಂಬ ಉತ್ಪ್ರೇಕ್ಷಿತ ವರ್ಗಕ್ಕೆ ಸೇರಿದವರಾದ ಬರಾಕ್ ಒಬಾಮಾ, ಫ್ರಾಂಕೋಸ್ ಹಾಲೆಂಡ್, ಟೋನಿ ಎಬಾಟ್ ಃ ರಲ್ಲದೆ ಮಾರ್ಕ್ ಜುಕರ್‌ಬರ್ಗ್, ಹ್ಯೂ ಇತ್ಯಾದಿಗಳನ್ನೂ ಒರಟೊರಟಾಗಿ ತಬ್ಬಿಕೊ ಇದರಿಂದಲೆ ಜನಿಸಿದೆ. ಆದರೆ ಸ್ವದೇಶದ ಸಂವಾದಕರ ಪಾಲಿಗೆ ಧೈನ್ಯದಿಂದ ಯಾಜ ಪ್ರಶ್ನಿಸದೆ ಒಪ್ಪಿಕೊಳ್ಳುವುದನ್ನು, ವಿಧೇಯತೆ ತೆ ಬಿಟ್ಟು ಬೇರೆ ಆಯ್ಕೆಗಳಿಲ್ಲ.

ಭಾರತದ ಪ್ರಜಾಪ್ರಭುತ್ವ ಆರೋಗ್ಯ ಉಳಿಯಬೇಕಿದ್ದರೆ ಪ್ರಧಾನಿಗೆ ಸರಿಸಮಾನ ಸವಾಲೆಸೆಯುವ ರಾಜಕೀಯ ಮುಖಂಡರು ಯಾರೊಬ್ಬನೂ ಕಾಣಿಸುತ್ತಿಲ್ಲ. ಹೀಗಾಗಿ ತ ಯನ್ನು ಪ್ರಶ್ನಿಸಿದಾಗೆಲ್ಲ ವೇದಿಕೆಯ ಮೇಲಿಂ ದೇಶದ ಜನತೆಯನ್ನುದ್ದೇಶಿಸಿ ಮಾತಾಡುವುದ ನಿಗದಿತ ಉಪಾಯವಾಗಿಬಿಟ್ಟಿದೆ.

ಮೋದಿ ತಾನು ಪ್ರಧಾನಿಯಾದ ರಾಷ್ಟ್ರೀಯ ರಾಜಕೀಯ ಕಥನವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾನೆ. ಇದಕ್ಕೆ ಸಹಕಾರವೂ ಬಹಳಷ್ಟಿದೆ. ಪ್ರಸಕ್ತ ನೋ ಕಾರ್ಯಕ್ರಮ ಬಿಚ್ಚಿಕೊಂಡಿರುವ ವಿಧಾನ ನ ಬಯಲುಗೊಳಿಸುತ್ತಿರುವುದು ಏನನ್ನು? ಭವಿಷ್ಯದತ್ತ ಕೊಂಡೊಯ್ಯಲು ತನ್ನ ನಾಯಕ ಮಿಕ್ಕೆಲ್ಲಾ ಪರ್ಯಾಯಗಳನ್ನು ಇಲ್ಲವಾಗಿ ನಿಯಂತ್ರಣವನ್ನು ಬಳಸಿಕೊಳ್ಳುವುದಕ್ಕೆ ಆತ ಸಿದ ರಾಷ್ಟ್ರೀಯ ಹಿತಾಸಕ್ತಿಗಳು ಮೋದಿಯ ಹಿತಾಸ ಬೆಸೆಯುವ ಈ ಕಥನಕ್ಕೆ ಎಲ್ಲಿಯತನಕ ಸವಾ ದಿಲ್ಲವೊ ಅಲ್ಲಿಯ ತನಕ ಆತ ಇದನ್ನೆ ಮುಂದ


ಮೋದಿಯ ರಾಜಕೀಯ ಎದುರಾಳಿ ಗಳೆಲ್ಲವೂ ಆತನ ಚುನಾವಣೆಗಳ ಖರ್ಚ ಆತನ ಗೆಲುವಿನಲ್ಲಿ ಹೂಡಿಕೆ ಮಾಡಿರುವ ಉ ವಿಷಯಕ್ಕೆ ಸೀಮಿತವಾಗಿದೆ. ಇದರಲ್ಲಿ ತೋರುವ ಅವರ‍್ಯಾರಿಗೂ ಸಾಮಾನ್ಯ ವರ್ಗಗಳಿಗೆ ಸೇರಿದ ದೊಡ್ಡ ಸಂಖ್ಯೆಯ ಭ ಮೋದಿಯ ರಾಜಕೀಯ ಏಳಿಗೆಯಲ್ಲಿ ಭಾ ಹೂಡಿಕೆ ಮಾಡಿರುವ ಸತ್ಯಾಂಶದ ಬ ಅರಿವಿಲ್ಲವೆಂದು ಕಾಣುತ್ತದೆ. ತಮ್ಮ ನಾಯಕ ಫಲಿತಾಂಶ ಲಭಿಸುವ ಭರವಸೆಯೊಂದಿದ್ದರೆ ಕಾರ್ಪಣ್ಯಗಳಿಗೂ ಸಿದ್ಧರಿರುವಂತೆ ತೋ ಭಾವನಾತ್ಮಕ ಹೂಡಿಕೆದಾರರನ್ನು ಸೇನಾ ಪ್ರಾಣಾರ್ಪಣೆಗೆ ಸಿದ್ಧರಿರುವ ಯೋ ಹೋಲಿಸಬಹುದು.


ಮುಂಬರುವ ದಿನಗಳಲ್ಲಿ ಈ ರೀತಿ ವಿಷಯವನ್ನೂ ಮೋದಿ ಕುರಿತ ವಿಷಯವಾಗಿ ಇಂತಹ ಇನ್ನಷ್ಟು ಆಟಗಳನ್ನು ನಿರೀಕ್ಷಿಸಬಹುದ ನಾಮಮಾತ್ರಕ್ಕೆ ಎಂದಾಗಿರುವ ನಮ್ಮ ಹ ಐಡಿಯಾಗಳ ಅಥವಾ ಸೃಜನಶೀಲ ಕಲ್ಪನಾಶ ಕೊರತೆ ಇದೆ. ಇದು ಪ್ರಜಾಸತ್ತೆಯ ಎತ್ತಿಹಿಡಿಯುವ ಮಂದಿಯ ಆತಂಕಕ್ಕೆ ಕಾರಣ ಮೋದಿಯ ಎದುರಾಳಿಗಳ ಮುಂದಿರು ಏನೆಂದರೆ ಅವರು ಜನಸಮೂಹದಲ್ಲಿ ಅನುರ ಆದರೆ ಅತಿಮುಖ್ಯವಾಗಿ ಮೋದಿ ಕುರಿತಾಗ ಶಕ್ತಿಶಾಲಿ ಪ್ರತಿರೋಧದ ಕಥನವನ್ನು ರಚಿಸ ಸವಾಲನ್ನು ಎದುರಿಸುವಲ್ಲಿ ಅವರು ಅಸ 2019ರ ಚುನಾವಣೆಗಳಲ್ಲಿ ಆತನ ವಿರುದ್ ಅಸಂಭವವಿದೆ.

ಇಂಗ್ಲಿಷ್ ಮೂಲ:

ಕನ್ನಡಕ್ಕೆ: ಸುರೇಶ್ ಭಟ್ ಬ

(ಕೃಪೆ: ದ ಹಿಂದು, 1





ಯೋಗೇಶ್ ಮಾಸ್ಟರ್

ಪುರಾಣದ ಹೂರಣ





ದೂಪ್ರೀ ರಾಧಾ

ಸ್ವಾಮಿ ನಕ್ಕರು

...ನು ಸಣ್ಣ ಹುಡುಗನಿದ್ದಾಗ ಚಾಮರಾಜಪೇಟೆಯಲ್ಲಿ ...ಸಂಘದವರು ನಡೆಸುತ್ತಿದ್ದ ಬಾಲವಿಕಾಸ್ ಎಂಬ ...ರದ ಸತ್ಸಂಗದ ತರಗತಿಗೆ ಹೋಗುತ್ತಿದ್ದೆ. ಒಂದೆರಡು ... ಕಾಲ ಸಣ್ಣ ಮಕ್ಕಳಿಗೆಂದು ನಡೆಸುತ್ತಿದ್ದ ಆ ... ತರಗತಿಯ ಉದ್ದೇಶವು ಹಿಂದೂ ಸನಾತನ ... ಆಶಯ ಮತ್ತು ಅದರ ಬಗ್ಗೆ ಅಭಿಮಾನ ...ವುದಕ್ಕೇ ಆಗಿದ್ದರೂ ಮುಖ್ಯವಾಗಿ ಪುಟಪರ್ತಿಯ ...ಬಾಬಾ ಜೀವನ ಮತ್ತು ಸಂದೇಶಗಳನ್ನು ಮಕ್ಕಳಿಗೆ ...ಕೆ ಮಾಡಿಕೊಡುವುದೂ ಉದ್ದೇಶವಾಗಿತ್ತು. ...ಸ್ಸಿನಿಂದ ಆಧ್ಯಾತ್ಮದ ಬಗ್ಗೆ ಹೆಚ್ಚು ಒಲವು ...ಂದ ರಾಮಕೃಷ್ಣಾಶ್ರಮದ ವಿವೇಕಾನಂದ ಬಾಲಕ ...ಗಲಿ, ಸತ್ಯಸಾಯಿಬಾಬಾ ಸತ್ಸಂಗದ ಬಾಲವಿಕಾಸ್ ... ಆರ್ಯ ಸಮಾಜದ ಶಿಬಿರಗಳಾಗಲಿ ಅಥವಾ ...ಬಿರವಾಗಲಿ ಬಿಡದೇ ಓಡಿ ಹೋಗುತ್ತಿದ್ದೆ. ಆ ...ಗಳಲ್ಲೇ ನನಗೆ ಹೆಚ್ಚು ಹೆಚ್ಚು ಪುರಾಣದ ...ಾಗಲಿ, ಸಾಧುಸಂತರ ಜೀವನ ಮತ್ತು ...ಗಳಾಗಲಿ, ಧಾರ್ಮಿಕತೆಯಾಗಲಿ, ಸಾಂಪ್ರದಾಯಿಕ ... ಚಿಂತನೆಗಳಾಗಲಿ ನನ್ನ ಚಿಂತನುಗ್ರಾಣಕ್ಕೆ ಜಮಾ ...ದ್ದು.

... ಸಾಯಿಬಾಬಾನ ಬಾಲವಿಕಾಸ್ ಸತ್ಸಂಗಕ್ಕೆ ...ತ್ತಿದ್ದ ಸಮಯದಲ್ಲಿ ಒಂದು ವಿಶೇಷವನ್ನು ...ದ್ದೆ. ಅದೆಂದರೆ ಹಲವು ಮಧ್ಯವಯಸ್ಕ ಮಹಿಳೆಯರು ...ವಕರಾಗಿ ಕೆಲಸ ಮಾಡುತ್ತಿದ್ದದ್ದು. ಅವರಲ್ಲಿ ಅನೇಕ ...ರು ಅವಿವಾಹಿತರಾಗಿದ್ದದ್ದು ಲೋಕಾರೂಢಿಯಾಗಿ ...ಯ ವಯಸ್ಸು ದಾಟಿರುವಂತಹ ಮಹಿಳೆಯರು ...ಹಿತರಾಗಿ ಉಳಿದಿರುವುದು ಒಂದು ...ಯವೆಂದೇ ಭಾವಿಸಿದ್ದೆ. ಆದರೆ ಮುಂದೊಂದು ...ನನಗೆ ಸತ್ಯಸಾಯಿಬಾಬಾ ಆಸ್ಪತ್ರೆಯ ...ಹೋತ್ಸವಕ್ಕೊಂದು ಒಂದು ನಾಟಕವನ್ನು ಮಾಡಿಸುವ ... ಬಂದಿದ್ದು, ಆಗ ನಾನು ಕಾಡುಗೋಡಿಯಲ್ಲಿಯೇ ... ನಾಟಕಕ್ಕೆ ಸಿದ್ಧತೆಗಳನ್ನು ನಡೆಸುತ್ತಿದ್ದೆ. ಆಗ ಆ ... ಮತ್ತಷ್ಟು ಹೆಂಗಸರನ್ನು ಕಂಡೆ. ಅವರಲ್ಲಿ ...ಲು ಮಹಿಳೆಯರು ತಮ್ಮ ಕುಟುಂಬ ಅಥವಾ ...ಳನ್ನು ಬಿಟ್ಟು, ತಮ್ಮದೇ ಆದಂತಹ ಕೆಲವು ...ರೊಡನೆ ಕೋಣೆಗಳನ್ನು ಮಾಡಿಕೊಂಡು ...ಬಾಬಾನ ಚಿತ್ರವನ್ನು ಇಟ್ಟುಕೊಂಡು, ಭಜನೆ ...ಂಡು ಇರುತ್ತಿದ್ದರು. ಅವರು ಸತ್ಯ ಸಾಯಿಬಾಬಾನ ...ತಾಡುತ್ತಿದ್ದ ರೀತಿಗಳನ್ನು ಗಮನಿಸಿದಾಗ, ಅವರು ... ಬಾಬಾನಿಗೆ ಸಮರ್ಪಿಸಿಕೊಂಡಿರುವಂತೆ ಕಾಣುತ್ತಿತ್ತು. ...ರಾಧೆಯು ಸಮರ್ಪಿಸಿಕೊಂಡಂತೆ, ಸಂಪೂರ್ಣವಾಗಿ ...ದ್ದರು.

...ಲೆಂಡ್‌ನ ಓರ್ವ ಮಹಿಳೆ ನನಗೆ ತೀರಾ ...ದ್ದರು. ಅಂದು ಸಾಯಿಬಾಬಾನ ದರ್ಶನ ...ಕೊಂಡು ಬರುವಾಗ ಆಕೆ ಹೇಳಿದಳು, "ಈ ದಿನ ...ನ್ನ ದೇಶ ಬಿಟ್ಟು ಬಂದುದ್ದಕ್ಕೆ ಸಾರ್ಥಕವಾಯಿತು. ...ಮೀ ಕೊನೆಗೂ ನನ್ನ ಕಡೆ ನೋಡಿ ನಕ್ಕರು" ... ಹೇಳುತ್ತಾ ಆನಂದಪರವಶಳಾಗಿ ಕಣ್ಣೀರು ...ದ್ದಳು. ನನಗೆ ಅದಕ್ಕೆ ಪ್ರತಿಕ್ರಿಯಿಸಲೂ ಆಗಲಿಲ್ಲ. ... ಮೆಲ್ಲನೆ ಕೇಳಿದೆ. "ನೀವು ಬಾಬಾನನ್ನು ದಿನವೂ ...ರುತ್ತೀರಲ್ಲಾ? ಅವರು ಎಲ್ಲರನ್ನೂ ನೋಡಿಕೊಂಡು ..."

...ಗೆ ಅರ್ಥವಾಗುವುದಿಲ್ಲ ಯೋಗೇಶ್! ಇದು ...ಕರಿಸಿದ ನಗು. ರಾಧೆಯನ್ನು ಕೃಷ್ಣ ಸ್ವೀಕರಿಸಿದ ...ವರಿಗಾಗಿ ಎಲ್ಲವನ್ನೂ ಬಿಟ್ಟು ಬಂದಿದ್ದ ನನ್ನ ...ಲ ಪರೀಕ್ಷಿಸಿದ. ನನ್ನಲ್ಲಿ ಇರುವಂತಹ ಎಲ್ಲಾ ...ೂ ಹೊರಟುಹೋಗುವವರೆಗೂ ಕಾದು ನಂತರ ಇವತ್ತು ನನ್ನ ಸ್ವೀಕರಿಸಿದ" ಎಂದು ನನಗೆ ಸ್ವೀಟ್ ಕೊಡಿಸಿದಳು.

ಆಕೆಯ ಭಕ್ತಿಯ ಭಾವಕ್ಕೆ ಮರುಕಪಡಬೇಕೋ ಅಥವಾ ಮೂರ್ಖತನಕ್ಕೆ ನಗಬೇಕೋ ತಿಳಿಯದೇ ಕೊಡಿಸಿದ ಸಿಹಿತಿಂಡಿಯನ್ನು ಸವಿದಿದ್ದು ಬೇರೆ ಮಾತು. ಆದರೆ ಅಲ್ಲಿಂದೀಚೆಗೆ ಅರ್ಥವಾಗಿದ್ದೇನೆಂದರೆ, ಈ ಹಾಲೆಂಡಿನ ಮಹಿಳೆಯಂತೆಯೇ ಇಲ್ಲಿಯೂ ಅನೇಕಾನೇಕ ಮಹಿಳೆಯರು ತಮ್ಮನ್ನು ರಾಧೆಯರನ್ನಾಗಿಸಿಕೊಂಡು, ಸತ್ಯ ಸಾಯಿಬಾಬಾನನ್ನು ಕೃಷ್ಣನಾಗಿಸಿಕೊಂಡು, ತಮ್ಮನ್ನು ಬಾಬಾಗರ್ಪಿತ ಮಾಡಿಕೊಂಡು ಬದುಕುತ್ತಿದ್ದಾರೆಂದು. ವ್ಯಂಗ್ಯ ಮತ್ತು ದುರಂತವೆಂದರೆ, ಅವರಲ್ಲಿ ಎಷ್ಟೋ ಜನರು ಸತ್ಯ ಸಾಯಿಬಾಬನನ್ನು ಸ್ಪರ್ಶಿಸುವುದಿರಲಿ ಹತ್ತಿರಕ್ಕೂ ಕೂಡ ಸುಳಿಯಲಾಗಿಲ್ಲ. ತಮ್ಮ ಪುರುಷನನ್ನು ಪ್ರೇಮದಿಂದ, ಭಕ್ತಿಯಿಂದ ನೋಡುವಂತೆ ನೋಡಿಕೊಂಡು ಅವಿವಾಹಿತರಾಗಿ ಉಳಿದಿದ್ದರು. ನೂರಾರು ಜನರ ನಡುವೆ ಕುಳಿತುಕೊಂಡು ಅವನನ್ನು ಹೃದಯದುಂಬಿ ನೋಡುತ್ತಾ, ಅಳುತ್ತಾ, ತಮ್ಮ ಕಡೆ ನೋಡು ಎಂದು ಯಾಚಿಸುತ್ತಾ, ನನ್ನ ಪ್ರೇಮ, ಭಕ್ತಿ ನಿನಗೆ ಬೇಡವೇನು ಎಂದು ಹಲುಬುತ್ತಾ, ನನ್ನ ಕರ್ಮಗಳು ಇನ್ನೂ ಇವೆಯೇ ಎಂದು ತಮ್ಮನ್ನೇ ಹಳಿದುಕೊಳ್ಳುತ್ತಾ ಕಾಯುತ್ತಿದ್ದರು. ಬಾಬಾನ ಒಂದು ನೋಟಕ್ಕಾಗಿ, ಒಂದು ನಗೆಗಾಗಿ, ಒಂದು ಸಣ್ಣ ಸಂಕೇತಕ್ಕಾಗಿ, ಪಾದಸ್ಪರ್ಶದ ಅನುಮತಿಗಾಗಿ ಹಾತೊರೆಯುತ್ತಿದ್ದರು. ಬಾಬಾ ಒಮ್ಮೆ ಅಪ್ಪಿತಪ್ಪಿ ಅವರ ಕಡೆ ನೋಡಿ ಸಾಧಾರಣವಾಗಿ ಬೀರುವ ನಗೆಯನ್ನೇ ಬೀರಿದರೂ ಅದು ತಮಗೆಂದು ಆದೆಷ್ಟೋ ದಿನಗಳು ಅದರ ಬಗ್ಗೆಯೇ ಎಲ್ಲರ ಜೊತೆ ಮಾತಾಡಿಕೊಂಡು ಸಾರ್ಥಕತೆಯನ್ನು ಅನುಭವಿಸುತ್ತಿದ್ದರು. ಅವರು ತಮ್ಮತಮ್ಮಲ್ಲಿ ಸೇರಿದಾಗ ಮಾತಾಡಿಕೊಳ್ಳುತ್ತಿದ್ದದ್ದು ಬರೀ ಬಾಬಾನ ನಡೆ, ನುಡಿ, ನಗು, ಮಾತು; ಹೀಗೆ ಪ್ರತಿಯೊಂದೂ ಅದರ ಸುತ್ತಲೇ ಸುತ್ತುತ್ತಿರುತ್ತಿತ್ತು. ಎಂದಾದರೊಂದು ದಿನ ಬಾಬಾ ತನ್ನ ಪಾದಗಳನ್ನು ಮುಟ್ಟಲು ಅವಕಾಶ ಮಾಡಿಕೊಟ್ಟುಬಿಟ್ಟರಂತೂ, ಅಯ್ಯೋ, ಮುಗಿದೇಹೋಯಿತು. ಇನ್ನು ಉಳಿದ ಆಯಸ್ಸಿಗಾಗುವಷ್ಟು ಮಾತಾಡಿಕೊಂಡಿರುತ್ತಿದ್ದರು. ಪ್ರತೀಬಾರಿ ಅದನ್ನು ಹೇಳಿದಾಗಲಂತೂ ಅವರು ಭಾವುಕತೆಯಿಂದ, ಆನಂದದಿಂದ ಅದನ್ನು ಬಣ್ಣಿಸುತ್ತಿದ್ದರು. ಈ ಬಗೆಯ ನೂರಾರು ಹೆಂಗಸರನ್ನು ಕಾಡುಗೋಡಿಯಲ್ಲಿ ಮತ್ತು ಪುಟಪರ್ತಿಯಲ್ಲಿ ನಾನೇ ಚದುರಿದಂತೆ ನೋಡಿದ್ದೆ. ಇನ್ನು ಅವರಲ್ಲಿ ಅನೇಕರು ನನಗೆ ತೀರಾ ಪರಿಚಿತರೂ ಆಗಿದ್ದರು. ಅವರನ್ನು ಆ ಉನ್ಮತ್ತತೆಯಿಂದ ಹೊರಕ್ಕೆ ತರಲು ಸಾಧ್ಯವೇ ಆಗುತ್ತಿರಲಿಲ್ಲ. ನನಗೆ ಆಶ್ಚರ್ಯ ಮತ್ತು ಆಘಾತವಾಗಿದ್ದೇನೆಂದರೆ, ಇವರು ಸತ್ಯಸಾಯಿ ಪೂಜಾ ಸದೃಶ ಬದುಕನ್ನು ಮತ್ತು ಅತಿಮಾನವ ಶಕ್ತಿಯ ವೈಭವವನ್ನು ಪ್ರಚಾರ ಮಾಡುವವಂತವರಾಗಿದ್ದರೇ ಹೊರತು ಇನ್ಯಾವ ರೀತಿಯಲ್ಲೂ ಧಾರ್ಮಿಕತೆಗಾಗಲಿ, ಆಧ್ಯಾತ್ಮಿಕತೆಗಾಗಲಿ ಕಾಣ್ಕೆಯನ್ನು ನೀಡುತ್ತಿರಲಿಲ್ಲ. ಸದಾ ಬಾಬಾ ಹೀಗೆ ಮಾಡಿದರು, ಬಾಬಾ ಹಾಗೆ ಮಾಡಿದರು, ಹೀಗೆ ನಕ್ಕರು, ಅವರು ಹೀಗೆ ನಡೆದರು, ಹಾಗೆ ಕೂತರು; ಇಷ್ಟೇ! ಸಾಯಿಬಾಬಾನ ಬಗ್ಗೆ ನನಗೆ ಕೋಪವೂ ಬರುತ್ತಿತ್ತು. ಯಾರೊಬ್ಬ ವ್ಯಕ್ತಿಯು ತನ್ನ ವ್ಯರ್ಥ ಆರಾಧನೆಯಲ್ಲಿ ಸಂಮೋಹನಕ್ಕೆ ಒಳಗಾದಂತೆ, ಉನ್ಮತ್ತರಾದಂತೆ ವರ್ತಿಸುತ್ತಾ ಇರುವಾಗ, ಅದನ್ನು ತಿಳಿದೂ ಅವರಿಗೆ ಅರಿವನ್ನಾಗಲಿ ಅಥವಾ ಅಂತಹ ತಿಕ್ಕಲುತನವನ್ನು ಬಿಡಿಸುವುದಕ್ಕಾಗಲಿ ಏನೂ ಮಾಡದೇ ಸುಮ್ಮನಿರುವ ಮೂಲಕ ಬೆಂಬಲಿಸುತ್ತಾ ಹೋಗುವುದು ಅಕ್ಷಮ್ಯವಾಗಿ ನನಗೆ ಕಾಣುತ್ತಿತ್ತು. ಆ ಹೆಂಗಸರು ಎಂದಿಗೂ ಬಾಬಾನೊಂದಿಗೆ ವಾಸ್ತವವಾಗಿ ಹೃದಯ, ವಿಚಾರ, ಭಾವುಕ ಸಾಂತ್ವನ, ಹಾಸುಗೆ, ಸಂಪರ್ಕ, ಸಾನಿಧ್ಯ- ಹೀಗೆ ಯಾವುದನ್ನಾದರೂ ಹಂಚಿಕೊಳ್ಳುವುದಿರಲಿ, ಕನಿಷ್ಟಪಕ್ಷ ಒಂದು ತುತ್ತು ಅನ್ನವನ್ನೂ ಕೂಡ ಹಂಚಿಕೊಂಡಂತವರಲ್ಲ, ಒಬ್ಬ ಸಿನಿಮಾ ನಟನ ಅಭಿಮಾನದ ಆರಾಧಕರದಿಕ್ಕಿಂತ ಕೆಡುಕಾದ ಅಭಿಮಾನದ ಸ್ಥಿತಿ ಇವರದಾಗಿತ್ತು.

ಅಂತಹ ಮಹಿಳೆಯರು ಅದೆಷ್ಟರ ಮಟ್ಟಿಗೆ ವ್ಯಾಕುಲರಾಗಿರುತ್ತಿದ್ದರೆಂದರೆ, ಅವರಿರುವ ಸಾಲಿನ ಕಡೆಗೆ ಬಾಬಾ ಬರಲಿಲ್ಲವೆಂದರೆ ಕುಸಿದುಬೀಳುತ್ತಿದ್ದರು. "ಸ್ವಾಮೀ, ನನ್ನ ಮೇಲೆ ಕರುಣೆ ತೋರಿಸಿ" ಎಂದು ಆರ್ತನಾದ ಮಾಡುತ್ತಾ, ಕೂಗಾಡುತ್ತಾ ಮೂರ್ಛಿತರಾಗುತ್ತಿದ್ದರು. ಹುಚ್ಚು ಹಿಡಿದವರಂತೆ ವರ್ತಿಸುತ್ತಿದ್ದರು. ಇದೇರೀತಿ ತಮ್ಮ ಕಡೆಗೆ ಸ್ವಾಮಿ ಗಮನ ಕೊಡಲಿಲ್ಲ ಎಂದು ಖೇದಗೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳೂ ಉಂಟು.

ಕೃಷ್ಣನೊಬ್ಬನೇ ಪುರುಷ

ಚೆನ್ನಮಲ್ಲಿಕಾರ್ಜುನನೇ ನನ್ನ ಗಂಡ ಎನ್ನುವ ಅಕ್ಕಮಹಾದೇವಿಯ ಪರಿಚಯ ನಮಗೆ ನಮ್ಮ ಕನ್ನಡದಿಂದ ಆಗುತ್ತದೆ. ಆದರೆ ಅದಕ್ಕೆ ಮೊದಲು ಇದಕ್ಕೆ ಮಿಗಿಲಾಗಿ ಉತ್ತರ ಭಾರತದ ಕೆಲವು ಸಂಗತಿಗಳನ್ನು ಗಮನಿಸಬೇಕಾಗುತ್ತದೆ. ವೃಂದಾವನದಲ್ಲಿ ಈಗಲೂ ಅನೇಕ ಮಹಿಳೆಯರು ತಮ್ಮನ್ನು ರಾಧೆಯರೆಂದುಕೊಂಡು ಸಾಮಾನ್ಯವಾಗಿರುವ ಸಂಸಾರದಲ್ಲಿರದೇ, ತಮ್ಮದೇ ಆಗಿರುವಂತಹ ಲೌಕಿಕ ಕುಟುಂಬಗಳನ್ನು ಕಟ್ಟಿಕೊಳ್ಳದೇ ತಾವು ರಾಧೆಯರೆಂದೂ ಕೃಷ್ಣನ ಗೋಪಿಕೆಯರೆಂದೂ ಕೃಷ್ಣಭಕ್ತಿಗೆ ಮರುಳಾಗಿ ಸದಾ ಕೃಷ್ಣನ ನಾಮಸ್ಮರಣೆಗಳಲ್ಲಿಯೇ ಮುಳುಗಿರುತ್ತಾರೆ. ಹೊರ ಜಗತ್ತಿಗೆ ತಮ್ಮನ್ನು ತೆರೆದುಕೊಳ್ಳದೇ ಅವರಲ್ಲಿ ಅನೇಕರು ಬರೀ ಮಾನಸಿಕ ಅಸ್ವಸ್ಥರಾಗಿರುವುದು ಮಾತ್ರವಲ್ಲದೇ ಶಾರೀರಿಕವಾಗಿಯೂ ಅನೇಕ ರೋಗಗಳನ್ನು ತಂದುಕೊಂಡು ನರಳುತ್ತಿದ್ದಾರೆ. ಇದು ಕೃಷ್ಣ ಭಕ್ತಿಯ ಪರಾಕಾಷ್ಠತೆಯ ಫಲ.

ಅಷ್ಟೆಲ್ಲಾ ಏಕೆ? ಲಕ್ನೋದಲ್ಲಿ ಒಬ್ಬರು ಐಪಿಎಸ್ ಅಧಿಕಾರಿ ಡಿ ಕೆ ಪಾಂಡ ಎನ್ನುವವರು ತಮ್ಮನ್ನು ತಾವು ದೂಪ್ರೀರಾಧಾ ಎಂದು ಕರೆದುಕೊಂಡು ಹೆಣ್ಣಿನಂತೆಯೇ ಅಲಂಕರಿಸಿಕೊಂಡು, ಸಿಂಧೂರ ಧರಿಸಿಕೊಂಡು, ಬಳೆ, ಓಲೆಗಳನ್ನು ತೊಟ್ಟುಕೊಂಡು ಕೃಷ್ಣಾ ಕೃಷ್ಣಾ ಎಂದು ಕುಣಿದಾಡಿಕೊಂಡಿದ್ದು ದೊಡ್ಡ ಸುದ್ದಿಯೇ ಆಯಿತು. ಕೃಷ್ಣನೊಬ್ಬನೇ ಪುರುಷ. ಉಳಿದವರೆಲ್ಲಾ ಗಂಡಾಗಲಿ, ಹೆಣ್ಣಾಗಲಿ; ಅವರೆಲ್ಲಾ ಹೆಂಗಸರೇ, ಗೋಪಿಯರೇ ಎನ್ನುವಂತಹ ಭಕ್ತಿಯ ಪರಾಕಾಷ್ಠತೆ ಅವರದು.

ಒಮ್ಮೆ ಮೀರಾಬಾಯಿಯು ಕೃಷ್ಣನ ದೇವಾಲಯದೊಳಗೆ ಪ್ರವೇಶಿಸುತ್ತಾಳೆ. ಆ ದೇವಸ್ಥಾನದೊಳಗೆ ಸ್ತ್ರೀಯರಿಗೆ ಪ್ರವೇಶ ನಿಷೇಧವಿರುತ್ತದೆ. ಆಗ ಅರ್ಚಕನು ಆಕೆಯನ್ನು ಹೊರಗೆ ಹೋಗಲು ಸೂಚಿಸುತ್ತಾನೆ. ಕಾರಣ ತಿಳಿದ ಮೀರಾ ಹೇಳುತ್ತಾಳೆ, "ನೀನು ಪುರುಷನೆಂದು ಹೇಗೆ ಮತ್ತು ಏಕೆ ತಿಳಿದುಕೊಂಡೆ? ಈ ಜಗತ್ತಿನಲ್ಲಿ ಒಬ್ಬನೇ ಪುರುಷ, ಅದು ಕೃಷ್ಣ" ಎಂದು ಹೇಳುತ್ತಾಳೆ. ಅಲ್ಲಿರುವ ಪುರುಷರೂ ಅದನ್ನು ಒಪ್ಪುತ್ತಾರೆ.

ಇಸ್ಕಾನ್ ಭಕ್ತಿ ಸಿದ್ಧಾಂತವೂ ಇದನ್ನೇ ಹೇಳುತ್ತದೆ. ಕೃಷ್ಣನೊಬ್ಬನೇ ಪುರುಷ. ಆದರೆ ಈಗ ಅದಕ್ಕೆ ಸಾಂಕೇತಿಕವಾಗಿ ಹೊಸಬಗೆಯ ವ್ಯಾಖ್ಯಾನಗಳನ್ನು ನೀಡುತ್ತಾರೆ. ಅದೇನೆಂದರೆ, ಕೃಷ್ಣನು ಮೂಲ ಚೈತನ್ಯ. ಅದನ್ನು ಪರಮಪುರುಷನೆಂದು ಕರೆಯುವುದು. ಆ ಮೂಲದಿಂದ ಹೊರಡುವ ಶಕ್ತಿಯ ಕಿರಣಗಳು ಸ್ತ್ರೀ ತತ್ವ ಎಂದೇ ಹೊರತು, ಜೈವಿಕವಾಗಿ ಕೃಷ್ಣನೆಂದರೆ ಅವನೊಬ್ಬನೇ ಪುರುಷ ಉಳಿದೆಲ್ಲರೂ ಸ್ತ್ರೀಯರು ಎಂದಲ್ಲ ಎನ್ನುತ್ತಾರೆ.

ಏನೇ ಆಗಲಿ, ಪುರುಷನಿಗೆ ಸ್ತ್ರೀಯು ಶರಣಾಗತಳಾಗಿರಲೇಬೇಕೆಂದು ಅಥವಾ ಹೆಣ್ಣು ಎರಡನೆಯ ದರ್ಜೆ ಎಂದು ಹೇಳುವ ಬೈಬಲ್ಲಿನ ಸೆಕೆಂಡ್ ಸೆಕ್ಸ್ ಭಾವ ಇಲ್ಲಿಯೂ ವ್ಯಕ್ತವಾಗುತ್ತದೆ. ದೇವರು ಮೊದಲು ಸೃಷ್ಟಿಸಿದ್ದು ಆದಮನನ್ನು, ನಂತರ ಅವನ ಪಕ್ಕೆಲುಬಿನಿಂದ ಹೆಣ್ಣನ್ನು ಸೃಷ್ಟಿಸಿದನು. ಆದಮನೇ ಮೊದಲು, ಅವನಿಂದ ಹುಟ್ಟಿದವಳು ಹವ್ವ!

ಅದಿರಲಿ, ಕೃಷ್ಣನು ಸದಾ ಸಾಕುತಾಯಂದಿರಾದ ಗೋಪಿಯರಿಂದಲೂ, ನಂತರ ಗೆಳತಿಯರಾದ ಗೋಪಿಕೆಯರಿಂದಲೂ ಸುತ್ತುವರಿದಿರುತ್ತಿದ್ದ. ಸಾಕುತಾಯಂದಿರಾದ ಗೋಪಿಕೆಯರಿಂದ ವಾತ್ಸಲ್ಯವಾದರೆ, ಗೆಳತಿಯರಾದ ಗೋಪಿಕೆಯರಿಂದ ಮಾಧುರ್ಯ. ಭಾಗವತ ಪುರಾಣದಲ್ಲಿ ಹೇಳುವಂತೆ ಗೋಪಿಕೆಯರು ತಮ್ಮ ನೆರಳುಗಳನ್ನು ತಮ್ಮ ಗಂಡಂದಿರೊಡನೆ ಅನುಮಾನ ಬಾರದಂತೆ ಬಿಟ್ಟು, ತಾವು ತಮ್ಮ ನೈಜ ಇರುವನ್ನು ಕೃಷ್ಣನಿಗೆ ಸಮರ್ಪಿಸಿಕೊಂಡು ಆನಂದಿಸುತ್ತಿದ್ದರು.

ಎಲ್ಲಾ ಗೋಪಿಕೆಯರ ಪ್ರೇಮದ ಮೂರ್ತಿ ಕೃಷ್ಣ. ಅವನಿಗಾಗಿ ಹಾತೊರೆಯುತ್ತಿದ್ದರು. ಹುಚ್ಚು ಉನ್ಮಾದಗಳಿಂದ ಅವನ ಸಂಮೋಹನಕ್ಕೆ ಒಳಗಾಗಿದ್ದರು. ಅವನಿಲ್ಲದೇ ವಿರಹದಿಂದ ಹಾತೊರೆಯುತ್ತಿದ್ದರು.

ಈ ಪ್ರೇಮ, ಮೋಹ, ವಿರಹಗಳೆಲ್ಲವೂ ಜಯದೇವನ ಗೀತಾಗೋವಿಂದದಲ್ಲಿ ಕಾವ್ಯೋನ್ಮತ್ತದಲ್ಲಿ ರಸದಳೆಯುತ್ತದೆ. ಆದರೆ ಕೃಷ್ಣನೆಷ್ಟೇ ದೇವನಿರಲಿ, ಪರಮ ಪುರುಷನಿರಲಿ, ಜಯದೇವನಿಗೆ ತನ್ನ ಪತ್ನಿಯ ಮೇಲಿನ ಪ್ರೇಮದಿಂದಲೋ ಏನೋ ಕೃಷ್ಣನನ್ನು ರಾಧೆಯ ಚರಣಗಳಿಗಿಳಿಸುತ್ತಾನೆ.


ಬಂಗಾಳಿ ಸಂತ ಚೈತನ್ಯ (1486-1533) ಸಂಸಾರವನ್ನು ತಿರಸ್ಕರಿಸಿ ಕೃಷ್ಣ ಪ್ರಜ್ಞೆಗೆ ತನ್ನ ಸಮರ್ಪಿಸಿಕೊಳ್ಳುತ್ತಾನೆ. ಅವನಿಗೆ ಕೀರ್ತನಗಳನ್ನು ಹಾಡಿಕೊಂಡು ನಲಿದಾಡಿಕೊಂಡು ಭಕ್ತಿಯಿಂದ ಕೃಷ್ಣನನ್ನು ಹೊಂದುವ ಮಾರ್ಗ ದರ್ಶನವಾಗುತ್ತದೆ. ಅವರ ಪ್ರಕಾರ ಪ್ರತಿಯೊಬ್ಬನೂ ಸಹಜೀಯ, ಪ್ರತಿಯೊಬ್ಬನಲ್ಲಿಯೂ ರಾಧೆ ಮತ್ತು ಕೃಷ್ಣರಿರುತ್ತಾರೆ. ಆ ರಾಧೆ ಮತ್ತು ಕೃಷ್ಣರನ್ನು ಆರಾಧಿಸುತ್ತಾ ಇಬ್ಬರೂ ತಮ್ಮಲ್ಲಿ ಒಂದಾಗಬೇಕು. ಭಕ್ತಿ ಮಾರ್ಗದಿಂದ ಭಗವದೈಕ್ಯಕ್ಕೆ ಹೋಗುವುದು.

ಇನ್ನು ತಾವು ಉಳಿದವರೆಲ್ಲ ಗೋಪಿಕೆಯರೆಂದೂ, ಕೃಷ್ಣನೊಬ್ಬನೇ ಪುರುಷನೆಂದೂ ಹೇಳುವಂತಹ ಈ ಸಿದ್ಧಾಂತವು ಶರಣರಲ್ಲೂ ತಪ್ಪಿಲ್ಲ.

ಶರಣ ಸತಿ, ಲಿಂಗ ಪತಿ; ಆದರೆ ಅನುಭವ ಮಂಟಪವೆಂಬ ಅನುಭಾವಿಗಳ ಸಭೆಯಲ್ಲಿ ಪ್ರತಿಯೊಂದು ಪರಿಕಲ್ಪನೆಯೂ ಚರ್ಚೆಗೆ, ಸಂವಾದಕ್ಕೆ ಬರುತ್ತಿತ್ತು. ಹಾಗಾಗಿ ಶರಣ ಸತಿ, ಲಿಂಗ ಪತಿ ಎಂಬ ಪರಿಕಲ್ಪನೆ ವಿಮರ್ಶೆಗೆ ಮಾತ್ರವಲ್ಲ, ತಿರಸ್ಕಾರಕ್ಕೂ ಒಳಗಾಯಿತು. ಹೇಗೆ ಮುಂದೆ ನೋಡೋಣ.




ಸಂಘಿಗಳ ಯುಗ ಪುರುಷ ಈಗ ಢೋಂಗಿ ಪುರು



ಮೊನ್ನೆ ಶುಕ್ರವಾರ ನಗರದ ಎಲ್ಲಾ ಎಟಿಎಮ್‌ಗಳನ್ನು ಪತ್ತೆ ಹಚ್ಚಿ ಹಣಕ್ಕಾಗಿ ಹುಡುಕಾಡಿದೆ. ಎಲ್ಲಾ ಖಾಲಿ. ಆದರೆ ಒಂದು ಕೆನರಾ ಬ್ಯಾಂಕಿನ ಎಟಿಎಮ್ ಹತ್ತಿರ 20-25 ಜನ ಲೈನಿನಲ್ಲಿ ನಿಂತಿದ್ದರು. ಆ ಎಟಿಎಮ್‌ಗೆ ಒಂದು ಕ್ಯಾಶ್ ವ್ಯಾನ್ ಬಂದು ಆಗತಾನೇ ನಗದು ಲೋಡ್ ಮಾಡಿಹೋಗಿತ್ತು, ಮೊದಲಿನ ಏಳೆಂಟು ಜನರು ಸರಿಯಾಗಿ ಹಣ ಡ್ರಾ ಮಾಡಿದರು. ನಂತರ ಒಂದು ಮಧ್ಯ ವಯಸ್ಸಿನ ಗುಜರಾತಿ ದಂಪತಿ ಒಟ್ಟಿಗೆ ಎಟಿಎಮ್ ಒಳಗೆ ಹೋಗಿ ಅಲ್ಲಿ ಅದೇನು ಮಾಡಿದರೋ ಆ ಎಟಿಎಮ್ ಮಶೀನ್ ಜಾಮ್ ಆಗಿಬಿಟ್ಟಿತು. ಅಲ್ಲಿದ್ದ ಕಾವಲುಗಾರ ಅದನ್ನು ಚೆಕ್ ಮಾಡಿ "ಇನ್ನು ಬ್ಯಾಂಕಿನವರೇ ಬಂದು ಇದನ್ನು ಸರಿಮಾಡಬೇಕು, ಅದು ಬೇಗದಲ್ಲಿ ಆಗುವುದಿಲ್ಲ, ನೀವೆಲ್ಲಾ ಬೇರೆ ಎಟಿಎಮ್‌ಗೆ ಹೋಗಿ" ಎಂದನು. ಆಗ ಅಲ್ಲಿ ಲೈನಿನಲ್ಲಿದ್ದ ಜನರು ತಮ್ಮ ಕೋಪ ಆ ಗುಜರಾತಿ ದಂಪತಿಗಳ ಮೇಲೆ ಹರಿಯಬಿಟ್ಟರು. "ಅಲ್ಲಿ ದಿಲ್ಲಿಯಲ್ಲಿ ಒಬ್ಬ ಅರೆ ಸಾಕ್ಷರ ಗುಜರಾತಿ ಇಡೀ ದೇಶವನ್ನು ಜಾಮ್ ಮಾಡಿದ್ದಾನೆ. ಇಲ್ಲಿ ನೋಡಿದರೆ ಇನ್ನೊಬ್ಬ ಗುಜರಾತಿ ನಮ್ಮ ಎಟಿಎಮ್ ಅನ್ನೇ ಜಾಮ್ ಮಾಡಿದ್ದಾನೆ" ಎಂದು ಕೂಗಾಡಿದರು!

ಅಲ್ಲಿ ಸೇರಿದ್ದ ಜನರ ಭಯಂಕರ ಸಿಟ್ಟನ್ನು ಕಂಡಾಗ



ಒಂದು ವಿಷಯವಂತೂ ಸ್ಪಷ್ಟವಾಗಿತ್ತು, ಅದೇನೆಂದರೆ ಮೋದಿಯ ಮೇಲೆ ಜನರಲ್ಲಿ ಮಡುಗಟ್ಟಿರುವ ಸಿಟ್ಟು ಈಗ ಎಲ್ಲಾ ಗುಜರಾತಿಗಳ ಮೇಲೆ ಹರಿಯುತ್ತಿದೆ. ಮೊದಲೇ ಧನದಾಹಿ ರಕ್ತಪಿಪಾಸು ಮಾರ್ವಾಡಿ ಮತ್ತು ಗುಜರಾತಿಗಳ ಬಗ್ಗೆ ದೇಶದ ಇತರ ಭಾಗದ ಜನರಿಗೆ ಒಳ್ಳೆಯ ಅಭಿಪ್ರಾಯವಿಲ್ಲ, ಹಾಗಾಗಿ ಈಗ ನೋಟು ರದ್ದತಿಯಂತಹ ಹುಚ್ಚಾಟದಿಂದಾಗಿ ಸಾಮಾನ್ಯ ಜನರಿಗೆ ಮೋದಿ ಕೇವಲ ಒಬ್ಬ ಗುಜರಾತಿ ವ್ಯಾಪಾರಿ ಹಾಗೂ ಅಂಬಾನಿ-ಅದಾನಿ-ಪೇಟಿಎಂ ಕಂಪನಿಗಳ ಕಮಿಷನ್ ಏಜಂಟ್ ಮಾತ್ರ ಆಗಿ ಕಾಣಿಸುತ್ತಿದ್ದಾರೆಯೇ ಹೊರತು ಇಡೀ ದೇಶದ ಪ್ರಧಾನಿ ಆಗಿ ಕಾಣಿಸುತ್ತಿಲ್ಲ.


ಸಂಘಿಗಳ ಯುಗಪುರುಷ ಈಗ ಬರಿ ಢೋಂಗಿ ಪುರುಷ ಆಗಿಬಿಟ್ಟಿದ್ದಾನೆ. ಭಾರತದ ಪ್ರಸಿದ್ಧ ಅರ್ಥಶಾಸ್ತ್ರೀ ಚಾಣಕ್ಯನೇ ಹೇಳಿದ್ದಾನೆ "ಯಾವ ರಾಜ್ಯದಲ್ಲಿ ರಾಜನೇ ವ್ಯಾಪಾರಿ ಆಗುತ್ತಾನೋ ಆ ರಾಜ್ಯದ ಪ್ರಜೆಗಳು ಭಿಕಾರಿ ಆಗುತ್ತಾರೆ" ಎಂದು. ಇದುವೇ 'ರಾಜಾ-ವ್ಯಾಪಾರಿ ಪ್ರಜಾ-ಭಿಕಾರಿ' ಎಂಬುವ ಚಾಣಕ್ಯನ ಅರ್ಥನೀತಿ. ಇಂತಹ ವ್ಯಾಪಾರಿಯ ರಾಜ್ಯದಲ್ಲಿ ಕೊನೆಗೆ ಪ್ರಜೆಗಳೇ ದಂಗೆ ಎದ್ದು ತಮ್ಮ ರಾಜ್ಯ ದಿವಾಳಿ ಆಗುವುದನ್ನು ತಪ್ಪಿಸಬೇಕಾಗುತ್ತದೆ.

ದೊಡ್ಡ ದೊಡ್ಡ ಕಂಪನಿಗಳ ಏಜಂಟನಂತೆ ಕೆಲಸ ಮಾಡುತ್ತಿರುವ ಮೋದಿಯ ಸರಕಾರ ಸ್ವತಃ ಒಂದು ವ್ಯಾಪಾರಿ ಸಂಸ್ಥೆಯಾಗಿದೆ. ಹಾಗಿರುವಾಗ ಭಾರತದ ಪ್ರಜೆಗಳು ಬಿಕಾರಿ ಆಗದೆ ಇರಲು ಸಾಧ್ಯವೇ. ನಕಲಿ ಕಾಲೇಜು ಪದವಿ ಹೊಂದಿರುವ ವ್ಯಕ್ತಿ ಇದಕ್ಕಿಂತ ಹೆಚ್ಚೇನು ಮಾಡಲು ಸಾಧ್ಯ!

-ಡಿ. ಅನಿಲ್‌ಕುಮಾರ್ ಪೂಜಾರಿ, ಮಂಗಳೂರು

ಸಂಘಿಗಳ ಶಬ್ದಗಳ ಸರ್ಕಸ್ ಫಲ ನೀಡಲ್ಲ

ಈಗಿನ ನೋಟು ರದ್ದತಿಯಿಂದ ದೇಶದಲ್ಲಿ ಭ್ರಷ್ಟಾಚಾರ ಬಹಳ ಕಡಿಮೆಯಾಗುತ್ತದೆ ಎಂದು ಎಲ್ಲರೂ ಗಿಳಿಪಾಠ ಒಪ್ಪಿಸುತ್ತಿದ್ದಾರೆ. ಆದರೆ ಮಂಗಳೂರಿನ ಆರ್‌ಟಿಓ ಕಚೇರಿಯಲ್ಲಿ ಬ್ರೋಕರ್ ಆಗಿದ್ದ ನನ್ನ ಪರಿಚಯಸ್ಥರೊಬ್ಬರು ತುಂಬಾ ಸರಳ ಗಣಿತದಲ್ಲಿ ಹೀಗೆ ವಿವರಿಸಿದರು: "ಈವರೆಗೆ ಆರ್‌ಟಿಓ ಕಚೇರಿಯಲ್ಲಿ ಒಂದು ಕೇಸಿಗೆ ಒಂದು ಸಾವಿರ ರೂಪಾಯಿ ಒಂದೇ ಒಂದು



ನೋಟನ್ನು ಲಂಚವಾಗಿ ತೆಗೆದುಕೊಳ್ಳುತ್ತಿದ್ದರು. ಆದರೆ ಇನ್ನು ಮುಂದೆ ಅದೇ ಕೇಸಿಗೆ ಎರಡು ಸಾವಿರದ ಒಂದೇ ಒಂದು ನೋಟು ತೆಗೆದುಕೊಳ್ಳುತ್ತಾರೆ. ಈ ರೀತಿ ಸಾವಿರ ರೂಪಾಯಿಯ ನೋಟು ರದ್ದತಿಯಿಂದ ಲಂಚ ದ್ವಿಗುಣವಾಗುತ್ತದೆಯೇ ವಿನಹ ಕಡಿಮೆಯಾಗುವುದಿಲ್ಲ, ಜತೆಗೆ ಈ ವಾರದಿಂದ 500 ರೂಪಾಯಿಯ ಹೊಸ ನೋಟು ಸಹ ಬರಲಿರುವುದರಿಂದ ಲಂಚ ತೆಗೆದುಕೊಳ್ಳುವವರಿಗೆ ಯಾವುದೇ ಅಡಚಣೆಯಾಗುವುದಿಲ್ಲ." ಹಾಗಿರುವಾಗ ಕೇಂದ್ರ ಸಚಿವರು ಮತ್ತು ಮೋದಿಯ ಕುರುಡು ಬೆಂಬಲಿಗರು ನೋಟು ರದ್ದತಿಯಿಂದ ಭ್ರಷ್ಟಾಚಾರ ಲಂಚಗುಳಿತನ ಕಡಿಮೆಯಾಗುತ್ತದೆ ಎನ್ನುತ್ತಿರುವುದು ತರ್ಕವಿಹೀನ. ಯಾವುದೇ ದೇಶದಲ್ಲೂ 'ಹಣ' ಎಂಬ ವಿನಿಮಯ ಮಾಧ್ಯಮ ಇರುವವರೆಗೆ ಸ್ವತಃ ಬ್ರಹ್ಮ ಬಂದರೂ ಭ್ರಷ್ಟಾಚಾರ ಕಡಿಮೆಯಾಗಲು ಸಾಧ್ಯವೇ ಇಲ್ಲ.


1969 ರಲ್ಲಿ ಅಮೆರಿಕದ ನಿಕ್ಸನ್ ಸರಕಾರ 1000, 5000 ಮತ್ತು 10,000 ಡಾಲರ್ ಮುಖಬೆಲೆಯ ನೋಟುಗಳನ್ನು ರದ್ದು ಮಾಡಿ ಕೇವಲ 100 ಡಾಲರ್ ಮುಖಬೆಲೆಯ ನೋಟುಗಳನ್ನು ಮಾತ್ರ ಮುಂದುವರಿಸಿದಾಗ ಭ್ರಷ್ಟಾಚಾರ ಕಡಿಮೆಯಾಗುವ ಬದಲು ಹೆಚ್ಚೇ ಆಯಿತಂತೆ. ನೋಟು ರದ್ದತಿ ಮಾಡಿದ ಇತರ ಎಂಟು ದೇಶಗಳಲ್ಲೂ ನೋಟು ರದ್ದತಿ ಮಾಡಿದ ಮೇಲೆ ಲಂಚಗುಳಿತನ ಹೆಚ್ಚೇ ಆಯಿತಂತೆ. ನೋಟು ರದ್ದತಿಯಿಂದ ಈಗ ಹಣ ಕಳೆದುಕೊಂಡವರು ತಮ್ಮ ನೀಚಬುದ್ಧಿ ಒಮ್ಮೆಲೇ ಬಿಟ್ಟುಬಿಡುವುದಿಲ್ಲ, ತಾವು ನೋಟು ರದ್ದತಿಯಿಂದ ಕಳೆದುಕೊಂಡ ಹಣವನ್ನು ಮರಳಿ ಗಳಿಸಲು ಭವಿಷ್ಯದಲ್ಲಿ ತಮ್ಮ ಲಂಚಗುಳಿತನ ಹೆಚ್ಚಿಸುತ್ತಾರೆಯೇ ವಿನಹ ಕಡಿಮೆ ಮಾಡುವುದಿಲ್ಲ ಎಂಬುದು ಮನೋವೈಜ್ಞಾನಿಕ ಸತ್ಯ. ಈ ಲೆಕ್ಕಾಚಾರ ಹಳ್ಳಿಯ ಗವಾರನಿಗೂ ಅರ್ಥವಾಗುತ್ತದೆ, ಆದರೆ ನಮ್ಮ ಘನ ಸರಕಾರಕ್ಕೆ ಮತ್ತು ಮೋದಿಯನ್ನು ಕುರುಡಾಗಿ ಹೊಗಳುವ ಮಂದಿಮಾಗಧರಿಗೆ ಅರ್ಥವಾಗದಿರುವುದು ಖೇದಕರ.

ಕುರಿ ಮಂದೆಯನ್ನು ಮುನ್ನಡೆಸಲು ಕುರುಬರು ಯಾವಾಗಲೂ ಒಂದು ಮೇಕೆಯನ್ನು ಮುನ್ನೆಲೆಯಲ್ಲಿ ಇಟ್ಟುಕೊಂಡಿರುತ್ತಾರೆ. ದಾರಿಯಲ್ಲಿ ಯಾವುದೋ ಕಾರಣಕ್ಕೆ ಆ ಮುಂದಾಳು ಮೇಕೆ ಬ್ಯಾಬ್ಯಾ ಎಂದು ಅರಚಿದರೆ ಸಾಕು ಹಿಂದಿನ ಎಲ್ಲಾ ಕುರಿಗಳು ಆ ಮೇಕೆಯನ್ನು ಅನುಕರಿಸಿ ಬ್ಯಾಬ್ಯಾ ಎಂದು ಅರಚಿ ಕುರುಬನ ತಲೆ ಚಿಟ್ಟು ಹಿಡಿಸುತ್ತವಂತೆ. ಈಗ ಮೋದಿಯ ಬೆನ್ನಿಗಿರುವ ಕೇಸರಿ ಕುರಿಗಳೂ ಹೀಗೆಯೇ ಮಹಾ ಅರ್ಥಶಾಸ್ತ್ರಜ್ಞರಂತೆ ನೋಟು ರದ್ದತಿ[...] ಲಾಭಗಳ ಬಗ್ಗೆ ಸಿಕ್ಕ ಸಿಕ್ಕ ಮಾಧ್ಯಮದ ಮು[...] ಶುರು ಮಾಡಿವೆ ಅಷ್ಟೇ. ಮುಂದಿನ ಪಂಜಾ[...] ಗುಜರಾತ್, ಗೋವಾ ಚುನಾವಣೆಯ ವೇಳೆ [...] ಕೂಗಾಟ ಇನ್ನೂ ಹೆಚ್ಚಾಗಿ ಚುನಾವಣಾ ಫಲಿ[...] ನಂತರ ಅವರ ಬ್ಯಾಬ್ಯಾ ಬಂದ್ ಆಗಬಹುದು[...] ಬಿಜೆಪಿಯವರಿಗೆ ಮತ್ತು ಸಂಘ ಪರಿವಾರದ[...] ರದ್ದತಿಯ ಬಗ್ಗೆ ಆರೇಳು ತಿಂಗಳ ಮೊದ[...] ಹಾಗೂ ಅವರೆಲ್ಲಾ ತಮ್ಮ ಕಪ್ಪು ಹಣವನ್ನು [...] ಸ್ಥಿರಾಸ್ತಿಯಾಗಿ ಪರಿವರ್ತಿಸಿದ ಬಗ್ಗೆ ದಾ[...] ಪುರಾವೆಗಳು ಹೊರಬರುತ್ತಿವೆ ತಾನೇ. [...] ಆಸ್ಥಾನಪಂಡಿತರಾಗಿರುವ ಪೇಡ್ ಮೀಡಿಯಾ[...] ಸಾಮಾಜಿಕ ಜಾಲತಾಣಗಳಲ್ಲಿ ಕೇಜ್ರಿವಾಲ[...] ಗಾಂಧಿ, ಮಮತಾ ಬ್ಯಾನರ್ಜಿ ಮತ್ತು ಎಡಪ[...] ಮೋದಿ ಭಕ್ತರು ಎಷ್ಟೇ ಹಾಸ್ಯಾಸ್ಪದ [...] ಹೇಸಿದು ಅವಮಾನಕರ ಲೇಖನ ಬರೆ[...] ಸ್ವಂತ ಅನುಭವಕ್ಕೆ ಬಂದಿರುವ ಈಗಿನ ಭಾರಿ[...] ಆ ಕೀಳು ಜೋಕು-ಲೇವಡಿ- ಲೇಖನಗ[...] ಪರಿಣಾಮಕಾರಿ ಆಗಿದ್ದು ಅದು ಮತದಾರರ[...] ಮೇಲೆ ಪ್ರಭಾವ ಬೀರುವುದು ಖಂಡಿತ[...] ಇನ್ನು ಮುಂದೆ ಸಂಘಿಗಳ ಶಬ್ದಗಳ [...] ನೀಡಲಾರದು.

-ಆರ್.ಬಿ.ಶೇಣವ, [...]

ಇದು ಮೋದಿಯ ನೈತಿಕಪ[...] ತೋರಿಸುವುದಿಲ್ಲವೇ?


ಸರಕಾರ ರೂ. 500, ರೂ. 10[...] ಪಡೆದಾಗಿನಿಂದ ವಿಶೇಷವಾಗಿ ವಯಸ್ಸಾದ[...] ಸರತಿಯಲ್ಲಿ ನಿಂತು ತಮ್ಮದೇ ಹಣ [...] ಕಷ್ಟಪಡುತ್ತಿರುವ ಚಿತ್ರ ದೇಶಾದ್ಯಂತ ಸಾ[...]



ಬ್ಯಾಂಕ್ ನೌಕರರ ಸಂಘಟನೆ ಒಡೆಯಲು ಚೆಡ್ಡಿ ಮಸ[...]

ಇತ್ತೀಚೆಗೆ ನೋಟು ರದ್ದತಿಯ ನಂತರ ಬ್ಯಾಂಕ್ ನೌಕರರು ದಿನಕ್ಕೆ 12 ಗಂಟೆ ದುಡಿದು ಹೊಸ ನೋಟು ವಿನಿಮಯದಲ್ಲಿ ತೊಡಗಿಸಿಕೊಂಡಿದ್ದಕ್ಕೆ ಎಲ್ಲರೂ ಮೆಚ್ಚುಗೆ ಸೂಚಿಸಿದ್ದು ನಿಜ. ಆದರೆ ಮೋದಿಯ ಚೇಲಾಗಳದ್ದು ಎಲ್ಲೆಡೆ ಅತಿರಂಜಿತ ವರ್ತನೆ. ಚೆಡ್ಡಿಗಳು ಬ್ಯಾಂಕ್ ನೌಕರರನ್ನು ದೇಶದ ಗಡಿ ಕಾಯುವ ಯೋಧರಿಗೆ ಹೋಲಿಸಿ ವೈಭವೀಕರಿಸಿ ಮತ್ತೊಮ್ಮೆ ನಗೆಪಾಟಲಿಗೀಡಾಗಿದ್ದಾರೆ. ಚಕ್ರಮ್ ಪ್ರೋಲಿಬೆಲೆ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ನೋಟು ವಿನಿಮಯ ಅವಧಿ ಮುಗಿದನಂತರ ಜನವರಿ ಮೊದಲ ವಾರದಲ್ಲಿ ದೇಶದೆಲ್ಲೆಡೆ ಬ್ಯಾಂಕ್ ನೌಕರರನ್ನು ಸನ್ಮಾನಿಸುವ ಕಾರ್ಯಕ್ರಮ ಸಂಘ ಪರಿವಾರದ ಹಮ್ಮಿಕೊಂಡಿದೆ ಎಂದು ಹೇಳಿಕೆ ಕೊಟ್ಟಿದ್ದಾನೆ. ಬ್ಯಾಂಕ್ ನೌಕರರಿಗೆ ಒಂದು ದೊಡ್ಡ ಸಿಹಿ ಆಶ್ಚರ್ಯ ಕಾದಿದೆ ಎಂದೂ ಆಸೆ ಹುಟ್ಟಿಸಿದ್ದಾನೆ ಈ ಪ್ರೋಲಿಬೆಲೆ. ಬ್ಯಾಂಕ್ ನೌಕರರ ಬಗ್ಗೆ ಈ ಚೆಡ್ಡಿಗಳಿಗೆ ಒಮ್ಮೆಲೇ ಇಷ್ಟೊಂದು ಪ್ರೀತಿ ಯಾಕೆ ಹುಟ್ಟಿಕೊಂಡಿತು ಎಂದು ಕೆದಕಿದಾಗ ಗೊತ್ತಾಗಿದ್ದು ಏನೆಂದರೆ: ಈಗ ಆರು ಲಕ್ಷಕ್ಕೂ ಹೆಚ್ಚಿರುವ ರಾಷ್ಟ್ರೀಕೃತ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳ ಸಂಘಟನೆಗಳಲ್ಲಿ ಹೆಚ್ಚಿನವು ಕಮ್ಯುನಿಸ್ಟ್ ಪಕ್ಷಕ್ಕೆ ಸಲಗ್ನವಾದವುಗಳು. 1969 ರಲ್ಲಿ ದೊಡ್ಡ ಖಾಸಗಿ ಬ್ಯಾಂಕುಗಳನ್ನು ಇಂದಿರಾ ಗಾಂಧಿ ರಾಷ್ಟ್ರೀಕರಣ ಮಾಡಿದ ಮೇಲೆ ಬ್ಯಾಂಕ್ ನೌಕರರ ಹೆಚ್ಚಿನ ಎಲ್ಲಾ ಸಂಘಟನೆಗಳು ಎಡಪಕ್ಷದ ಕಾರ್ಮಿಕ ಸಂಘಟನೆಗಳ ಅಡಿ ಬಂದವು. ಅಂದಿನಿಂದಲೂ ಆರೆಸ್ಸೆಸ್ಸಿಗೆ ಸಲಗ್ನ ಭಾರತೀಯ ಮಜ್ದೂರ್ ಸಂಘ್ (ಬಿಎಮ್‌ಎಸ್) ಎಂಬ ಕಾರ್ಮಿಕ ಸಂಘಟನೆಯು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ತನ್ನ ಬೇರು ಊರಿಸಲು ಸತತ ಪ್ರಯತ್ನ ಮಾಡಿದ್ದರೂ ಅದು ಕಮ್ಯುನಿಸ್ಟ್ ಕಾರ್ಮಿಕ ಸಂಘಟನೆಗಳಿಂದ ಸದಸ್ಯರನ್ನು ಸೆಳೆಯುವಲ್ಲಿ ವಿಫಲವಾಗಿದೆ. ಕಾಂಗ್ರೆಸ್ಸಿನ 'ಇಂಟಕ್' ಕಾರ್ಮಿಕ ಸಂಘಟನೆ ಸಹ ಬ್ಯಾಂಕ್ ನೌಕರರಲ್ಲಿ ತನ್ನ ಅಸ್ತಿತ್ವ ಉಳಿಸಿಕೊಳ್ಳುವಲ್ಲಿ ಸೋಲುತ್ತಿದೆ. ಈಗ ಕೇಂದ್ರದಲ್ಲಿ ಬಿಜೆಪಿ ಸರಕಾರವೇ ಇರುವುದರಿಂದ ಹಾಗೂ ಪ್ರಕಾಶ್ ಜಾವಡೇಕರ್ ಎಂಬ ಒಬ್ಬ ಹಳೆಯ ಬ್ಯಾಂಕ್ ಕ್ಲಾರ್ಕ್ ಈಗ ಕೇಂದ್ರದಲ್ಲಿ ಸಚಿವನೂ ಆಗಿರುವುದರಿಂದ ಬಿಎಮ್‌ಎಸ್ ಸಂಘಟನೆ ಬ್ಯಾಂಕ್ ನೌಕರರ ಎಡಪಂಥೀಯ ಸಂಘಟನೆಗಳನ್ನು ಒಡೆದು ತನ್ನ ನೆಲೆ ಬಲಪಡಿಸುವ ನಿಟ್ಟಿನಲ್ಲಿ ಭಾರಿ ಗುಪ್ತ ಯೋಜನೆ ಹೊಂದಿದೆ.

ಎಲ್ಲರಿಗೂ ಗೊತ್ತಿರುವಂತೆ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲೂ ಶೇ.60 ನೌಕರರು ಮೇಲ್ಜಾತಿಯವರು. ಇವರಲ್ಲಿ ಬ್ರಾಹ್ಮಣರೇ ಅಧಿಕ. ಇವರು ಬಹಳ ಹಿಂದಿನಿಂದಲೂ ಹಿಂದೂತ್ವವಾದಿ ಒಲವು ಹೊಂದಿದವರು. ಯಾವಾಗಲೂ ಇವರು ಬ್ಯಾಂಕಿನಲ್ಲಿ ಸತ್ಯನಾರಾಯಣ ಪೂಜೆ, ಶನೇಶ್ವರ ಪೂಜೆ ಅಥವಾ ವಾಸ್ತು ಪ್ರಕಾರ ಕ್ಯಾಶ್ ಕೌಂಟರ್ ಮತ್ತು ಮ್ಯಾನೇಜರ್ ಕ್ಯಾಬಿನ್ನಿನ ದಿಕ್ಕು ಬದಲಿಸುವ ಕಾರ್ಯದಲ್ಲಿ ನಿರತರಾಗಿ ತಮ್ಮ ಪಕ್ಕಾ ವೈದಿಕ ಬುದ್ಧಿ ತೋರಿಸುತ್ತಲೇ ಇರುತ್ತಾರೆ. ಆದರೂ ಕಾರ್ಮಿಕ ಸಂಘಟನೆಯ ವಿಷಯ ಬಂದಾಗ ಮಾತ್ರ ಇವರು ಕಮ್ಯುನಿಸ್ಟ್ ಯೂನಿಯನ್ನಿನ ಸದಸ್ಯರಾಗುವ



ಅನಿವಾರ್ಯ ಸ್ಥಿತಿ ಇದೆ. ಹಾಗಾಗಿ ಈ ಮೇಲ್ಜಾತಿ ನೌಕರರ ಹಿಂದೂ[...] ಬಂಡವಾಳ ಮಾಡಿಕೊಂಡು ಈವರೆಗೂ ಬಿಎಮ್‌ಎಸ್ ತನ್ನ ಸದಸ್ಯತ್ವವ[...] ಸಾಧ್ಯವಾಗಿಲ್ಲ. ಆದರೆ ಈಗ ಆರ್‌ಎಸ್‌ಎಸ್/ಬಿಎಮ್‌ಎಸ್ ಹೊಂಚುಹಾಕಿ [...] ಈ ಮೇಲ್ಜಾತಿಯ ನೌಕರರನ್ನೆಲ್ಲ ತನ್ನ ತೆಕ್ಕೆಗೆ ಎಳೆಯಲು ಸಿದ್ಧತೆ ಮಾಡಿಕೊ[...] ಅದರಲ್ಲೂ ಕರ್ನಾಟಕ ಮೂಲದ ಕೆನರಾ, ಸಿಂಡಿಕೇಟ್ ಮತ್ತು ಕಾ[...] ಬ್ಯಾಂಕುಗಳಲ್ಲಿ ಈಗಲೂ ಹೆಚ್ಚಿನ ನೌಕರರು ಕರಾವಳಿಯ ಕೊಂಕಣಿ ಸಾರಸ್ವ[...] ಈ ಕೊಂಕಣಿ ನೌಕರರು ಬ್ಯಾಂಕಿನಲ್ಲಿ ಕಮ್ಯುನಿಸ್ಟ್ ಯೂನಿಯನ್ನಿನ [...] ಹೊರಗಡೆ ಮಾತ್ರ ಅವರು ನೂರಕ್ಕೆ ನೂರು ಆರೆಸ್ಸೆಸ್ ಆ[...] ಮಂಗಳೂರು-ಉಡುಪಿಯಲ್ಲಂತೂ ಈ ಕೊಂಕಣಿ ಬ್ಯಾಂಕ್ ನೌಕರರು ಪ್ರ[...] ತಪ್ಪದೇ ಆರೆಸ್ಸೆಸ್ ಶಾಖೆಗೆ ಹೋಗಿ ಚೆಡ್ಡಿ ಹಾಕಿಕೊಂಡು ಲಾಠಿ ತಿರುಗಿಸುವ[...] ಪಾಲ್ಗೊಳ್ಳುತ್ತಾರೆ. ಬ್ಯಾಂಕಿನ ದೈನಂದಿನ ಕೆಲಸದಲ್ಲಿಯಾಗಲೀ ಅಥವಾ[...] ಸಾಲಸೌಲಭ್ಯ ಕೊಡುವಾಗ ಆಗಲೀ ಇವರು ಆರೆಸ್ಸೆಸ್ ಸದಸ್ಯರಿಗೆ ಪ್ರಾಮು[...] ಕೊಡುತ್ತಾರೆ. ಬ್ಯಾಂಕ್ ನೌಕರನಾಗಿದ್ದ ನಾನು ಇದನ್ನು ನನ್ನ ಸರ್ವಿ[...] ಸೂಕ್ಷ್ಮವಾಗಿ ಗಮನಿಸಿದ್ದೇನೆ.

ಈಗ ಮಾಜಿ ಬ್ಯಾಂಕ್ ಉದ್ಯೋಗಿ ಹಾಗೂ ಹಾಲಿ ಕೇಂದ್ರ ಸ[...] ಜಾವ್ಡೇಕರ್ ನೇತೃತ್ವದಲ್ಲಿ ಸಂಘಿಗಳು ಗುಟ್ಟಾಗಿ ಈ ಹಿಂದೂತ್ವ ಒಲವ[...] ಬ್ಯಾಂಕ್ ನೌಕರರನ್ನು ತಮ್ಮ ಕಡೆ ಸೆಳೆದುಕೊಂಡು ತಮ್ಮ ಬಿಎಮ್‌ಎಸ್ [...] ಗುಪ್ತ ಯೋಜನೆ ಹೊಂದಿರುವುದು ಬೆಳಕಿಗೆ ಬಂದಿದೆ. ಕೊಂಕಣಿಗ, ಬ್ರಾ[...]



...ಹುಲ್ ಗಾಂಧಿ ಕೂಡ ಸಾಮಾನ್ಯರಂತೆ ಸರತಿಯಲ್ಲಿ ...ತು ವ್ಯವಹರಿಸುವ ರೀತಿನಲ್ಲಿ ಕಳೆದ ವಾರ ಬ್ಯಾಂಕ್‌ನಲ್ಲಿ ...ಣ ಪಡೆದದ್ದನ್ನು ರಾಜಕೀಯ ಪ್ರೇರಿತ ಎಂದು ಕೆಲವು ...ಧ್ಯಮಗಳಲ್ಲಿ ಟೀಕಿಸಲಾಗಿತ್ತು, ಆದರೆ ನಿನ್ನೆ ಪ್ರಧಾನಿ ...ೋದಿಯವರ 96 ವರುಷದ ತಾಯಿಯವರು ಬ್ಯಾಂಕ್‌ಗೆ ...ಂದು ಹಣ ಪಡೆದುದನ್ನು ಬಿಜೆಪಿ ರಾಜಕೀಯ ಲಾಭಕ್ಕಾಗಿ ...ನ್ನಬಹುದೇ?

ಅಥವಾ ಮೋದಿಯವರ ತಾಯಿಯ ಪರಿಸ್ಥಿತಿ ಅಥವಾ ...ೇಶದಲ್ಲಿ ಅವರ ತರಹದ ಅನೇಕ ಹಿರಿಯರ ಸ್ಥಿತಿ ಆ ...ೀತಿಯದ್ದಾಗಿದ್ದಲ್ಲಿ ಅದಕ್ಕೆ ಕಾರಣರಾದವರ ನೈತಿಕ ಪತನವನ್ನು ...ೋರಿಸುವುದಿಲ್ಲವೇ?

-ಲಕ್ಷ್ಮಣ ನಾಯ್ಕ್, ಬೆಳಗಾವಿ

ತುಘಲಕ್ ಮೋದಿ ತಂದಿಟ್ಟಿರುವ ಅವಾಂತರಗಳು

ತುಘಲಕ್ ಮೋದಿಯು ತನ್ನ ತೆವಲಿಗಾಗಿ 500 ...ತ್ತು 1000 ರೂಪಾಯಿಗಳ ನಿಷೇಧ ಮಾಡಿ ದೇಶದ ...ಡ ಮತ್ತು ಮಧ್ಯಮ ಜನವರ್ಗದ ಜೀವನದ ಜೊತೆ



...ಲ್ಲಾಟವಾಡಿದ್ದಾರೆ. ನೋಟು ನಿಷೇಧದ ದಿನದಿಂದ ...ಮಾರು 10 ದಿನಗಳ ಕಾಲ ದೇಶದ ಆರ್ಥವ್ಯವಸ್ಥೆಯೇ ...ಬ್ಧವಾಗಿತ್ತೆಂದೇ ಹೇಳಬಹುದು. ದೇಶದ ಮುಂದಿನ ...ವಿಷ್ಯವೇನು ಎಂದು ವಿವೇಕವುಳ್ಳವರು ಚಿಂತೆಗೀಡಾಗಿದ್ದಾರೆ.

ಇಂದಿನ ದಿನಗಳಲ್ಲಿ ಶೇಕಡ 80 ರಿಂದ 90ರಷ್ಟು ...ಪ್ಪುಹಣ ಬೇನಾಮಿ ಹೆಸರಿನಲ್ಲಿ ಭೂಮಿ, ಬೆಳ್ಳಿ-ಬಂಗಾರ, ...ತರೆ ಸ್ಥಿರ ಸ್ವತ್ತುಗಳ ರೂಪದಲ್ಲಿದೆ. ಕೇವಲ ಶೇಕಡ 10 ...ಿಂದ 20 ರಷ್ಟು ಮಾತ್ರ ಇದು ಕೆಲವೇ ಕೆಲವು ಜನರಲ್ಲಿ ...ಗದು ರೂಪದಲ್ಲಿದೆ. ಮೊದಲಿಗೆ ಬೇನಾಮಿ ಆಸ್ತಿವಂತರನ್ನು, ...ಪ್ಪು ಹಣವುಳ್ಳವರನ್ನು ಶಿಕ್ಷಿಸುವ ಕಾನೂನಿನ ಹಿಡಿತಕ್ಕೆ ...ಿಕ್ಕಿಸದೆ ಇವರಿಗೆ ಯೋಚಿಸಿ ದಾರಿಕಂಡುಕೊಳ್ಳಲು ಮುಕ್ತ ...ವಕಾಶ ಮಾಡಿಕೊಟ್ಟು ಅಸಹಾಯಕ ಕೂಲಿಕಾರ್ಮಿಕರು,

...ೌಕರರು ಕೇಂದ್ರದಲ್ಲಿ ಬಿಜೆಪಿ ಸರಕಾರ ಬಂದಮೇಲೆ ...ಹಿರಂಗವಾಗಿ ಬಿಎಮ್‌ಎಸ್ ಕಡೆ ಒಲವು ತೋರಿಸು...ದ್ದಾರೆ. ಇದನ್ನು ಮುಂದಿನ ಜನವರಿಯಲ್ಲಿ ನಗದೀಕರಿಸಲು ...ೊಡ್ಡ ಮಟ್ಟದಲ್ಲಿ ಒಂದು ಕಾರ್ಯಕ್ರಮ ಹಮ್ಮಿಕೊಂಡು ...ಜಾರಿಟಿ ಬ್ಯಾಂಕ್ ನೌಕರರನ್ನು ಬಿಎಮ್‌ಎಸ್‌ಗೆ ಸೆಳೆದು ...ಮ್ಯುನಿಸ್ಟ್ ನೌಕರರ ಸಂಘಟನೆಯನ್ನು ಮುರಿಯುವ ಪ್ಲಾನ್ ...ಡಿಯಾಗಿದೆ. ಅದಕ್ಕೆ ಮೊದಲು ಬ್ಯಾಂಕ್ ನೌಕರರಿಗೆ ...ಂಪರ್ ಬೋನಸ್ಸನ್ನು ಬಿಜೆಪಿ ಸರಕಾರ ಘೋಷಿಸಲಿದೆ. ...ದನ್ನೇ ಚಕ್ರವರ್ತಿ ಫೋಲಿಬೆಲೆ ಬ್ಯಾಂಕ್ ನೌಕರರಿಗೆ ...ಹಿಯಾದ ಆಶ್ಚರ್ಯ ಕಾದಿದೆ ಎಂದು ಮೊನ್ನೆ ...ೇಳಿರುವುದು. "ಕಣ್ಣಾಮುಚ್ಚೇ ಕಾಡೇಗೂಡೇ, ನಮ್ಮಯ ...ಕ್ಕು ಬಚ್ಚೆ ಬಚ್ಚೆ ನಿಮ್ಮಯ ಹಕ್ಕಿ ರಕ್ಷಿಸಿಕೊಳ್ಳಿ ಕಮ್ಯುನಿಸ್ಟರೇ" ...ಂದು ಚೆಡ್ಡಿಗಳು ಈಗ ಕಮ್ಯುನಿಸ್ಟರಿಗೆ ಚಾಲೆಂಜ್ ...ೊಟ್ಟಾಗಿದೆ. ಹಾಗಾಗಿಯೇ ಈಗ ಬ್ಯಾಂಕ್ ನೌಕರರನ್ನು ...ಡ್ಡಿಗಳು ವಿಪರೀತ ಹೊಗಳುತ್ತಿರುವುದು ಒಂದು ...ನೋವೈಜ್ಞಾನಿಕ ತಂತ್ರ ಅಷ್ಟೇ. ಈ ಚಕ್ರವರ್ತಿ ಫೊಲೀಬೆಲೆ ...ರಡು ತಿಂಗಳ ಹಿಂದೆ ಪುತ್ತೂರಿನ ಅಂಬಿಕಾ ಕಾಲೇಜಿನ ...ಂದು ಸಮಾರಂಭದಲ್ಲಿ ನೋಟು ರದ್ದತಿಯ ಬಗ್ಗೆ ...ರೋಕ್ಷವಾಗಿ ಜನರಿಗೆ ಸೂಚನೆ ಕೊಟ್ಟಿದ್ದ, ಇದರ ಅರ್ಥ ...ವನಿಗೆ ಸಂಘಿಗಳ ಒಳವಲಯದಿಂದ ನೋಟು ರದ್ದತಿಯ ...ಮಾಹಿತಿ ಎರಡು ತಿಂಗಳ ಮೊದಲೇ ಗುಟ್ಟಾಗಿ ಸಿಕ್ಕಿತ್ತು ...ಇದರ ವಿಡಿಯೋ ಆ ಕಾಲೇಜಿನ ವಿದ್ಯಾರ್ಥಿಗಳಲ್ಲಿ ...ದೆಯಂತೆ). ಅದೇ ರೀತಿ ಜನವರಿಯ ನಂತರ ಬ್ಯಾಂಕ್ ...ೌಕರರಿಗೆ ಸಿಗಲಿರುವ ಬಂಪರ್ ಬೋನಸ್ ಮತ್ತು ನೌಕರ ...ಂಘಟನೆಗಳ ಒಡೆಯುವಿಕೆಯ ಆಟ ಬರಲಿದೆ ...ಂಬುದನ್ನೂ ಅವನು ಸೂಚ್ಯವಾಗಿ ಈಗಲೇ ಹೇಳಿದ್ದಾನೆ ...ಷ್ಟೇ. ನೋಟು ರದ್ದತಿಯ ವಿಷಯದಲ್ಲಿ ಭಯಂಕರ ...ಷ್ಟಕ್ಕೆ ಒಳಗಾಗಿರುವ ಬ್ಯಾಂಕ್ ನೌಕರ ಸಂಘಟನೆಯ ...ನಾಯಕರು ಪ್ರತಿಭಟಿಸದೇ ಬಾಯಿ ಮುಚ್ಚಿ ಕುಳಿತಿರುವುದು ...ವರೂ ಬಿಎಮ್‌ಎಸ್‌ನೊಂದಿಗೆ ಗುಪ್ತಒಪ್ಪಂದ ...ೊಂದಿರುವುದಕ್ಕೆ ಸಾಕ್ಷಿ. ಸಂಬಂಧಪಟ್ಟವರು ಇದನ್ನು ...ರ್ಥ ಮಾಡಿಕೊಂಡರೆ ಉತ್ತಮ.

-...ರೀಶ್ ಎಂ ರೈ, ಉಡುಪಿ

ಸಣ್ಣ ವ್ಯಾಪಾರಿಗಳು 500 ಮತ್ತು 1000 ರೂಪಾಯಿಗಳನ್ನು ಮುಟ್ಟದಂತೆ ಮಾಡಿ, ಮಧ್ಯಮ ವರ್ಗದವರು ಬ್ಯಾಂಕಿನಿಂದ ತಮ್ಮ ಹಣವನ್ನು ಪಡೆಯಲು ಹರಸಾಹಸ ಮಾಡುವಂತೆ, ಕೆಲವರು ಈ ಪ್ರಯತ್ನದಲ್ಲಿ ಪ್ರಾಣಬಿಡುವಂತೆ ಮಾಡಲಾಗಿದೆ. ಬಡವರು ಹೊಟ್ಟೆಹಸಿವು ನೀಗಿಸಿಕೊಳ್ಳಲು ಕೆಲವು ಕಡೆ ಆಹಾರ ವಸ್ತುಗಳನ್ನೇ (ಜೋಳ ಕೊಟ್ಟು ತರಕಾರಿ ಪಡೆದಿರುವುದು) ಬದಲಾಯಿಸಿಕೊಂಡು ಜೀವ ಉಳಿಸಿಕೊಳ್ಳುತ್ತಿದ್ದಾರೆ. ಈ ಮೋದಿಯ ಜನವಿರೋಧಿ ಕ್ರಮದ ಸತ್ಯವನ್ನು ಅರಿತಿರುವ ಕೆಲವು ಪ್ರಜ್ಞಾವಂತ ನಾಗರಿಕರು ಈ ಅನ್ಯಾಯವನ್ನು, ಖಂಡಿಸದೇ ದ್ವಂದ್ವ ನಿಲುವನ್ನು ತಾಳಿದ್ದಾರೆ. ತೊಂದರೆ ತಮ್ಮ ಬುಡಕ್ಕೆ ಬಂದಾಗ ಮಾತ್ರ ಇವರಿಗೆ ಅರಿವಾಗಬಹುದೇನೋ?

- ಹೆಚ್.ಕೆ.ಈರಪ್ಪ, ಬೆಂಗಳೂರು

ಹುಲಿಯ ಚರಿತ್ರೆ ಹುಲಿಯೆ ಬರೆಯಬೇಕು, ಬೇಟೆಗಾರನಲ್ಲ

ಉಡುಪಿ ಕೃಷ್ಣ ಮಠದ ಕನಕನ ಕಿಂಡಿ ಮತ್ತು ಕನಕದಾಸರ ಬಗ್ಗೆ ನನಗೆ ಅನಿಸೋದು ಏನಂದ್ರೆ... ಕನಕನ ಕಿಂಡಿಯು ಕನಕರ ಭಕ್ತಿಗೆ ಕೃಷ್ಣ ಮೆಚ್ಚಿ ಉಲ್ಟಾ ತಿರುಗಿ, ಬಂಡೆ ಸಿಡಿದು ಬಿದ್ದ ಕಿಂಡಿ ಅಲ್ಲ, ಬದಲಾಗಿ ಕನಕದಾಸರು ಪುರೋಹಿತಶಾಹಿಗಳ ವಿರುದ್ಧ ದೇವಸ್ಥಾನಕ್ಕೆ ಪ್ರವೇಶ ಮಾಡಲು ಹೋರಾಡಿ ಪ್ರತಿಭಟಿಸಿದರ ಫಲ ಈ ಕಿಂಡಿ.

ಪ್ರಾಯಶಃ ಕನಕದಾಸರ ಹೋರಾಟಕ್ಕೆ ಮಣಿದು "ಓಕೆ ನಾವು ನಿಮಗೆ ದೇವರನ್ನು ನೋಡಲು ಅವಕಾಶ ಕೊಡ್ತೀವಿ. ಆದ್ರೆ ಒಂದು ಕಿಂಡಿ ಮೂಲಕ ಹೊರಗಿನಿಂದ ಮಾತ್ರ ನೋಡಿಕೊಂಡು ಹೋಗಬೇಕು" ಅಂತ ಆ ಕಿಂಡಿ ಮೂಲಕ ಕೃಷ್ಣನ ಮೂರ್ತಿಯ ಮುಖವನ್ನು ತಿರುಗಿಸಿ ದೇವಸ್ಥಾನದ ಆಗಿನ ಆಡಳಿತವರ್ಗ ಕನಕರಿಗೆ ತೋರಿಸಿರಬೇಕು. ಆಗಿನಿಂದ ಶೂದ್ರ ವರ್ಗವು ಸಿಕ್ಕ ಆ ಚಿಕ್ಕ ಅವಕಾಶದಲ್ಲಿಯೇ ದೇವರನ್ನು ನೋಡಿ ತೃಪ್ತಿಪಡ್ತಾ ಬಂದಿರಬಹುದು.



ಆದರೆ ಕನಕರ ಈ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ನಡೆದ ಪ್ರತಿಭಟನೆಯನ್ನು ಇತಿಹಾಸದಲ್ಲಿ 'ಕನಕನಕಿಂಡಿ' ಎಂದು ಅದಕ್ಕೆ ಬೇರೆಯದೆ ಬಣ್ಣ ಹಚ್ಚಿ 'ಕನಕರ ಪ್ರತಿಭಟನೆಗೆ ಕನಕನ ಭಕ್ತಿ' ಎಂದು ಹೆಸರಿಟ್ಟು ಬಂಡಾಯಗಾರರಾದ ಅವರನ್ನು ದಾಸ ಎಂದು ಬಿಂಬಿಸುತ್ತಾ ಬಂದರು.

ಆ ಮೂಲಕ ಕನಕರ ಬಂಡಾಯ ಮನಸ್ಥಿತಿಯು ಯಾರಿಗೂ ಬಾರದಂತೆ, ಬಂದರೂ ಕನಕರ ಬಗ್ಗೆ ಕಟ್ಟಿಕೊಟ್ಟ ಈ ಕಥೆ ಕೇಳಿ ದೇವರ ಹೆಸರಲ್ಲಿ ಪುರೋಹಿತಶಾಹಿಗಳ ಗುಲಾಮ/ದಾಸರಾಗುವಂತೆ ಜನರನ್ನು ನಿಯಂತ್ರಿಸುತ್ತಾ ಬರಲಾಗಿದೆ.


ದಾಸ ಶ್ರೇಷ್ಠ ಎಂಬ ಪದವೇ 'ಗುಲಾಮಗಿರಿಯೆ ಶ್ರೇಷ್ಠ' ಎಂದು ಪರೋಕ್ಷವಾಗಿ ಹೇಳುತ್ತೆ. ಅಂದರೆ ವರ್ಣಾಶ್ರಮದನ್ವಯ ವೈದಿಕತ್ವದ ಮೌಲ್ಯಗಳಿಗೆ ದೇವರ ಹೆಸರಲ್ಲಿ, ಶ್ರೇಷ್ಠತೆಯ ಹೆಸರಲ್ಲಿ, ಕಾಯಕದ ಹೆಸರಲ್ಲಿ ಶೂದ್ರ ಮತ್ತು ತಳ ಸಮುದಾಯಗಳು ದಾಸರಾಗಿ/ಗುಲಾಮರಾಗಿರಬೇಕು ಅದೂ ಕೂಡ ಯಾರು ಬಲವಂತ ಮಾಡದಂತೆ. ಹಾಗಾಗಿ ದೇವರ, ಭಕ್ತಿಯ ಹೆಸರಲ್ಲಿ ಗುಲಾಮಗಿರಿಯಲ್ಲಿ ಬದುಕಲು, ಅದರಲ್ಲೆ ಎಂಜಾಯ್ ಮಾಡಲು, ಆ ಗುಲಾಮತ್ವವನ್ನೆ ಸಂಸ್ಕೃತಿ ಎಂದು ಧರ್ಮವೆಂದು ಹೆಮ್ಮೆ ಪಡುವಂತೆ ಮಾಡಲು ಕೆಲ ಹಿತಾಸಕ್ತಿಗಳು ಈ ದೇಶದ ಬಹುಜನರ ಮೇಲೆ ಇತಿಹಾಸದುದ್ದಕ್ಕೂ ಬೇರೆ ಬೇರೆ ಕಥೆ ಹೆಣೆದು ಕೊಟ್ಟಿದ್ದಾರೆ.

ಒಮ್ಮೆ ನರಿ ಬುದ್ಧಿಯ ಬೇಟೆಗಾರ ಹುಲಿ ಬೇಟೆಯಾಡಲು ಅರಣ್ಯಕ್ಕೆ ಹೋದ. ಹುಲಿ ಕಂಡು ಬಾಣ ಹೂಡಿದ. ಹುಲಿ ಚಾಣಾಕ್ಷತನದಿಂದ ತಪ್ಪಿಸಿಕೊಂಡಿತಲ್ಲದೆ ಬೇಟೆಗಾರನಿಗೆ ಮೇಲೇಳದಂತೆ ಬಲವಾದ ಹೊಡೆತ ಕೊಟ್ಟಿತು. ಆಮೇಲೆ ಆತ ಹುಲಿಯನ್ನು ಕೊಂದಿರುವುದಾಗಿ ಚರಿತ್ರೆಯಲ್ಲಿ ದಾಖಲಿಸತೊಡಗಿದ. ಆದರೆ ಅವನಿಗೆ ಹೊಡೆತ ನೀಡಿ ತಪ್ಪಿಸಿಕೊಂಡಿದ್ದ ಹುಲಿಯು ತನ್ನ ಚರಿತ್ರೆಯನ್ನು ದಾಖಲಿಸಲಿಲ್ಲ! ಅಂದಮಾತ್ರಕ್ಕೆ, ಹುಲಿಗೆ ಚರಿತ್ರೆಯೇ ಇಲ್ಲವೆಂದಾಯಿತೆ?

-ಪ್ರಶಾಂತ್ ದಾನಪ್ಪ, ರಾಯಚೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಬಿಂಡಿಗನವಿಲೆಯಿಂದ ಒಂದು ಪತ್ರ



ಆತ್ಮೀಯ ಶ್ರೀಮತಿ ಗೌರಿ ಲಂಕೇಶ್‌ರವರೇ,

ತಮ್ಮ ತಂದೆಯವರಾದ ಶ್ರೀ ಲಂಕೇಶ್‌ರವರು ನನಗೆ ಇಂಗ್ಲಿಷ್ ಲೆಕ್ಚರರ್ ಆಗಿದ್ದವರು. ನಾನು 1963-64ರ ಮತ್ತು 1965-66ರ ಮಧ್ಯೆ ಆಗಿನ ಗೌರ್ನಮೆಂಟ್ಸ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ನಮ್ಮ ತರಗತಿಗೆ ಹಾಸನ್ ರಾಜಾರಾವ್‌ರವರು ಬರೆದಿರುವ 'ಕಾಂತಪುರ' ಎಂಬ ಕಾದಂಬರಿಯನ್ನು ಪಾಠ ಮಾಡಲು ಬರುತ್ತಿದ್ದರು. ಆಗ ಅವರೊಡನೆ ನಮ್ಮ ಒಡನಾಟ ಎಂದು ತಮಗೆ ತಿಳಿಸಲು ಹರ್ಷಿಸುತ್ತೇನೆ.

ತಮ್ಮ ಗೌರಿ ಲಂಕೇಶ್ ಪತ್ರಿಕೆಯ 9-11-2016ರ ಸಂಚಿಕೆಯಲ್ಲಿ ಆತ್ಮೀಯ ಮಿತ್ರರಾದ ಶ್ರೀ ಬಿ.ಚಂದ್ರೇಗೌಡರು ಬರೆದಿರುವ 'ಬಿಂಡಿಗನವಿಲೆಗೆ ಬಂದ ಬೆಳಕು' ಎಂಬ ಲೇಖನವನ್ನು ಪ್ರಕಟಿಸಿದ್ದಕ್ಕೆ ತಮಗೆ ಆಭಾರಿಯಾಗಿದ್ದೇನೆ.

ಶ್ರೀ ಬಿ. ಚಂದ್ರೇಗೌಡರು ಆ ಲೇಖನದಲ್ಲಿ ಸೂಚಿಸಿರುವ ಮಹನೀಯರಲ್ಲದೆ ಇನ್ನೂ ಅನೇಕ ಮಹನೀಯರು ದೇಶ ಹಾಗೂ ವಿದೇಶಗಳಲ್ಲಿ ನಾನಾ ಹುದ್ದೆಗಳನ್ನು ನಿರ್ವಹಿಸಿ ಪ್ರಸಿದ್ಧರಾಗಿದ್ದಾರೆ.

ಇತ್ತೀಚೆಗೆ ನಿಧನರಾದ 99 ವರ್ಷಗಳನ್ನು ದಾಟಿದ್ದ ಬಿ.ಕೆ. ಗರುಡಾಚಾರ್ ಎಂಬುವರು ಕ್ರಿಕೆಟ್ ಗರುಡಾಚಾರ್ ಎಂದೇ ಪ್ರಸಿದ್ಧರಾಗಿ ರಣಜಿ ಕ್ರಿಕೆಟ್‌ನಲ್ಲಿ ಮೂರು ರಾಜ್ಯಗಳನ್ನು ಪ್ರತಿನಿಧಿಸಿದ್ದರು.

ಮತ್ತೋರ್ವ ಕೈಗಾರಿಕೋದ್ಯಮಿ ಗರುಡಾಚಾರ್ ಎಂಬುವರು ಬಹಳ ವರ್ಷಗಳ ಹಿಂದೆ ಕೊಲ್ಕತ್ತಾಗೆ ಹೋಗಿ ಅಲ್ಲಿ ಕಲ್ಕತ್ತಾನವಿಲೆ ಎಂದೇ ಪ್ರಸಿದ್ಧರಾಗಿದ್ದರು.

ಕರ್ನಾಟಕ ಸರ್ಕಾರದ ಡಿಜಿಪಿ ಆಗಿದ್ದ ಶ್ರೀ ಬಿ.ಎನ್. ಗರುಡಾಚಾರ್ ಅವರ ಪುತ್ರ ಉದಯ್ ಗರುಡಾಚಾರ್ ಸಹ ಉದ್ಯಮಿಯಾಗಿದ್ದು, "ಗರುಡ ಸೆಕ್ಯೂರಿಟೀಸ್'ನಲ್ಲಿ ಬಿಂಡಿಗನವಿಲೆ ಹೋಬಳಿ ಹಾಗು ನಾಗಮಂಗಲ ತಾಲ್ಲೂಕಿನ ಅನೇಕರಿಗೆ ಅವರ ಕಂಪನಿಯಲ್ಲಿ ಕೆಲಸ ಕೊಟ್ಟಿದ್ದಾರೆ.

ಮತ್ತೋರ್ವ ದಂಪತಿಗಳಾದ ಶ್ರೀಮತಿ ಬಿ.ಆರ್. ವಸುಧಾ ಹಾಗೂ ಶ್ರೀ ಬಿ.ಆರ್. ವಾಸುಕಿ ಎಂಬುವರು ಸಿದ್ಧಪಡಿಸುವ ವಸ್ತ್ರಗಳ ಕಾರ್ಖಾನೆ ಮಾಲೀಕರಾಗಿದ್ದು ಸಾವಿರಾರು ಜನರಿಗೆ ಕೆಲಸ ಕೊಟ್ಟಿದ್ದು, ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಕೊಂಡಿದ್ದಾರೆ.

ಬಿಂಡಿಗನವಿಲೆಯ ಅನೇಕ ಮಹನೀಯರು 1976ನೇ ಇಸವಿಯಲ್ಲಿ 'ಬಿಂಡಿಗನವಿಲೆ ಶ್ರೀ ವೈನತೇಯ ಭಕ್ತಮಂಡಳಿ' ಎಂಬ ಸಂಘವನ್ನು ಸ್ಥಾಪಿಸಿ ತನ್ಮೂಲಕ ದೇವಸ್ಥಾನದ ಕಾರ್ಯಕ್ರಮಗಳು ಹಾಗೂ ಗ್ರಾಮದ ಉದ್ಧಾರಕ್ಕಾಗಿ ಶ್ರಮಿಸಿದ್ದು, ಈಗ ನಾವೆಲ್ಲರೂ ಅಂದರೆ ಅಧ್ಯಕ್ಷರಾದ ನಾನು ಮತ್ತು ನನ್ನ ಸಂಘದವರು ಈ ಸಂಘದ ಆಶ್ರಯದಲ್ಲಿ ಗ್ರಾಮೋದ್ಧಾರದಲ್ಲಿ ಸಂಬಂಧಿಸಿದಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದೇವೆ. ಅದರಲ್ಲಿ ಇತ್ತೀಚೆಗೆ ಈಗಾಗಲೇ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವಂತೆ ಬಿಂಡಿಗನವಿಲೆ ಹೋಬಳಿಯ ಎಲ್ಲ ಸರ್ಕಾರಿ ಶಾಲೆಗಳಿಗೆ ಸೋಲಾರ್ ಸ್ಟಡಿ ಲ್ಯಾಂಪ್ ಕೊಡುವ ಕಾರ್ಯಕ್ರಮವನ್ನು ಆಯೋಜಿಸಿದ್ದು, ಅಲ್ಲದೆ ಗ್ರಾಮಸ್ಥರ ಆರೋಗ್ಯದ ಹಿತದೃಷ್ಟಿಯಿಂದ ವೈದ್ಯಕೀಯ ಶಿಬಿರಗಳನ್ನೂ ಕೂಡ ಏರ್ಪಡಿಸಲಾಗುತ್ತಿದೆ. ಅಲ್ಲದೆ ಹೋಬಳಿ ಮತ್ತು ತಾಲ್ಲೂಕಿನ ಮಟ್ಟದಲ್ಲಿ ಕ್ರೀಡಾ ಪ್ರಪಂಚದಲ್ಲಿ ಪ್ರತಿನಿಧಿಸುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ ಹಾಗೂ ಏಳನೇ ತರಗತಿ ಎಸ್‌ಎಸ್‌ಎಲ್‌ಸಿ ಮತ್ತು ಎರಡನೇ ಪಿಯುಸಿಯಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

ನಾನು ಕೇವಲ ನಿಮಿತ್ತ ಮಾತ್ರ. ನಮ್ಮ ಮೇಲ್ಕಂಡ ಸಂಘದ ಎಲ್ಲ ಕಾರ್ಯಕ್ರಮಗಳಿಗೂ ಬಿಂಡಿಗನವಿಲೆ ದೇವಸ್ಥಾನದ ಭಕ್ತರು ಪ್ರೋತ್ಸಾಹ ನೀಡುತ್ತಿದ್ದು, ಅವರು ನೀಡುವ ಧನಸಹಾಯದಿಂದ ಈ ಎಲ್ಲ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೇವೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ನನ್ನ ಪಾತ್ರ ಬಹಳ ಕಿರಿದು. ಆದರೂ ಮಿತ್ರರಾದ ಶ್ರೀ ಬಿ.ಚಂದ್ರೇಗೌಡರು ನನ್ನ ಬಗ್ಗೆ ಬಹಳಷ್ಟು ಬರೆದಿರುವುದಕ್ಕೆ ನಾನು ಅವರಿಗೂ ಸಹ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಗ್ರಾಮಗಳಲ್ಲಿ ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳಿಗೆ ರಾತ್ರಿಯ ಸಮಯದಲ್ಲಿ ಬೆಳಕಿನ ಅವಶ್ಯಕತೆ ಬಹಳಷ್ಟು, ನಾವು ಈಗ ನೀಡುತ್ತಿರುವ ಸೋಲಾರ್ ಸ್ಟಡಿ ಲ್ಯಾಂಪ್ ಬಹಳಷ್ಟು ಉಪಯೋಗಕ್ಕೆ ಬರುತ್ತಿದೆ ಎಂದು ಶಾಲಾ ಮಕ್ಕಳು ಹಾಗೂ ಉಪಾಧ್ಯಾಯರು ತಿಳಿಸುತ್ತಿದ್ದಾರೆ. ಇಂಥಾ ಒಂದು ಯೋಜನೆ ತಾಲ್ಲೂಕಿನ ಮಟ್ಟದಲ್ಲಿಯೂ ಆಗಬೇಕು ಎಂಬುದು ನಮ್ಮ ಕಳಕಳಿ.

ಇಂತಹ ಸಾಮಾಜಿಕ ಕಾರ್ಯಕ್ರಮಗಳ ಬಗ್ಗೆ ಕಳಕಳಿ ಇರುವಂತಹ ನಮ್ಮ ರಾಜ್ಯದ ನಾಗರಿಕರು ಇದಕ್ಕೆ ಸ್ಪಂದಿಸಬೇಕೆಂದು ನನ್ನ ಅನಿಸಿಕೆ. ಈ ಕಾರ್ಯಕ್ರಮಕ್ಕೆ ಧನಸಹಾಯ ಮಾಡುವವರು ದಯವಿಟ್ಟು ನನ್ನ ಮೊಬೈಲ್ ಸಂಖ್ಯೆ: 94490 72906ಗೆ ಸಂಪರ್ಕಿಸಬೇಕಾಗಿ ಕೋರುತ್ತೇನೆ.

ದಯವಿಟ್ಟು ಈ ಪತ್ರವನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಕೋರುತ್ತೇನೆ.

ತಮ್ಮ ವಿಶ್ವಾಸಿ
- ಬಿಂಡಿಗನವಿಲೆ ನಾರಾಯಣಸ್ವಾಮಿ.
ಅಧ್ಯಕ್ಷರು

Registered No.RNP/KA/BGS/2036/2014-16 Posted at :Bangalore, PSO, Mysore Road BG-560026 Thursday R B P LANKESH, Kannada Weekly 07-12-2016 RNI No. KARKAN2005/1



ದರ್ಶನ್ ಚಿತ್ರಕ್ಕೆ ಶ್ರುತಿ ನಾಯಕಿ

'ಊರ್ವಿ', 'ಮತ್ತೆ ಹುಟ್ಟಿ ಬಾ', 'ಉಪೇಂದ್ರ' ಸೇರಿದಂತೆ ಈಗಾಗಲೇ ನಾಲ್ಕೈದು ಸಿನಿಮಾಗಳ ಶೂಟಿಂಗ್‌ನಲ್ಲಿ ಬಿಜಿ ಆಗಿರುವ ಶ್ರುತಿ ಹರಿಹರನ್, ಈಗ ಮತ್ತೊಂದು ಚಿತ್ರಕ್ಕೆ ಸಹಿ ಮಾಡಿದ್ದಾರೆ. ಆ ಸಿನಿಮಾಗೆ ನಾಯಕ ದರ್ಶನ್ ಅನ್ನುವುದು ವಿಶೇಷ. ದರ್ಶನ್ ಜತೆ ತೆರೆ ಹಂಚಿಕೊಳ್ಳಲು ನಾಯಕಿಯರು ಸಾಲು ಸಾಲು ನಿಲ್ಲುವುದಿದೆ. ಆದರೆ, ಶ್ರುತಿಗೆ ಇದು ಬಯಸದೇ ಬಂದ ಭಾಗ್ಯವಂತೆ. ಅದರಲ್ಲೂ ದರ್ಶನ್ ಅವರ 49ನೇ ಚಿತ್ರವಾದ್ದರಿಂದ ಸಂಭ್ರಮ ಪಡುತ್ತಿದ್ದಾರೆ ಶ್ರುತಿ ಹರಿಹರನ್. ಈ ಚಿತ್ರವನ್ನು 'ಮಿಲನ' ಚಿತ್ರ ಖ್ಯಾತಿಯ ಪ್ರಕಾಶ್ ನಿರ್ದೇಶನ ಮಾಡುತ್ತಿದ್ದಾರೆ. ಇಬ್ಬರು ನಾಯಕಿಯರು ಚಿತ್ರದಲ್ಲಿದ್ದಾರೆ. ಕೌಟುಂಬಿಕ ಕತೆಯನ್ನು ನಿರ್ದೇಶಕರು ಈ ಚಿತ್ರಕ್ಕಾಗಿ ಆಯ್ಕೆ ಮಾಡಿಕೊಂಡಿದ್ದು ಶ್ರುತಿ ಅವರು ದರ್ಶನ್ ಅವರ ಪತ್ನಿಯ ಪಾತ್ರದಲ್ಲಿ ನಟಿಸಲಿದ್ದಾರಂತೆ. ಈ ಹಿಂದೆ ಶ್ರುತಿ ಅವರು ದರ್ಶನ್ ಅವರ ಅಭಿಮಾನಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದರಂತೆ. ಈಗ ಅವರ ಜತೆ ನಾಯಕಿಯಾಗಿ ನಟಿಸುತ್ತಿರುವುದಕ್ಕೆ ಹೆಮ್ಮೆ ಅನಿಸುತ್ತಿದೆಯಂತೆ. ಈಗಾಗಲೇ ಶ್ರುತಿ ವಿಭಿನ್ನ ಪಾತ್ರ ಮತ್ತು ಸಿನಿಮಾಗಳ ಮೂಲಕ ಗುರುತಿಸಿಕೊಂಡಿರುವ ನಟಿ. ಸ್ಟಾರ್ ನಟರ ಅಬ್ಬರದಲ್ಲಿ ಅವರ ಅಭಿನಯ ಕಳೆದುಹೋಗುತ್ತದಾ ಅಥವಾ ಅಲ್ಲಿಯೂ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಲು ಅವಕಾಶ ಸಿಗುತ್ತಾ ಕಾದು ನೋಡಬೇಕು.

ಖಾಕಿತೊಟ್ಟ ವಿನೋದ್ ಪ್ರಭಾಕರ್

'ಟೈಸನ್' ಚಿತ್ರದಲ್ಲಿ ಖಾಕಿ ತೊಟ್ಟಿದ್ದ ವಿನೋದ್ ಪ್ರಭಾಕರ್, ಚಿತ್ರದ ನಟನೆಗಾಗಿ ಪ್ರಶಂಸೆಯನ್ನೂ ಪಡೆದಿದ್ದರು. ಹಾಗಾಗಿ ಮತ್ತೆ ಅದೇ ಖಾಕಿಯಲ್ಲಿ ಪ್ರೇಕ್ಷಕರ ಮುಂದೆ ನಿಲ್ಲುತ್ತಿದ್ದಾರೆ. 'ಟೈಸನ್' ಸಿನಿಮಾದ ನಿರ್ದೇಶಕ ಕೆ.ರಾಮ್‌ನಾರಾಯಣ್ 'ಕ್ರ್ಯಾಕ್' ಹೆಸರಿನಲ್ಲಿ ಮತ್ತೊಂದು ಚಿತ್ರವನ್ನು ನಿರ್ದೇಶಿಸುತ್ತಿದ್ದು ಈ ಸಿನಿಮಾದಲ್ಲೂ ವಿನೋದ್‌ಗೆ ಖಾಕಿ ಹಾಕಿಸಿದ್ದಾರೆ. ಇಲ್ಲಿ ವಿನೋದ್ ಸ್ಪೆಷಲ್ ಆಫೀಸರ್ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. 'ಕ್ರ್ಯಾಕ್' ಎಂಬ ಟೈಟಲ್ ಇಟ್ಟಿದ್ದರೂ, 'ಇವನೇ ಸಪರೇಟ್ ಟ್ರ್ಯಾಕ್' ಎಂಬ ಟ್ಯಾಗ್‌ಲೈನ್ ಚಿತ್ರಕ್ಕಿಟ್ಟಿದ್ದಾರೆ ನಿರ್ದೇಶಕರು. ಹಾಗಾಗಿ ಚಿತ್ರದಲ್ಲಿ ಹತ್ತು ಹಲವು ವಿಶೇಷತೆಗಳು ಇವೆಯಂತೆ. ಘಟನೆಯೊಂದರ ಬೆನ್ನತ್ತುವ ಅಧಿಕಾರಿ ತಾನೇ ಆ ಘಟನೆಯಲ್ಲಿ ಸಿಲುಕಿಕೊಳ್ಳುತ್ತಾನೆ. ಎಷ್ಟೇ ಕಷ್ಟವೆನಿಸಿದರೂ, ಆ ಪ್ರಕರಣವನ್ನು ಬೇಧಿಸುತ್ತಾನಂತೆ. ಅದು ಹೇಗೆ ಅನ್ನುವುದೇ ಚಿತ್ರವಂತೆ. ಸದ್ದಿಲ್ಲದೇ ಸಿನಿಮಾದ ಶೂಟಿಂಗ್ ಕೂಡ ಶುರುವಾಗಿದೆ. ಸದ್ಯ ಬೆಂಗಳೂರಿನ ಸುತ್ತಮುತ್ತ ಚಿತ್ರೀಕರಣ ನಡೆಯುತ್ತಿದೆ. ಚಿನ್ನ ಮತ್ತು ಶಮಿತಾ ಮಲ್ನಾಡ್ ಅವರ ಸಂಗೀತ ನಿರ್ದೇಶನದಲ್ಲಿ ಹಾಡುಗಳು ತಯಾರಾಗುತ್ತಿವೆ.

ಪುನೀತ್ ಚಿತ್ರಕ್ಕೆ ಹರ್ಷ ನಿರ್ದೇಶಕ

ಶಿವರಾಜ್‌ಕುಮಾರ್ ನಟನೆಯ 'ಭಜರಂಗಿ' ಸೇರಿದಂತೆ ಹಲವು ಚಿತ್ರಗಳಿಗೆ ಆ್ಯಕ್ಷನ್ ಕಟ್ ಹೇಳಿರುವ ನಿರ್ದೇಶಕ ಹರ್ಷ, ಈಗ ಪುನೀತ್ ರಾಜ್‌ಕುಮಾರ್ ನಟನೆಯ ಹೊಸ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಅಣ್ಣನ ಚಿತ್ರದ ನಂತರ ತಮ್ಮನ ಚಿತ್ರಕ್ಕೆ ನಿರ್ದೇಶನ ಮಾಡಲು ಅವಕಾಶ ಸಿಕ್ಕಿದ್ದರಿಂದ ಸಹಜವಾಗಿಯೇ ಅವರು ಸಂಭ್ರಮದಲ್ಲಿದ್ದಾರೆ. ಎಲ್ಲವೂ ಅಂದುಕೊಂಡಂತೆ ಆಗಿದ್ದರೆ ಈ ಚಿತ್ರಕ್ಕೆ ದರ್ಶನ್ ನಾಯಕನಾಗಬೇಕಿತ್ತು, ಬುಲೆಟ್ ಪ್ರಕಾಶ್ ನಿರ್ಮಾಣದಲ್ಲಿ ಚಿತ್ರ ಮೂಡಿಬರಬೇಕಿತ್ತು, ದರ್ಶನ್ ಸಹೋದರ ದಿನಕರ್ ಮತ್ತು ಬುಲೆಟ್ ಪ್ರಕಾಶ್ ಮಧ್ಯೆ ಜಟಾಪಟಿ ಆದಕಾರಣ, ದರ್ಶನ್ ಬದಲಿಗೆ ಪುನೀತ್ ನಟಿಸಬೇಕಾಗಿದೆ. ಬುಲೆಟ್ ಸ್ಥಾನಕ್ಕೆ ಕುಮಾರ್ ಬಂದಿದ್ದಾರೆ. ನಾಯಕ ಮತ್ತು ನಿರ್ಮಾಪಕರ ಬದಲಾವಣೆಯೊಂದಿಗೆ ಈ ಸಿನಿಮಾ ಸೆಟ್ಟೇರಲಿದೆ. ಇದು ತಮಿಳಿನ 'ಪೂಜೈ' ಸಿನಿಮಾದ ರಿಮೇಕ್ ಚಿತ್ರ. ಕೆಲವು ಬದಲಾವಣೆಗಳೊಂದಿಗೆ ಈ ಚಿತ್ರವನ್ನು ಕನ್ನಡಕ್ಕೆ, ತರಲಿದ್ದಾರಂತೆ ನಿರ್ದೇಶಕರು. ತುಂಬಾ ಬದಲಾವಣೆ ಮಾಡಿಕೊಂಡಿದ್ದರಿಂದಲೇ ಪುನೀತ್ ಈ ಚಿತ್ರ ಮಾಡಲು ಒಪ್ಪಿಕೊಂಡಿದ್ದಾರಂತೆ.

ಪ್ರಥಮ ಬಾರಿಗೆ ಬುಲೆಟ್ ಶಾಟ್ ದೃಶ್ಯ



ಬಾಲಿವುಡ್‌ನ 'ಬಾಯ್ಸ್', 'ದಬಾಂಗ್ 2' ಸೇರಿದಂತೆ ಹಲವು ಚಿತ್ರಗಳಲ್ಲಿ ಬುಲೆಟ್ ಶಾಟ್ ದೃಶ್ಯಗಳಿವೆ. ಅಂತಹ ಸಾಹಸದ ದೃಶ್ಯವನ್ನು ಕನ್ನಡದ ಚಿತ್ರಕ್ಕಾಗಿ ಸಂಯೋಜನೆ ಮಾಡಿದ್ದಾರೆ ತರುಣ್ ಸುಧೀರ್. 'ಚೌಕ' ಸಿನಿಮಾದಲ್ಲಿ ಪ್ರಮುಖವಾದ ಸಾಹಸ ಸನ್ನಿವೇಶವಿದ್ದು ಅದನ್ನು ಬುಲೆಟ್ ಶಾಟ್ ಮಾದರಿಯಲ್ಲಿ ಸೆರೆ ಹಿಡಿದಿದ್ದಾರೆ. 24 ಸೆಕೆಂಡ್‌ನ ಈ ದೃಶ್ಯವನ್ನು ಮೂರು ದಿನಗಳ ಕಾಲ ಶೂಟಿಂಗ್ ಮಾಡಿದ್ದಾರಂತೆ ನಿರ್ದೇಶಕರು. ಒಟ್ಟು ಐವತ್ತು ಕ್ಯಾಮೆರಾಗಳು ಇದಕ್ಕಾಗಿ ಕೆಲಸ ಮಾಡಿವೆ. ಸಿಂಗಪೂರ್ ಕಂಪೆನಿಯೊಂದು ಕ್ಯಾಮೆರಾಗಳನ್ನು ಕಳುಹಿಸಿಕೊಟ್ಟಿದೆ. "ಬಾಲಿವುಡ್‌ನಲ್ಲಿ ಈಗಾಗಲೇ ಈ ಮಾದರಿಯಲ್ಲಿ ಚಿತ್ರೀಕರಣ ಮಾಡಿದ್ದು, ಇದೇ ಮೊದಲ ಬಾರಿಗೆ ಕನ್ನಡದಲ್ಲಿ ಬಳಸುತ್ತಿದ್ದೇವೆ. 14 ಮಂದಿ ನುರಿತ ಸಿನಿಮಾಟೋಗ್ರಾಫರ್‌ಗಳು ಈ ಶಾಟ್‌ಗಾಗಿ ಕೆಲಸ ಮಾಡಿದ್ದಾರೆ. ಇದಕ್ಕಾಗಿ ಮೂವತ್ತು ಲಕ್ಷ ರೂಪಾಯಿ ಖರ್ಚಾಗಿದೆ" ಅಂತಾರೆ ನಿರ್ದೇಶಕರು.

ಒಂದೊಂದು ಡಿಗ್ರಿ ಅಂತರದಲ್ಲಿ ಕ್ಯಾಮೆರಾಗಳನ್ನು ಸೆಟ್ ಮಾಡಲಾಗಿತ್ತಂತೆ. ಕ್ಯಾಮೆರಾಗಳನ್ನು ಹೊಂದಿಸುವುದಕ್ಕಾಗಿಯೇ ನಾಲ್ಕು ಗಂಟೆಗಳ ಸಮಯ ಬೇಕಾಗಿತ್ತಂತೆ. ಈ ದೃಶ್ಯವನ್ನು ಶೂಟ್ ಮಾಡಲು ಒಂದು ಕ್ಯಾಮೆರಾ ಬಳಸಿದರೆ, ಕಲಾವಿದರನ್ನು ಹಗ್ಗಕ್ಕೆ ಕಟ್ಟಿ ಗಾಳಿಯಲ್ಲಿ ತೇಲಿ ಬಿಡಬೇಕು. ಕಲಾವಿದನ ಸುತ್ತ ಕ್ಯಾಮೆರಾ ಸುತ್ತಬೇಕಂತೆ. ಆದರೆ, ಅದು ಬುಲೆಟ್ ಶಾಟ್ ರೀತಿಯಲ್ಲಿ ಸಂಯೋಜವೆ ಆಗದ ಕಾರಣ, ನೇರವಾಗಿ ಬುಲೆಟ್ ಶಾಟ್‌ಗೆ ಮೊರೆ ಹೋಗಿದ್ದಾರಂತೆ ನಿರ್ದೇಶಕರು.

ರಿಸ್ಕಿ ಸ್ಟಂಟ್‌ಗೆ ಜೈ ಅಂದ ಅನು

ಕಿರುತೆರೆಯಲ್ಲಿ ಸ್ಟಾರ್ ನಿರೂಪಕಿಯಾಗಿ ಮಿಂಚುತ್ತಿರುವ ಅನು
'ಉಪ್ಪು ಹುಳಿ ಖಾರ' ಎಂಬ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಈ
ಅವರು ಸಾಹಸ ಸನ್ನಿವೇಶದಲ್ಲೂ ಕಾಣಿಸಿಕೊಂಡು ಅಚ್ಚರಿ ಮೂ
ಇದೇ ಮೊದಲ ಬಾರಿಗೆ ಇಂತಹ ದೃಶ್ಯದಲ್ಲಿ ಭಾಗವಹಿಸಬೇಕಿದ್ದ ಬ
ಅವರು ಚಿತ್ರೀಕರಣಕ್ಕೆ ತೆರಳಿದ್ದರಂತೆ.

ಆ್ಯಕ್ಷನ್ ಚಿತ್ರಗಳೆಂದರೆ ಭಯ ಪಡುತ್ತಿದ್ದ ಅನುಶ್ರೀ, ಸ್ಟಂಟ್
ಒಪ್ಪಿಕೊಂಡಿದ್ದು ನಿರ್ದೇಶಕ ಇಮ್ರಾನ್ ಸರ್ದಾರಿಯಾ ಒತ್ತಾಯಕ್ಕೆ
ಸಾಹಸ ನಿರ್ದೇಶಕ ಮಾಸ್‌ಮಾದ ಇವರಿಗೆ ಧೈರ್ಯ ತುಂಬಿದ
ಸಾಹಸ ದೃಶ್ಯವನ್ನು ನಿರ್ದೇಶಿಸಿದ್ದು ಮಾಸ್‌ಮಾದ. ಈ ದೃಶ್ಯವ
ರೀತಿಯಲ್ಲಿ ಕಂಪೋಸ್ ಮಾಡಿದ್ದಾರಂತೆ ಸ್ಟಂಟ್ ಮಾಸ್ಟರ್. ಚಿತ್ರದ
ಶರತ್, ಅನುಶ್ರೀ ಮತ್ತು ಎಂಟತ್ತು ಸಾಹಸ ಕಲಾವಿದರು ಈ
ಕಾಣಿಸಿಕೊಂಡಿದ್ದಾರೆ. ಪಲ್ಟಿ ಹೊಡೆಯುವುದು, ಜಂಪ್ ಮಾಡಿ
ಒದೆಯುವುದು ದೃಶ್ಯದ ಹೈಲೆಟ್. ರೋಪ್ ಕಟ್ಟಿ ಮೇಲಕ್ಕೆ
ಭಯದಲ್ಲಿ ಚೇರಿದರಂತೆ ಅನುಶ್ರೀ. ಗಾಳಿಯಲ್ಲಿ ತೇಲುತ್ತಲೇ
ಅವರನ್ನು ನೆನಪಿಸಿಕೊಂಡರಂತೆ.

ಈ ದೃಶ್ಯವನ್ನು ನಿರ್ದೇಶಕರು ಬೆಂಗಳೂರಿನ ಪದ್ಮನಾಭನಗರದ ಚಿತ್ರಮಂದಿರವೊಂದರಲ್ಲಿ ಚಿತ್ರೀಕರಿಸಿದ್ದಾರೆ. ಇದು ಚಿತ್ರದ ಪ್ರಮುಖ ದೃಶ್ಯ ಕೂಡ ಆಗಿದೆಯಂತೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667642
Fax : 26604536, E-mail :lankesh70@rediffmail.com